
# ಅಪರಂಜಿ

ತಿಳಿನಗೆಯ ಕಾರಂಜಿ ನವೆಂಬರ್ 2016



**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 34
ಸಂಚಿಕೆ – 2
ನವೆಂಬರ್ – 2016

## *ಈ ಸಂಚಿಕೆಯಲ್ಲಿ .....*

| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಶಬ್ದಬೀಜಾಸುರ ಪ್ರಕರಣ | **ವತ್ಸಲ** | 3 |
| ಕಳ್ಳತನ ಮತ್ತು ಅನಂತರ | **ಸುಕೇಶವ** | 9 |
| ಅಪ್ಪ ಎನ್ನುವ ಆಲದಮರ | **ಗುಂಡುರಾವ್ ದೇಸಾಯಿ** | 10 |
| ಮೀನೆಂಬ ಸನ್ಯಾಸಿ.... | **ಸುಷ್ಮಾ ನಿವಾಳ್ಕರ್** | 15 |
| ಧರೆಗಿಳಿದ ಕೈಲಾಸ | **ರತ್ನಾ ಮಣೂರ** | 17 |
| ಕುರಿಗಳು... | **ನಂದಿನಿ ಕಾಪಡಿ** | 18 |
| ಇಟ್ಟ ಹೆಜ್ಜೆಯ ಛಾಪು | **ಬೇಲೂರು ರಾಮಮೂರ್ತಿ** | 26 |
| ತುಂತುರು | **ದಂನಾಳ** | 29 |
| ಮೂವರು ಶ್ರೀ....... | **ಕೆ.ಎಲ್. ರಾಮದಾಸ್** | 30 |
| ಪರಮೇಶಿಯ ಕಂತೆ.... | **ವೈ.ಎನ್. ಗುಂಡೂರಾವ್** | 32 |
| ಅಣ್ಣಾವ್ರ ಅಭಿಮಾನಿ | **ವೈ.ಎಂ. ರಘುನಂದನ್** | 36 |
| ಇಲ್ಲಿರುವುದು ಸುಮ್ಮನೆ.. | **ಎಂ.ಕೆ. ಭಾಸ್ಕರ ರಾವ್** | 39 |

**ಮುಖಪುಟ ವ್ಯಂಗ್ಯಚಿತ್ರ – ಗುಜ್ಜಾರ್**

ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● **ಪ್ರಕಾಶ್**



ಒಂದೇ ನಿವೇಶನ ಮೂವರಿಗೆ ಹಂಚಿಕೆ! – ಬಿ.ಡಿ.ಎ. ಸುದ್ದಿ

***● ಪ್ರಜಾ ಪ್ರಭುತ್ವದ ಕರಾಳ ಉದಾಹರಣೆ !?***

★★★

ಕ್ರಿಕೆಟ್‌ಗಿಂತ ಬಿ.ಸಿ.ಸಿ.ಐ. – ಲೋಧಾ

***● ಪಂದ್ಯ ಕುತೂಹಲಕರವಾಗಿದೆ !!***

★★★

ಕಾವೇರಿ ಕಣ್ಣೀರು ಕಾಣಲು ಬಂದ ಕೇಂದ್ರ ತಜ್ಞರ ತಂಡ – ಪತ್ರಿಕೆ

***● ಆಹಾ, ಶೀರ್ಷಿಕೆ ಅಂದರೆ ಹೀಗಿರಬೇಕು !!***

★★★

ಕಪ್ಪು ಹಣ; ವಾರದಲ್ಲಿ ನಿಖರ ಮಾಹಿತಿ – ಸುದ್ದಿ

***● ಆಕ್ಸಿ – ಮೊರಾನ್ ಎಂದರೆ ಇದೇ !!***

★★★

ಉಗ್ರರಿಗೆ ರಕ್ಷಣೆ ಕೊಡಬೇಡಿ – ಷರೀಫ್ ಹೇಳಿಕೆ

***● ಯಾವ ಷರೀಫ್ ಸ್ವಾಮಿ ?!***

★★★

ಪಾಕೀಸ್ತಾನ – ರಷ್ಯಾ ಜಂಟಿ ಸೇನಾ ಸಮರಾಭ್ಯಾಸ ಶೀಘ್ರ – ಸುದ್ದಿ

***● ಹಾಗಲಕಾಯಿ – ಬೇವಿನಕಾಯಿ !!***

★★★

ಭಾಷಾ ಅಲ್ಪಸಂಖ್ಯಾತ ವೈದ್ಯಕೀಯ ಕಾಲೇಜುಗಳಿಗೆ ತರಾತುರಿಯ ಕೌನ್ಸಲಿಂಗ್ – ಪತ್ರಿಕೆ

***● ಭಾವೀ ರೋಗಿಗಳು ಎಚ್ಚರವಾಗಿರಬೇಕು !!***

★★★

'ರಾಹುಲ್ ಗಾಂಧಿಯವರ ಹೇಳಿಕೆಗಳಿಂದ ಮರುಕಗೊಳ್ಳಬೇಕು, ಕೋಪಕ್ಕೆ ಎಡೆಯಿಲ್ಲ' ಅಂತ ಅಪರಂಜಿ ಪಲುಕಿದಳಂತೆ !!

★★★



# ಶಬ್ದಬೀಜಾಸುರ ಪ್ರಕರಣ

**- ವತ್ಸನ**

**ಹಿಂ**ದೊಮ್ಮೆ ಇಂದ್ರಲೋಕದಿಂದ ಸಾಕ್ಷಾತ್ ದೇವೇಂದ್ರನೇ ನಮ್ಮ ಫ್ಲಾಟಿಗೆ ಬಂದು ತನ್ನ ಸಾರಥಿ ಮಾತಲಿಯನ್ನು ಹುಡುಕಲು ಶರಲೇಖನ ಸಹಾಯ ಕೋರಿದ ಪ್ರಸಂಗ ನಿಮಗೆ ನೆನಪಿರಬಹುದು. ಆ ಸಂದರ್ಭದಲ್ಲಿ ಹೊರಗೆ ಹೋಗಿದ್ದ ನಾವಿಬ್ಬರೂ ಮನೆಯೊಳಗೆ ಬರುವ ಹೊತ್ತಿಗೆ ಒಬ್ಬ ಆಸಾಮಿ ಡೈನಿಂಗ್ ಹಾಲಿನಲ್ಲಿ ಸೋಫಾದ ಮೇಲೆ ಕುಳಿತಿದ್ದ. ಯಾವ್ದಾದರೂ ಪೌರಾಣಿಕ ನಾಟಕದಲ್ಲೋ ಸಿನಿಮಾದಲ್ಲೋ ಶ್ರೀಮನ್ಮಹಾವಿಷ್ಣುವಿನ ಪಾತ್ರಾನ ನೀವು ನೋಡಿರ್ಬಹುದಲ್ವೇ. ಹಳದಿ ಬಣ್ಣದ ಜರತಾರಿ ಅಂಚಿನ ಪಂಚೆ, ಅದೇ ಬಣ್ಣದ ಉತ್ತರೀಯ, ಮಿರಮಿರನೆ ಹೊಳೆಯುತ್ತಿರುವ ಕಿರೀಟ, ತೋಳಿಗೆ ಭುಜಕೀರ್ತಿ, ಕೈಯ್ಯಲ್ಲಿ ಸಿಗರೇಟ್, ಬೆಳ್ಳಿಯ ವಜ್ರಾಯುಧ ಇವನ್ನೆಲ್ಲಾ ಧರಿಸಿದ್ದ ವ್ಯಕ್ತಿಯನ್ನು ಶರಲೇಖ ನೋಡಿದ ತಕ್ಷಣ ತನ್ನ ಪಾಟೀಸವಾಲು ಪ್ರಾರಂಭಿಸಿದ.

''ಮೊದಲಿಗೆ ನಿಮ್ಮ ಹೆಸರು?''

''ಪುರಂದರ''

''ಊರು?''

''ಇಂದ್ರಲೋಕ''

''ಓಹೋ, ಇಂದ್ರಲೋಕ, ನಿಮ್ಮ ರಾಜ ದೇವೇಂದ್ರ ಕ್ಷೇಮವಾಗಿದ್ದಾರೆ ತಾನೆ?'' ಪ್ರಶ್ನೆಯ ವ್ಯಂಗ್ಯ ಆಗಂತುಕನನ್ನು ತಾಗಿದಂತೆ ಕಾಣಲಿಲ್ಲ.

''ನಾನೇ ದೇವೇಂದ್ರ''

''ಮತ್ತೆ ಈಗತಾನೇ ಪುರಂದರ ಅಂತ ಹೇಳಿದ್ರಿ''

''ಇಂದ್ರ, ದೇವೇಂದ್ರ ಅನ್ನೋದೆಲ್ಲಾ ಆ ಅಧಿಕಾರದ ಹೆಸರು. ನೀವು ಮುಖ್ಯಮಂತ್ರಿ, ಪ್ರಧಾನಿ ಅನ್ನೋಲ್ಲವೇ, ಹಾಗೆ. ನನ್ನ ಹೆಸರು ಪುರಂದರ, ಕಾಶ್ಯಪ ಮುನಿ ನನ್ನ ತಂದೆ, ಅದಿತಿ ದೇವಿ ನನ್ನ ತಾಯಿ. ನನ್ನ ಪತ್ನಿ ಶಚೀದೇವಿ. ಈಗ ನನ್ನ ಸಮಸ್ಯೆ ಬಗ್ಗೆ ಪ್ರಸ್ತಾಪಿಸಬಹುದೇ?''

ನನಗೆ ಶರಲೇಖನ ಬಗ್ಗೆ ಯಾವಾಗಲೂ ಮೆಚ್ಚುಗೆ ಏಕೆಂದರೆ, ಆತ ಯಾವುದೇ ಪರಿಸ್ಥಿತಿಯಲ್ಲೂ ತನ್ನ ಫೋಕಸ್ ತಪ್ಪೋದಿಲ್ಲ. ಆಗಂತುಕನ ಈ ಮಾತುಗಳನ್ನು ಕೇಳಿ ಶರಲೇಖ ನೇರವಾಗಿ ಮುಂಬಾಗಿಲಿಗೆ ಹೋಗಿ ಬಾಗಿಲನ್ನು ಮುಚ್ಚಿ ಬೀಗ ಹಾಕಿದ. ಆಮೇಲೆ ಆಗಂತುಕನನ್ನು ಕುರಿತು,

''ನಿಮ್ಮ ಸಮಸ್ಯೆ ಬಗ್ಗೆ ನಾನು ಕೇಳಿಸಿಕೊಳ್ಳುವುದಕ್ಕೆ ಮುಂಚೆ ನೀವು ಯಾರು ಅನ್ನೋದು ನನಗೆ ಖಾತರಿ ಆಗಬೇಕು. ನೀವು ದೇವಲೋಕದಿಂದ ಬಂದ ದೇವತೆಯೇ ಆಗಿದ್ದರೆ ನೀವು

ಕೂತಿರೋ ಸೋಫಾದಿಂದ ಅಂತರ್ಧಾನರಾಗಿ ಬಾಗಿಲಿನ ಹೊರಗೆ ಮತ್ತೆ ಪ್ರತ್ಯಕ್ಷರಾಗಿ ಕರೆಗಂಟೆ ಒತ್ತಿ. ಹಾಗೆ ಮಾಡಲು ನಿಮಗೆ ಸಾಧ್ಯವಾದರೆ ನನ್ನ ಕೈಲಾದಷ್ಟು ಮಟ್ಟಿಗೆ ನಿಮ್ಮ ನೆರವಿಗೆ ಬರುತ್ತೇನೆ. ಹಾಗಾಗದಿದ್ದರೆ, ನಿಮ್ಮನ್ನು ಯಾವುದಾದರೂ ಮನೋವೈದ್ಯರ................''

ಶರಲೇಖ ತನ್ನ ಮಾತನ್ನು ಮುಗಿಸುವುದಕ್ಕೆ ಮುಂಚೆಯೇ ಆಗಂತುಕ ಮಾಯವಾಗಿದ್ದ. ಬಾಗಿಲ ಕರೆಗಂಟೆ ಮತ್ತೆ ಕಿಚುಗುಟ್ಟಿತು. ನಾನೇ ಹೋಗಿ ಬಾಗಿಲು ತೆಗೆದೆ. ಹೊರಗೆ ನಿಂತಿದ್ದ ಇಂದ್ರದೇವನನ್ನು ಒಳಕ್ಕೆ ಕರೆದು ಪುನಃ ಅದೇ ಸೋಫಾದಮೇಲೆ ಆತನನ್ನ ಪ್ರತಿಷ್ಠಾಪಿಸಿದೆವು.

ಇದೆಲ್ಲಾ ಆದನಂತರ ಇಂದ್ರದೇವ ತಾನು ಬಂದ ಕಾರಣವನ್ನು ತಿಳಿಸಿ ಹಿಂದಕ್ಕೆ ಹೋಗುವ ಮುಂಚೆ ''...................... ಇಗೋ ನನ್ನ ಈ ದೇವದಂಡವನ್ನ ಈ ಬಡುವಿನ ಮೇಲೆ ಇಟ್ಟಿರುತ್ತೇನೆ ನಿಮಗೆ ನಾನು ಇಲ್ಲಿ ಬರಬೇಕಾದಾಗ ಸುಮ್ಮನೆ ನನ್ನನ್ನು ನೆನೆದರೆ ಸಾಕು, ಈ ದೇವದಂಡದ ಮೂಲಕ ಆ ಸುದ್ದಿ ನನಗೆ ಮುಟ್ಟಿ ಒಡನೆಯೇ ನಾನಿಲ್ಲಿಗೆ ಬರುವೆ'' ಎಂದು ಹೇಳಿ ಅಂತರ್ಧಾನನಾಗಿದ್ದ. ಆಮೇಲೆ ಶರಲೇಖ ತನ್ನ ಪತ್ತೇದಾರಿ ಸಾಮರ್ಥ್ಯದಿಂದ ಅವನ ಸಾರಥಿಯನ್ನು ಹುಡುಕಿಕೊಟ್ಟದ್ದೇ ಒಂದು ಬಹು ಸ್ವಾರಸ್ಯವಾದ ಕಥಾನಕ.

ಇದೆಲ್ಲಾ ನಡೆದು ತಿಂಗಳುಗಳೇ ಕಳೆದಿದ್ದವು. ಈಗ ಯಾಕೆ ಇದನ್ನೆಲ್ಲಾ ಹೇಳಕ್ಕೆ ಬಂದೆ ಅಂದರೆ, ಮೊನ್ನೆ ಕನ್ನಡ ರಾಜ್ಯೋತ್ಸವದ ದಿನ ಬೆಳಗ್ಗೆ ನಾವಿಬ್ಬರೂ ಉಪಹಾರದ ನಂತರ ಪೇಪರ್ ಓದುತ್ತಾ ಕುಳಿತಿರುವಾಗ ಬಡುವಿನ ಮೇಲಿದ್ದ ಆ ದೇವದಂಡ ಪಟಪಟನೆ ಅಲುಗಾಡಲು ಪ್ರಾರಂಭಿಸಿತು. ''ಏನಪ್ಪಾ ಈ ವಿಚಿತ್ರಾ!'' ಅಂತ ಆ ಕಡೆ ಕಣ್ಣುಹಾಯಿಸುವ ಹೊತ್ತಿಗೆ ಬಾಗಿಲ ಕರೆಗಂಟೆ ರಿಂಗಾಯಿತು. ನಾನೇ ಹೋಗಿ ಬಾಗಿಲು ತೆಗೆದೆ. ಮತ್ತೆ ದೇವೇಂದ್ರ! ಅದೇ ವಿಚಿತ್ರ ವೇಷ! ಜೊತೆಯಲ್ಲಿ ಒಬ್ಬ ಸೆಕ್ಯೂರಿಟಿ ಗಾರ್ಡಿನಂತೆ ಕಾಣುತ್ತಿದ್ದ ಕರಾಳ ಮೀಸೆಯ ಧಡೂತಿ ವ್ಯಕ್ತಿ ಬೇರೆ! ಇಬ್ಬರೂ ಒಳಕ್ಕೆ ಬಂದು ಕುಳಿತರು. ದೇವೇಂದ್ರನೇ ಪ್ರಾರಂಭಿಸಿದ.

''ನೋಡಿ ಶರಲೇಖ ಮತ್ತು ವತ್ಸನ ಅವರೇ, ಸಂಗತಿ ಬಹು ತುರ್ತಿನದ್ದಾಗಿರೋದರಿಂದ ಬಹುದಿನಗಳ ಭೇಟಿಯ ನಂತರದ ಉಭಯಕುಶಲೋಪರಿಯನ್ನು ಮಾತನಾಡಿದ್ದಾಯಿತೆಂದು ಭಾವಿಸಿ ಮುಂದುವರಿಯುವೆ. ನಾನು ಅಧಿಪತಿಯಾಗಿರುವ ದೇವಲೋಕದಂತೆ ಒಂದು ದಾನವಲೋಕವೂ ಇದೆ. ಇವರು ಆ ಲೋಕದ ಮುಖ್ಯಮಂತ್ರಿ. ಸುವರ್ಣಾಕ್ಷ ಇವರ ಹೆಸರು. ಇವರಿಗೆ ಒಂದು ದೊಡ್ಡ ಸಮಸ್ಯೆ ಉಂಟಾಗಿದೆ. ನೀವೇ ಇದನ್ನ ಪರಿಹರಿಸಬಲ್ಲಿರಿ ಎಂಬ ದೃಢವಿಶ್ವಾಸದಿಂದ ಇವರನ್ನು ಇಲ್ಲಿಗೆ ಕರೆತಂದಿದ್ದೇನೆ. ಇವರು ರಾಕ್ಷಸಕುಲದವರಾದ್ದರಿಂದ ಮಾತುಕತೆಯಲ್ಲಿ ನಯಗಾರಿಕೆ ಕಾಣಿಸದಿರಬಹುದು. ಆದರೆ ವ್ಯಕ್ತಿ ನಿಜಕ್ಕೂ ಅಪರಂಜಿ. ದಯವಿಟ್ಟು ಅವರ ಸಮಸ್ಯೆ ಪರಿಹರಿಸಿರೆಂದು ವಿನಂತಿಸುವೆ'' ಎಂದು ಹೇಳಿ ಉತ್ತರಕ್ಕೂ ಕಾಯದೆ ದೇವೇಂದ್ರ ಅಂತರ್ಧಾನನಾದ.

''ಈ ದೇವಲೋಕದವರೇ ಹೀಗೆ! ನನಗೆ ನಯಗಾರಿಕೆ ಇಲ್ಲವಂತೆ. ಬಿರುಗಾಳಿಯಂತೆ ಭರ್‍ರನೆ ಬಂದು ನಿಮ್ಮ ಉತ್ತರಕ್ಕೂ ಕಾಯದೇ ಬಡಬಡನೆ ನಾಲ್ಕು ಮಾತನಾಡಿ ಓಡಿಹೋದ ಅವನಿಗೆ ಇದೆಯಲ್ಲವೇ ಬಹಳ ನಯಗಾರಿಕೆ!'' ಎಂದಿತು ಆ ಧಡೂತಿ ವ್ಯಕ್ತಿ. ಬಂದವನೇ ಮಾತು ಮುಂದುವರಿಸಲೆಂದು ಶರಲೇಖ ಏನೂ ಪ್ರತಿಕ್ರಿಯಸದೇ ಸುಮ್ಮನಿದ್ದ. ಸುವರ್ಣಾಕ್ಷನೇ ಮುಂದುವರಿಸಿದ.

''ಕ್ಷಮಿಸಿ ಶರಲೇಖ ಅವರೇ, ದೇವದಾನವರ ಪರಸ್ಪರ ದ್ವೇಷ ಎಂದಿಗೂ ಇದ್ದದ್ದೇ. ಹಾಗಾಗಿ ಬದಲಾಗಿರುವ ಈ ಕಾಲದಲ್ಲೂ ಹಳೆಯ ಪ್ರವೃತ್ತಿಗಳು ಹೆಡೆಯೆತ್ತುತ್ತವೆ. ನನಗೆ ಒದಗಿರುವ ಕಷ್ಟಕ್ಕೆ ಸಹಾಯಹಸ್ತ ನೀಡಿದವನೇ ಈ ಪುರಂದರ. ಈಗ ನನ್ನ ಸಮಸ್ಯೆಯನ್ನು ನಿಮ್ಮ ಮುಂದಿಡಬಹುದೇ?'' ಎಂದು ಸುವರ್ಣಾಕ್ಷ ಕೇಳಿದ.

ಶರಲೇಖ ಪ್ರಾರಂಭಿಸಿದ. ''ಮೊದಲು ನನ್ನದೊಂದು ಸಂದೇಹ ಪರಿಹರಿಸಿ. ನಂಜುಂಡೇಶ್ವರ ನಮ್ಮ ಮನೆದೇವರು. ಸಮುದ್ರಮಥನದಲ್ಲಿ ಹುಟ್ಟಿದ ಹಾಲಾಹಲವನ್ನು ಶಿವ ಉಂಡು ನಂಜುಂಡನಾದ ಅಂತ ನಮ್ಮಮ್ಮ ಹೇಳಿದಾಗಲೆಲ್ಲಾ ನಾನು ''ಇದೆಲ್ಲಾ ಬರೀ ಬೊಗಳೆ!'' ಅಂತ ತಿರಸ್ಕಾರ ಮಾಡುತ್ತಿದ್ದೆ. ಈಗ ಹೇಳಿ, ಸಮುದ್ರ ಮಥನ ಅನ್ನಬೇಕೋ ಅಥವಾ ಸಮುದ್ರ ಮಂಥನ ಅನ್ನಬೇಕೋ?'' ಅಂತ ಪ್ರಶ್ನಿಸಿದ.

ಸುವರ್ಣಾಕ್ಷ ಗಹಗಹಿಸಿ ನಕ್ಕ. ''ನಿಮ್ಮ ಹಾಸ್ಯಪ್ರಜ್ಞೆ ಅದ್ಭುತ! ದಾನವರಿಗೂ ಮಾನವರಿಗೂ ಇರುವ ಈ ಹಾಸ್ಯಪ್ರಜ್ಞೆ, ದೇವತೆಗಳಿಗಿಲ್ಲ ಎಂಬ ಸಂಗತಿ ತಮಗೆ ತಿಳಿದಿಲ್ಲದಿರಬಹುದು. ಇರಲಿ, ಈಗ ನನ್ನ ಪರಿಸ್ಥಿತಿಯನ್ನು ನಿಮ್ಮ ಮುಂದಿಡುವೆ. ಬಹು ಬೇಗ ನಾವು ಕಾರ್ಯೋನ್ಮುಖರಾಗದಿದ್ದರೆ ಸರ್ವನಾಶವಾಗುತ್ತದೆ. ನಮ್ಮ ದಾನವಲೋಕದ ಚಕ್ರವರ್ತಿ ಶಬ್ದಬೀಜಾಸುರ. ನಾನು ಅವನ ಮಂತ್ರಿ. ಒಂದು ವರ್ಷದ ಹಿಂದೆ ಅವನಿಗೆ ಭೂಲೋಕವನ್ನು ಆಳುವ ಗೀಳು ಹತ್ತಿತು. ಹಾಗಾಗಿ ನನಗೆ ಗುಟ್ಟಾಗಿ ತಿಳಿಸಿ ಭೂಲೋಕಕ್ಕೆ ಇಳಿದುಬಿಟ್ಟ. ನಾನು ಎಷ್ಟು ಬೇಡ ಅಂದರೂ ಕೇಳಲಿಲ್ಲ. ಈಗ ಅವನು ಹಿಂದಕ್ಕೆ ಬರುವ ಸೂಚನೆಯೇ ಕಾಣದ್ದರಿಂದ ಅವನನ್ನು ಹುಡುಕಿ ದಾನವಲೋಕಕ್ಕೆ ಹಿಂದಕ್ಕೆ ಕರೆದೊಯ್ಯಲು ಇಲ್ಲಿಗೆ ಬಂದಿರುವೆ. ನಿಮ್ಮ ಲೋಕದ ಸಂಗತಿ ಏನೂ ತಿಳಿಯದ್ದರಿಂದ ನಿಮ್ಮ ಸಹಾಯ ನನಗೆ ಬೇಕಾಗಿದೆ. ನಮ್ಮ ರಾಜನನ್ನು ಪತ್ತೆ ಹಚ್ಚಲು ಖ್ಯಾತ ಪತ್ತೇದಾರರಿಗೆ ತಾನೇ ಸಾಧ್ಯ?''

ಶರಲೇಖ ಒಂದು ಕ್ಷಣ ಸುಮ್ಮನಿದ್ದು ಅನಂತರ ನಿಧಾನವಾಗಿ ಪ್ರಾರಂಭಿಸಿದ.

''ಏಳುನೂರು ಕೋಟಿ ಭೂಲೋಕದ ಜನಸಂಖ್ಯೆಯಲ್ಲಿ ನಿಮ್ಮ ರಾಜನನ್ನು ಹುಡುಕುವುದು ಹುಲ್ಲಿನ ಮೆದೆಯಲ್ಲಿ ಸೂಜಿಯನ್ನು ಹುಡುಕಿದಂತೆ. ಆದರೂ ನಿಮ್ಮ ರಾಜನ ಬಗ್ಗೆ ಸ್ವಲ್ಪ ಮಾಹಿತಿ ನೀಡಿದರೆ ಅವನನ್ನು ಪತ್ತೆ ಹಚ್ಚುವ ಕೆಲಸಕ್ಕೆ ಅನುಕೂಲ. ಅವನ ಚಹರೆ, ನಡವಳಿಕೆ ಇವೆಲ್ಲದರ ಬಗ್ಗೆ ತಿಳಿಸಿ. ಅನಗತ್ಯ ಅಂಶ ಅಂತ ಯಾವುದನ್ನೂ ಬಿಡಬೇಡಿ. ಯಾವುದು ಮುಖ್ಯ ಅನ್ನೋದನ್ನ ನಾನು ನಿರ್ಧರಿಸ್ತೇನೆ.''

''ಮೊಟ್ಟಮೊದಲಿಗೆ ನಮ್ಮ ರಾಜನಿಗೆ ಸ್ವರ್ಗಲೋಕದ ಅಪ್ಸರೆಯರು ಅಂದರೆ ಎಲ್ಲಿಲ್ಲದ ಮೋಹ. ಅವರನ್ನೆಲ್ಲ ಪ್ರತಿ ವರ್ಷ ದಾನವಲೋಕಕ್ಕೆ ಕರೆಸಿ ಸೌಂದರ್ಯ ಸ್ಪರ್ಧೆ ಏರ್ಪಡಿಸೋದು ಅವನ ಪ್ರವೃತ್ತಿ. ಹಿಂದೊಮ್ಮೆ ಇಂತಹ ಸ್ಪರ್ಧೆಗೆ ಬಂದಿದ್ದ

ಅಪ್ಸರೆಯೊಬ್ಬಳನ್ನು ಕುರಿತು ''ನೀನು ತೀರ ಧಡೂತಿ'' ಅಂತ ಹೇಳಿ ಅವಳಿಂದ ಕಪಾಳಮೋಕ್ಷ ಪಡೆದಿದ್ದ. ಇನ್ನೊಂದು ಸಂಗತಿ ಎಂದರೆ ಅವನದ್ದು ಬಾಲಿಶ ಭಾಷೆ. ತೀರ ಚಿಕ್ಕ ವಾಕ್ಯಗಳಲ್ಲಿ ಹುರುಳಿಲ್ಲದ ಮಾತುಗಳನ್ನಾಡುತ್ತಾ, ತನ್ನ ಐಶ್ವರ್ಯದ ಜಂಭಕೊಚ್ಚಿಕೊಳ್ಳುವುದು ಅವನ ಚಾಳಿ. ತೀರ ತೆಳು ಚರ್ಮ ಅವನಿಗೆ. ಯಾರು ಏನಾದರೂ ಒಂದು ಸಣ್ಣ ಟೀಕೆ ಮಾಡಿದರೂ ವಾರಗಟ್ಟಲೆ ಕೊರಗುತ್ತಾ ಅವರನ್ನು ಪ್ರತಿದಿನ ಹೀಯಾಳಿಸುತ್ತಿರುತ್ತಾನೆ. ದಾನವ ರಾಜ್ಯದಲ್ಲಿ ನಾವೆಲ್ಲಾ ಕೊಡುವ ತೆರಿಗೆ ಅವನ ಜೇಬಿಗೇ ಹೋಗುತ್ತೆ ಅಂತ ಗಾಳಿಸುದ್ದಿ. ರಾಜನೂ ತನ್ನ ಆಸ್ತಿ ಮೇಲೆ ತೆರಿಗೆ ಕಟ್ಟಬೇಕೆಂಬ ನಿಯಮವಿದ್ದರೂ ಅವನು ಮಾತ್ರ ಮೂರು ಕಾಸಿನ ತೆರಿಗೆಯನ್ನೂ ಕೊಟ್ಟಿಲ್ಲ. ಇನ್ನೇನಾದರೂ ಮಾಹಿತಿ ಬೇಕಾದರೆ ಕೇಳಿ'' ಅಂದ ಸುವರ್ಣಾಕ್ಷ.

ಶರಲೇಖ ಅವನು ಹೇಳಿದ್ದೆಲ್ಲವನ್ನೂ ಕೇಳಿಸಿಕೊಂಡು, ''ಅವನ ರೂಪ, ವೇಷ ಭೂಷಣಗಳ ಬಗ್ಗೆ ಏನು ಹೇಳಬಲ್ಲಿರಿ?'' ಅಂತ ಕೇಳಿದ.

''ನಮ್ಮ ರಾಜ ಎಲ್ಲ ರಾಜರಂತೆ ಕಿರೀಟ ಧರಿಸುವುದಿಲ್ಲ. ಹಿಂದೆ ಧರ್ಮರಾಯ ಮಾಡಿದ ಅಶ್ವಮೇಧಯಾಗದಲ್ಲಿ ಒಂದು ಮುಂಗುಸಿ ತನ್ನ ಮೈಯ್ಯಿನ ಅರ್ಧಭಾಗ ಹೊನ್ನಿನ ಬಣ್ಣವಾಗಿಸಿಕೊಂಡು ಅವನೊಂದಿಗೆ ಸಂಭಾಷಣೆ ಮಾಡಿದ ಪ್ರಸಂಗ ನಿಮಗೆ ತಿಳಿದಿರಬಹುದು. ಆ ಮುಂಗುಸಿ ನಮ್ಮ ರಾಜ್ಯದಲ್ಲಿ ಆಶ್ರಯ ಪಡೆದಿತ್ತು. ನಮ್ಮ ರಾಜನಿಗೆ ಅದರ ಮೇಲೆ ಮೋಹಗೊಂಡು, ಅದನ್ನು ಕೊಂದು, ಅದರ ಚರ್ಮವನ್ನು ಸುಲಿಸಿ, ಹೊನ್ನಿನ ಭಾಗವನ್ನು ತನ್ನ ತಲೆಯಮೇಲೆ ಧರಿಸಲು ಪ್ರಾರಂಭಿಸಿದ್ದ. ನಮ್ಮ ನಾಡಿನಲ್ಲಿ ಮಕ್ಕಳು ಅವನನ್ನ ಮುಂಗುಸಿ ರಾಜ ಅಂತ ಲೇವಡಿ ಮಾಡ್ತಾರೆ'' ಎಂದು ನಮ್ಮ ಅಭ್ಯಾಗತ ಹೇಳಿದ.

ಇಷ್ಟೆಲ್ಲಾ ವಿಚಿತ್ರ ಗುಣಗಳನ್ನು ಹೊಂದಿರುವ ವ್ಯಕ್ತಿ ಯಾರಿರಬಹುದು? ಅಂತ ನಾನು ಯೋಚಿಸತೊಡಗಿದೆ. ಶರಲೇಖನಿಗೆ ಯಾವುದೋ ಸುಳಿವು ಸಿಕ್ಕಂತೆ ಕಂಡಿತು. ಅವನ ಮುಖದಲ್ಲಿ ಮಂದಹಾಸವೊಂದು ಹಾದುಹೋಯಿತು.

ಶರಲೇಖ ಮಾತನಾಡಲು ಪ್ರಾರಂಭಿಸಿದ.

''ನಿಮ್ಮ ರಾಜ ಎಲ್ಲಿದ್ದಾನೆ, ಹೇಗಿದ್ದಾನೆ ಎಲ್ಲವೂ ನನಗೆ ತಿಳಿದಿದೆ. ಆದರೆ ಆ ಜಾಗ ಇಲ್ಲಿಂದ ಸಾವಿರಾರು ಮೈಲಿಗಳು. ಅಲ್ಲಿಗೆ ಹೋಗುವ ಬಗೆ ಹೇಗೆ? ಹೋದರೂ ಅವನನ್ನು ಭೇಟಿಮಾಡುವುದು ಅಸಾಧ್ಯ. ಅವನ ರಕ್ಷಣೆಗೆ ಸರ್ಪಕಾವಲು ಇರುತ್ತದೆ.''

ಸುವರ್ಣಾಕ್ಷ ಮೆಲುನಗೆ ನಕ್ಕ.

''ದಾನವರಾದ ನಾವು ಮಾಯಾವಿಗಳು ಶರಲೇಖ ಅವರೇ. ನಮ್ಮ ವಂಶದ ಮೂಲಪುರುಷನಾದ ಬಾಹುಬಲಿಯ ಉಚ್ಚೈಶ್ರವಸ್ ಎಂಬ ಮಾಯಾ ಕುದುರೆ ಈಗ ನಮ್ಮ ರಾಜನದ್ದು. ನಾನು ಇಲ್ಲಿಗೆ ಅದರ ಸವಾರಿಯಲ್ಲೇ ಬಂದದ್ದು. ನಮ್ಮೆಲ್ಲರನ್ನೂ ಕರೆದುಕೊಂಡು ಅದು ಕ್ಷಣಾರ್ಧದಲ್ಲಿ ಭೂಲೋಕದ ಯಾವ ಮೂಲೆಗಾದರೂ ತೆರಳಬಲ್ಲುದು. ಅಲ್ಲಿ ಹೋದನಂತರ ನೀವು ಅವನಿರುವ ಜಾಗ ತೋರಿದರೆ ಸಾಕು. ನಮ್ಮ

ರಾಜನನ್ನು ನಮ್ಮ ಲೋಕಕ್ಕೆ ಕರೆದೊಯ್ಯುವ ವಿಧಾನ ನಾನು ಬಲ್ಲೆ. ನೀವುಗಳು ಸಿದ್ಧರಾಗಿದ್ದರೆ ಈಗಲೇ ಹೊರಡಬಹುದು'' ಎಂದ ಸುವರ್ಣಾಕ್ಷ.

ಫ್ಲಾಟಿನಿಂದ ನಾವು ಮೂವರೂ ಹೊರಕ್ಕೆ ಬಂದು ರಸ್ತೆಯ ಬದಿಯಲ್ಲಿ ನಿಂತೆವು. ರಸ್ತೆಯ ಬದಿಯಲ್ಲಿ ಬಿಳಿಯ ಕುದುರೆಯೊಂದು ದಾರಿಬದಿಯ ಹುಲ್ಲನ್ನು ಮೆಲ್ಲುತ್ತಾ ನಿಂತಿತ್ತು. ದಾರಿಯಲ್ಲಿ ಜನಗಳೆಲ್ಲಾ ಓಡಾಡುತ್ತಿದ್ದರು. ನನ್ನ ಜೀವನದಲ್ಲೇ ಕುದುರೆ ಏರಿಲ್ಲದ ನಾನು ಈಗ ಎಲ್ಲರ ಮುಂದೆ ಹೇಗೆ, ಎಂದು ಚಿಂತಿಸುತ್ತಿರುವಾಗಲೇ ಸುವರ್ಣಾಕ್ಷ ನನ್ನ ಮನಸ್ಸನ್ನು ಓದಿದನೆಂದು ಕಾಣುತ್ತದೆ. ತಕ್ಷಣ ಒಂದು ದಟ್ಟವಾದ ಮಂಜು ನಮ್ಮೆಲ್ಲರನ್ನೂ ಮುಸಗಿತು. ಯಾರೋ ನನ್ನ ಸೊಂಟಕ್ಕೆ ಕೈಹಾಕಿ ಅನಾಮತ್ತಾಗಿ ನನ್ನನ್ನು ಎತ್ತಿ ಕುದುರೆಯ ಮೇಲೆ ಕೂರಿಸಿದರು, ನನ್ನ ಹಿಂದೆ ಶರಲೇಖ ಕೂತಿದ್ದ ಮುಂದೆ ಸುವರ್ಣಾಕ್ಷ. ಇಂತಹ ಸ್ಟ್ರೆಸ್‌ಫುಲ್ ಕ್ಷಣಗಳಲ್ಲಿ ಗಾಯತ್ರಿ ಮಂತ್ರ ಹೇಳುವುದು ನನ್ನ ವಾಡಿಕೆ. ತಕ್ಷಣ ಸುವರ್ಣಾಕ್ಷನ ಮೊಳಕೈ ನನ್ನನ್ನು ತಿವಿಯಿತು. ''ಆ ದೇವತೆಗಳ ಮಂತ್ರವನ್ನು ಮಾತ್ರ ಹೇಳಬೇಡಿ. ಕುದುರೆಗೆ ಅದು ಆಗದು'' ಎಂದ ಸುವರ್ಣಾಕ್ಷ. ಮುಂದಿನ ಕ್ಷಣದಲ್ಲಿ ನಾವು ಮನ್ಹಟ್ಟನ್ನಿನ ಟವರಿನ ಮೇಲಿನ ಹೆಲಿಪ್ಯಾಡಿನಲ್ಲಿ ಇಳಿದಿದ್ದೆವು.

ಮಾಯಾವಿಗಳು ಎಂದರೆ ಏನು ಎಂಬುದು ಆ ಕ್ಷಣಗಳಲ್ಲಿ ಬಹು ಸ್ಪಷ್ಟವಾಗಿ ತಿಳಿಯಿತು. ಸುವರ್ಣಾಕ್ಷನಿಗೆ ಅವನ ರಾಜನ ಸುಳಿವು ಬೇಕಾಗಿತ್ತು ಅಷ್ಟೇ. ಈಗ ನಾವು ಅವನು ಹೇಳಿದ ಹಾಗೆ ಕೇಳಬೇಕಾಯಿತು. ಮುಂದಿನ ಕಾರ್ಯಕ್ರಮವನ್ನು ಅವನೇ ನಮಗೆ ತಿಳಿಯ ಹೇಳಿದ.

''ನಮ್ಮ ರಾಜ ಮಾನವರೂಪವನ್ನು ತಳೆದಿರುವುದರಿಂದ ಅವನಿಗೆ ತನ್ನ ಪೂರ್ವಜನ್ಮದ ಸ್ಮರಣೆ ಇರದು. ಇಲ್ಲಿನ ಮಾಯೆ ಹರಿದು ಅಲ್ಲಿನ ಮಾಯೆ ಮೂಡಬೇಕಾದರೆ ಅವನ ಮುಂದಲೆಯ ಸ್ವಲ್ಪ ಕೂದಲನ್ನು ಕತ್ತರಿಸಿದರೆ ಮಾತ್ರ ಸಾಧ್ಯ ಎಂದು ನಾನು ಹೊರಡುವ ಮುಂಚೆ ಶುಕ್ರಾಚಾರ್ಯರು ಅಪ್ಪಣೆ ಕೊಡಿಸಿದ್ದರು. ಈಗ ನಾವು ಮೂರುಜನ ಹಿಂದೂ ಅರ್ಚಕರ ವೇಷವನ್ನು ಧರಿಸಿ ಅವನ ಬಳಿಹೋಗಿ, ಚುನಾವಣೆಯಲ್ಲಿ ಗೆಲ್ಲುವುದು ಖಚಿತವಾಗಬೇಕಾದರೆ ಪಿಟ್ಸ್‌ಬರ್ಗ್‌ನಲ್ಲಿನ ವೆಂಕಟೇಶ್ವರ ದೇವಸ್ಥಾನಕ್ಕೆ ಹೋಗಿ ಮುಡಿಕೊಡಬೇಕೆಂದು ಸಲಹೆ ಮಾಡೋಣ. ನನ್ನ ಮಾಯಾ ಶಕ್ತಿಯನ್ನು ಬಳಸಿ ಅವನು ಒಪ್ಪುವಂತೆ ಮಾಡುತ್ತೇನೆ. ದೇವಸ್ಥಾನದಲ್ಲಿ ಅವನ ಮುಂದಲೆಯ ಕೂದಲನ್ನು ಕತ್ತರಿಸಿದ ತಕ್ಷಣ ಅವನು ನನ್ನನ್ನು ಗುರುತಿಸಿ ನನ್ನೊಂದಿಗೆ ತನ್ನ ಲೋಕಕ್ಕೆ ಹಿಂತಿರುತ್ತಾನೆ. ಈ ಎಲ್ಲ ಓಡಾಟ ಹೇಗೆ ಎಂಬ ಸಂದೇಹ ಬೇಡ. ನಮ್ಮ ಕುದುರೆ ಎಲ್ಲವನ್ನೂ ಸುಸೂತ್ರವಾಗಿ ಮಾಡಬಲ್ಲುದು'' ಎಂದ ಸುವರ್ಣಾಕ್ಷ. (ಗಾಯತ್ರಿ ಮಾತ್ರ ಹೇಳಬಾರದು ಅಂತ ನಾನು ಮನಸ್ಸಿನಲ್ಲೇ ಅಂದುಕೊಂಡೆ)


ನಾನಿನ್ನೇನು ಹೇಳಲಿ? ದಾನವರ ಮಾಯಾಶಕ್ತಿಯ ಮುಂದೆ ಹುಲುಮಾನವರೇನು ಮಾಡಬಲ್ಲೆವು? ಎಲ್ಲವೂ ಸುವರ್ಣಾಕ್ಷನ ಯೋಜನೆಯಂತೆಯೇ ನಡೆಯಿತು. ನವೆಂಬರ್ ಏಳರಂದು ನಾವು ಪಿಟ್ಸ್‌ಬರ್ಗ್‌ನ ವೆಂಕಟೇಶ್ವರ ದೇವಸ್ಥಾನದಲ್ಲಿದ್ದೆವು. ಮುಡಿಕೊಟ್ಟ ತಕ್ಷಣ ಆ ದಾನವ ರಾಜನಿಗೆ ತನ್ನ ಪೂರ್ವಜನ್ಮ ಸ್ಮರಣೆ ಬಂದಿತು. ತಕ್ಷಣ ಆತ ಸುವರ್ಣಾಕ್ಷನನ್ನು

ಆದರದಿಂದ ತಬ್ಬಿಕೊಂಡ. ಸುವರ್ಣಾಕ್ಷ ನಮ್ಮಿಬ್ಬರನ್ನು ತೋರಿಸಿ ''ಇವರಿಂದಲೇ ನಿಮಗೆ ಬಿಡುಗಡೆ ಆಗಿದ್ದು'' ಅಂತ ಹೇಳಿದ. ಆಗ ಆತ ಬಹು ಔದಾರ್ಯದಿಂದ ''ನಿಮ್ಮಿಬ್ಬರಿಗೂ ನಮ್ಮ ಲೋಕಕ್ಕೆ ಸ್ವಾಗತ. ಇಬ್ಬರಿಗೂ ಬೇರೆ ಬೇರೆ ಸೌಧಗಳು ಹಾಗೂ ಮೂರು ಮೂರು ರಾಕ್ಷಸರಮಣಿಯರನ್ನು ವ್ಯವಸ್ಥೆ ಮಾಡುವೆ. ಬಂದು ಬಿಡಿ'' ಅಂತ ಆಹ್ವಾನಿಸಿದ. ಶರಲೇಖ ನಯವಾಗಿಯೇ ಅದನ್ನು ನಿರಾಕರಿಸಿ, ''ನಮ್ಮನ್ನು ನಮ್ಮ ಊರಿಗೆ ತಲುಪಿಸಿದರೆ ಸಾಕು'' ಅಂತ ವಿನಂತಿಸಿದ. ಶಬ್ದಬೀಜಾಸುರ, ''ಆಯಿತು ಹಾಗೇ ಆಗಲಿ, ಆದರೆ ನಾಳೆ ಇಲ್ಲಿನ ಚುನಾವಣೆಯ ಫಲಿತಾಂಶ ಹೊರಬೀಳುತ್ತದೆ. ಇಲ್ಲಿನ ಋಣ ತೀರಿದ್ದರೂ ಅದೊಂದನ್ನು ನೋಡಿ, ಜನಗಳಿಗೆ ನನ್ನ ಕೃತಜ್ಞತೆಯನ್ನು ಸಲ್ಲಿಸಿ ಆಮೇಲೆ ಹೊರಟುಬಿಡೋಣ'' ಅಂದ.

ನೀವು ಈ ಲೇಖನವನ್ನು ಓದುವ ಹೊತ್ತಿಗೆ ಚುನಾಯಿತ ಅಧ್ಯಕ್ಷರು ಕಾಣೆಯಾಗಿದ್ದರಿಂದ ಉಪಾಧ್ಯಕ್ಷರನ್ನೇ ಪ್ರಮಾಣವಚನ ಸ್ವೀಕರಿಸಲು ಆ ದೇಶದಲ್ಲಿ ನಿರ್ಧರಿಸಿರುತ್ತಾರೆ. ಇದೆಲ್ಲಾ ವಿಷಯವನ್ನು ಯಾರಿಗೂ ಹೇಳಬೇಡಿ ಪ್ಲೀಸ್. ಎಫ್.ಬಿ.ಐ. ನವರು ನಮ್ಮ ಬೆನ್ನಹಿಂದೆ ಬಿದ್ದಾರು!

☆

---


ಇದೀಗ ಬಿಡುಗಡೆಯಾಗಿದೆ

**ಶ್ರೀ ಶಂಕರ ಚರಿತಾಮೃತಮ್**

**(ಆದಿ ಶಂಕರಾಚಾರ್ಯರ ಜೀವನ ಸಾಧನೆಗಳ ಚೌಪದಿ ರೂಪಾಂತರ)**

ಲೇಖಕರು

**ಬೇಲೂರು ರಾಮಮೂರ್ತಿ**

ಪುಟಗಳು – 212 : ಬೆಲೆ ರೂ. 200/–

ಪ್ರತಿಗಳಿಗೆ

ದಿವ್ಯಾ ಪ್ರಕಾಶನ, ನಂ. 6, "ಕಾಮಧೇನು"

ನಾಗಪ್ಪ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು 560 020

ದೂ. 9449446328

# ಕಳ್ಳತನ ಮತ್ತು ಅನಂತರ

**- ಸುಕೇಶವ**

ಅವರು ಒಂದು ದೊಡ್ಡ ಕಂಪನಿಯ ಜನರಲ್ ಮ್ಯಾನೇಜರ್. ಆಫೀಸಿನ ದರ್ಪವೇ ಮನೆಯ ಸುತ್ತಮುತ್ತಲೂ. ಅದಕ್ಕೇ ಅವರಿಗೆ ಮನೆಯ ಹತ್ತಿರ ಯಾರೂ ಸ್ನೇಹಿತರಿಲ್ಲ. ಅವರ ಮನೆಗೆ ಯಾರೂ ಬರೋಲ್ಲ. ಇವರೂ ಅಷ್ಟೆ ಮನೆಯೊಳಗೆ ಹೋಗಿ ಬಾಗಿಲು ಹಾಕಿಕೊಂಡುಬಿಟ್ಟರೆ ಅಷ್ಟೇ. ಅವರಿಗೆ ಸುಮ್ಮಸುಮ್ಮನೆ ಮನೆಗೆ ಬರೋರ್ನ, ಸುಮ್ಮಸುಮ್ಮನೆ ಮಾತಾಡಿಸೋರ್ನ ಕಂಡ್ರೆ ಆಗೋಲ್ಲ. ಹಾಗೆ ನೋಡಿದರೆ ಅವರಿಗೆ ಅಕ್ಕಪಕ್ಕದ ಮನೆಗಳಲ್ಲಿ ಯಾರಿದಾರೆ, ಅವರ ಹೆಸರೇನು, ಅವರು ಎಲ್ಲಿ ಕೆಲಸ ಮಾಡ್ತಾರೆ ಅನ್ನೋ ವಿವರಗಳು ಗೊತ್ತಿಲ್ಲ, ಅವರಿಗೆ ಬೇಕಾಗೂ ಇಲ್ಲ.

ಹೀಗಿರುವಾಗ ಒಂದು ದಿನ ಅವರ ಕಛೇರಿಗೆ ಫೋನ್ ಬಂತು. ಪಿ.ಎ. ಫೋನ್ ತಗೊಂಡು ಸರ್, ಯಾರೋ ಸದಾಶಿವ ಅಂತೆ ನಿಮ್ಮತ್ರ ಮಾತಾಡಬೇಕಂತೆ ಅಂದ. ಅದಕ್ಕೆ ಸಾಹೇಬರು ಇಲ್ಲ ಅಂತ ಹೇಳ್ರೀ ಅಂದರು. ಮತ್ತೆ ಅರ್ಧ ಗಂಟೆ ಬಿಟ್ಟು ಅದೇ ಫೋನು. ರೀ ಯಾರ್ರೀ ಅದು, ಅವನಿಗೆ ತಲೆ ಕೆಟ್ಟಿದೆ ಅಂದ್ರೆ ನಿಮಗೂ ತಲೆ ಕೆಟ್ಟಿದೆಯೇನ್ರೀ ಅಂತ ಪಿ.ಎ.ಗೇ ಬೈದರು. ಮತ್ತರ್ಧ ಗಂಟೆ ಬಿಟ್ಟು ಮತ್ತದೇ ಫೋನು. ಈಗ ಪಿ.ಎ. ಸರ್. ಅವರು ನಿಮ್ಮ ಎದುರು ಮನೆಯವರಂತೆ, ನಿಮ್ಮತ್ರ ಅರ್ಜೆಂಟಾಗಿ ಮಾತಾಡಬೇಕಂತೆ ಅಂದ. ಅದಕ್ಕೆ ಸಾಹೇಬರು, ಇನ್ನೇನು ಅವನ ಹೆಂಡ್ತಿ ತಮ್ಮನಿಗೋ, ಹೆಂಡ್ತಿ ಸೋದರ ಮಾವನಿಗೋ ಕೆಲಸ ಕೊಡಿಸಬೇಕು ಅಂತ ಕಾಣುತ್ತೆ, ನಾನು ದೊಡ್ಡ ಆಫೀಸರು ಅಂತ ಅವರಿಗೆ ಗೊತ್ತಲ್ಲ. ರೀ ಅವರಿಗೆ ಹೇಳ್ರೀ ಇನ್ನೊಂದು ಸಾರಿ ಫೋನ್ ಮಾಡಿದರೆ ಪೋಲೀಸಿಗೆ ಕಂಪ್ಲೇಂಟ್ ಕೊಡ್ತೀನಿ ಅಂತ ಅವನಿಗೆ ಉಗೀರೀ ಅಂತ ಪಿ.ಎ.ಗೇ ದಬಾಯಿಸಿದರು.

ಅವತ್ತು ಅವರಿಗೆ ಎಷ್ಟು ತಲೆ ತಿರುಗಿತ್ತು ಅಂದರೆ ಪಿ.ಎ.ಗೆ ಯಾವ ಫೋನೂ ಕೊಡಬೇಡ ಅಂತ ಹೇಳಿಬಿಟ್ಟರು. ಅವರ ಮೊಬೈಲನ್ನೂ ಆಫ್ ಮಾಡಿಕೊಂಡು ಬಿಟ್ಟರು. ಕೆಲಸ ಇಲ್ಲದೋರು ಸಿಕ್ಕ ಸಿಕ್ಕ ನಂಬರುಗಳಿಗೆ ಫೋನ್ ಮಾಡ್ತನೇ ಇರ್ತಾರೆ ಅಂತ ಗೊಣಗಿಕೊಂಡರು.

ಸಾಹೇಬರು ಮನೆಗೆ ಹೊರಟಾಗ ಪಿ.ಎ. ಸರ್ ನಿಮ್ಮ ಮನೆಯ ರಸ್ತೆಯವರಂತೆ ಸುಮಾರು ಎಂಟು ಜನ ಫೋನ್ ಮಾಡಿದ್ದರು. ಒಂದು ಸಾರಿ ನಿಮ್ಮ ಪತ್ನಿಯವರೂ ಫೋನ್ ಮಾಡಿದ್ದರು. ಎಲ್ಲರೂ ಬಹಳ ಅರ್ಜೆಂಟು ಅಂತ ಹೇಳ್ತಾ ಇದ್ರು ಅಂದ. ಸಾಹೇಬರು ತಲೆ ಕೊಡವಿ ಮನೆಗೆ ಹೋದರು.

ಮನೆ ಬಾಗಿಲು ಮುರಿದಿತ್ತು. ಒಬ್ಬ ಪೇದೆ ಮನೆ ಮುಂದೆ ಕೂತಿದ್ದ. ಸಾಹೇಬರ ಮನೆ ಕಳ್ಳತನ ಆಗಿತ್ತು. ಒಳಗೆ ಹೆಂಡತಿ ಕಣ್ಣೀರು ಹಾಕುತ್ತಾ ಕೂತಿದ್ದರು. ಕಳ್ಳ ಎಲ್ಲವನ್ನೂ ದೋಚಿಕೊಂಡು ಹೋಗಿದ್ದ. ಪಕ್ಕದ ಮನೆಯವರು ಬಂದು ಸರ್, ಬೆಳಗ್ಗೆ ಹತ್ತು ಗಂಟೆ ಸುಮಾರಿಗೆ ಕಳ್ಳ ನಿಮ್ಮ ಮನೆಯೊಳಗೆ ಹೋದ. ಅವನನ್ನು ಕೂಡಿ ಹಾಕಿ ನಾವು ನಿಮಗೆ ಫೋನ್ ಮಾಡಲು ತುಂಬಾ ಪ್ರಯತ್ನ ಪಟ್ಟೆವು. ನೀವು ನಮ್ಮ ಸಂಪರ್ಕಕ್ಕೆ ಸಿಗಲೇ ಇಲ್ಲ. ಅಷ್ಟರಲ್ಲಿ ಕಳ್ಳ ಪೋಲೀಸಿನವರು ಬರೋ ಮೊದಲು ಸಿಕ್ಕದ್ದಷ್ಟನ್ನು ದೋಚಿಕೊಂಡು ಪರಾರಿಯಾಗಿದ್ದಾನೆ ಅಂದರು.

ಸಾಹೇಬರು ಕಣ್ಣತ್ತಲೆ ಬಂದು ಕೆಳಗೆ ಬಿದ್ದರು.

☆

# ಅಪ್ಪ ಎನ್ನುವ ಆಲದಮರ

**- ಗುಂಡುರಾವ್ ದೇಸಾಯಿ**

**ಸಾ**ಮಾನ್ಯವಾಗಿ ಮಗಳಿಗೆ ತಂದೆಯ ಮೇಲೆ ಪ್ರೀತಿ, ಮಗನಿಗೆ ಅಮ್ಮನ ಮೇಲೆ ಪ್ರೀತಿ ಇರುತ್ತದೆ. ನನ್ನ ವಿಷಯದಲ್ಲಿ ಅದರ ವಿರುದ್ಧವಾಗಿತ್ತು. ಹಾಗೆ ನೋಡಿದರೆ ನಾನು ಅಪ್ಪನ ದ್ವೇಷಿಸಲೇಬೇಕಿತ್ತು. ಕಾರಣ ನನ್ನ ಅವ್ವ ಅಪ್ಪನ ವಯಸ್ಸುಗಳ ನಡುವಿನ ಅಂತರ ಬರೋಬ್ಬರಿ ಇಪ್ಪತ್ತು ವರ್ಷಕ್ಕಿಂತ ಹೆಚ್ಚು. ನಲವತ್ತರ ಆಸುಪಾಸಿನಲ್ಲಿದ್ದ ಅಪ್ಪನಿಗೆ ಹದಿನೈದರ ಆಸುಪಾಸಿನಲ್ಲಿದ್ದ ಅವ್ವನಳನ್ನು ಹೇಗೆ ಮದುವೆ ಆಗಲು ಒಪ್ಪಿಕೊಂಡನೋ ಎಂದು ಅಶ್ಚರ್ಯ ಆಗುತ್ತಿತ್ತು. ಆದರೆ ತಂದೆಯಾಗಿ ಕಷ್ಟದ ಸಮಯದಲ್ಲೂ ಧೃತಿಗೆಡದೆ ಅವರು ತೋರಿದ ಕಾಳಜಿ, ಅನುಭವಿಸಿದ ಯಾತನೆ ಅಷ್ಟಿಷ್ಟಲ್ಲ. ಹಾಗೆ ನೋಡಿದ್ರೆ ಅವರು ಕಷ್ಟದ ದಿನಗಳನ್ನು ಎದುರಿಸುವ ಅನಿವಾರ್ಯತೆ ಇದ್ದೇ ಇರಲಿಲ್ಲ. ಮೇಷ್ಟ್ರಾಗಿ ಎರಡು ದಶಕಗಳ ಹೆಚ್ಚಿನ ಕಾಲ ಕೆಲಸ ಮಾಡಿದವರು. ನನಗೆ ಈಗಲೂ ನಮ್ಮ ತಂದೆಯವರ ಬಗ್ಗೆ ಗೊತ್ತಿಲ್ಲದವರು ಕೇಳುವ ಪ್ರಶ್ನೆ ''ಅಲ್ರೀ ನಿಮ್ಮಪ್ಪ ಮೇಷ್ಟ್ರಿದ್ರು ಅಂತಿರಿ, ಮಸ್ಕಿಗೆ ಬಂದು ಮೂವತ್ತುವರ್ಷ ಆಯ್ತು ಅಂತಿರಿ ಮನಿ ಹೋಗಲಿ ಒಂದು ಫ್ಲಾಟು ಸಹಿತ ಮಾಡಿಲ್ಲಲ್ರಿ'' ಎಂದು 'ನಿಮ್ಮ ತಂದೆಯವರಿಗೆ.....' ಅಡ್ಡ ಚಟಗಳೇನಾದ್ರೂ ಇದ್ದವೇನು? ಅಂತ ಪ್ರಶ್ನೆಹಾಕುವ ದಾಟಿಯಲ್ಲಿ ಕೇಳುತ್ತಾರೆ. ನಮ್ಮ ತಂದೆಯವರದು ದೊಡ್ಡ ಕುಟುಂಬ. ಆರುಜನ ಅಣ್ಣ ತಮ್ಮಂದಿರು, ಮೂವರು ಸಹೋದರಿಯರು. ಇವರೊಬ್ಬರೇ ನೌಕರಿಮಾಡುವಂತವರಾಗಿದ್ದರು. ಜೊತೆಗೆ ಹುಟ್ಟಿನಿಂದ ಬಂದ ಅಂಗವೈಕಲ್ಯ ಬೇರೆ. ಕಾಲಿನ ಪಾದಗಳೆರಡು ಡೊಂಕಾಗಿದ್ದುದರಿಂದ ಅಡ್ಡಾಡುವುದಕ್ಕೂ ಬಹು ಕಷ್ಟವಾಗಿತ್ತು. ಹಾಗಾಗಿ ಮನೆಯವರು ಮದುವೆ ಆಗು ಎಂದರು ಒಲ್ಲೆ ಎಂದು ಮೌನವಹಿಸಿದ್ದರು. ಆಗ ಸಂಕಷ್ಟದಲ್ಲಿದ್ದ ಮನೆಗೆ ತಾವು ನಯಾ ಪೈಸಾ ಇಟ್ಟುಕೊಳ್ಳದೆ ಕೊಟ್ಟು ಬಿಡುತ್ತಿದ್ದರು. ಅದಕ್ಕಿಂತಲೂ ಹೆಚ್ಚಾಗಿ ಪಗಾರ ತರಲು ತಾವು ಒಂದು ದಿನವು ಹೋಗದೆ ಸಹೋದರರೆ ಆ ಕಾರ್ಯಮಾಡುತ್ತಿದ್ದರು ಎಂದ ಮೇಲೆ ಎಂತಹ ನಿಸ್ವಾರ್ಥ ಬದುಕು ಅಲ್ವೇ?

ತಾತನ ಅಕಾಲಿಕ ನಿಧನದಿಂದ ಇಡೀ ಸಂಸಾರದ ಜವಾಬ್ದಾರಿ ಅವರ ಮೇಲೆ ಬಿತ್ತು. ತಾನು ಅಂಗವಿಕಲ ಮದುವೆ ಮಾಡಿಕೊಂಡು ಯಾಕೆ ಇನ್ನೊಬ್ಬರಿಗೆ ತೊಂದರೆ ನೀಡಬೇಕು ಎಂದು ನಿರ್ಧರಿಸಿದ ಅವರು ತಮ್ಮ ಬದುಕನ್ನು ಪರಿಪೂರ್ಣವಾಗಿ ಸಂಸಾರದ ಪ್ರಗತಿಗೆ ಮೀಸಲಿಟ್ಟಿದ್ದರು. ಸಹೋದರ, ಸಹೋದರಿಯರ ಮದುವೆ, ಅವರ ಖರ್ಚು ನಿಭಾಯಿಸುವುದರಲ್ಲೆ ಕಳೆಯಿತು. ಆರಂಭದಲ್ಲಿ ರಾಯಚೂರಿನಲ್ಲಿ ಅಂಗಡಿಯನ್ನಿಟ್ಟು ನಂತರದಲ್ಲಿ ಮಸ್ಕಿಯ ಗಚ್ಚಿನ ಮಠದಲ್ಲಿ ಇದ್ದುಕೊಂಡು ಪುರಾತತ್ವ ಕಾರ್ಯದಲ್ಲಿ ಸಹಾಯಕರಾಗಿ ಕೆಲಸಮಾಡಿ ನಂತರ ಬಂಧು ಗಿರಿಯಪ್ಪ ಎಂಬುವರ ನೆರವಿನಿಂದ ಶಿಕ್ಷಕರಾಗಿ ಕೆಲಸಕ್ಕೆ ಸೇರಿದರು. ವಯಸ್ಸಾದ ಮೇಲೆ ಅಪ್ಪನಿಗೆ ಒದಗಬಹುದಾದ ತೊಂದರೆಗಳನ್ನರಿತ ಅಜ್ಜಿ ಮದುವೆ ಹೇಗಾದರೂ ಮಾಡಿಕೊಳ್ಳಲೇಬೇಕು ಎಂದು ಮನಸ್ಸಿರದಿದ್ದರೂ ತನಗಿಂತಲೂ ಇಪ್ಪತ್ತು ವರ್ಷ ಚಿಕ್ಕವಳಿದ್ದ ನನ್ನ ತಾಯಿಯೊಂದಿಗೆ ಮದುವೆ ಮಾಡಿದರು.

ಅಪ್ಪ ವಯಸ್ಸಿನಲ್ಲಿ ಯಾರ್‍ಯಾರಿಗೋ ಏನೆಲ್ಲ ಉಪಕಾರ ಮಾಡಿದ್ರೂ, ಉಪಕಾರ ಸ್ಮರಣೆ ಮಾಡಿದವರು ಕಡಿಮೆ. ಅವ್ವಳಿಗೂ ತವರು ಮನಿಯಿಂದ ಅಂತಹ ಹೇಳಿಕೊಳ್ಳುವಂತಹ ಬೆಂಬಲ ಇಲ್ಲವಾದ್ದರಿಂದ ಅಪ್ಪನನ್ನು ಕೈ ಹಿಡಿದು ಬದುಕಬೇಕಾಯಿತು. ಹುಟ್ಟಿದ ಕೆಲವೇ ವರ್ಷಗಳಲ್ಲಿ ಸಾಲಾಗಿ ಮೂರು ಮಕ್ಕಳು ತೀರಿ ಹೋದ್ರೆ ಕುಟುಂಬದ ಸ್ಥಿತಿ ಹೇಗಾಗಿರಬೇಡ. ತದನಂತರ ಹಲವಾರು ವರ್ಷಗಳು ಆಸೆ ಬಿಟ್ಟು ಸಹೋದರ ಮಕ್ಕಳನ್ನೇ ತಮ್ಮ ಮಕ್ಕಳೆಂದು ಭ್ರಮಿಸಿ, ಅವರ ಏಳ್ಗೆಯಲ್ಲಿ ಬದುಕು ಸವೆಸಿದರು. ಆದರೆ ಆಕಸ್ಮಿಕ ಎಂಬಂತೆ ಅಕ್ಕ ನಿವೃತ್ತಿ ಅಂಚಿನಲ್ಲಿ, ನಿವೃತ್ತರಾದ ಮೇಲೆ ನಾನು ಹುಟ್ಟಿದಾಗ ಬದುಕಿನ ಆಸೆ ಮತ್ತೆ ಅಪ್ಪನಿಗೆ ಚಿಗರಿತು. ನಾವು ಹುಟ್ಟಿದ ಮೇಲೆ ಮನೆ-ಮನಗಳ ಮನಸ್ಸು ಒಡೆಯಿತು. ಅನಿವಾರ್ಯವಾಗಿ ಊರು ಬಿಡಬೇಕಾಯಿತು.

ಇಳಿಗಾಲದಲ್ಲಿ ಹುಟ್ಟಿದ ಮಕ್ಕಳಿಗೆ ಶಿಕ್ಷಣ ಕೊಡಿಸಲು ಅವರು ಮಾಡಿದ ಹೋರಾಟ ಅಷ್ಟಿಷ್ಟಲ್ಲ. ರಿಟೈರ್ ಆದ ಮೇಲೆ ಅವರ ಕೈಯಲ್ಲಿ ಯಾವ ಹಣವು ಇರಲಿಲ್ಲ ಉಳಿಸಿರಲಿಲ್ಲ. ಪೆನ್‌ಶನ್ ಒಂದೇ ಬದುಕಿಗೆ ಆಧಾರವಾಗಿತ್ತು. ಅದು ನಾಲ್ಕು ಜನರ ನಿರ್ವಹಣೆಗೆ ಸಾಲದಾಗಿತ್ತು. ಹಾಗಾಗಿ ಕಡಿಮೆ ಬೆಲೆ ಇರುವ, ಇಲಿ ಹೆಗ್ಗಣಗಳು ವಾಸ ಮಾಡುವ, ಲೈಟಿಲ್ಲದ ಮನೆಯಲ್ಲಿ ಕಾಲಕಳೆಯಬೇಕಾಯಿತು. ಮನೆಯಲ್ಲಿ ಬೆಳಿಗ್ಗೆ ಸಾಯಂಕಾಲ ಮನೆಪಾಠ. ಅಂದಿನ ದಿನಗಳಲ್ಲಿ ಮಸ್ಕಿಯಲ್ಲಿ ಇಬ್ಬರೇ ಟ್ಯೂಶನ್ ಹೇಳೋರು. ಅಮರಯ್ಯ ಮೇಷ್ಟ್ರು ಹಾಗೂ ನಮ್ಮ ತಂದೆಯವರು. ಅಮರಯ್ಯ ಮೇಷ್ಟ್ರು ನಮ್ಮೂರು ಅಂತರಗಂಗಿಯ ಪಕ್ಕದ ನಾಗರಬೆಂಚಿಯವರು. ಹಾಗಾಗಿ ಮೊದಲಿನಿಂದಲೂ ಅಪ್ಪನೊಂದಿಗೆ ದೋಸ್ತಿ. ಅವರು ಮನೆಪಾಠ ಮಾಡುತ್ತಿದ್ದರು. ಮಸ್ಕಿಯಲ್ಲಿ ಜನಪ್ರಿಯ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದರಿಂದ ಊರಿಗೆ ಪ್ರಸಿದ್ಧಿಯನ್ನು ಪಡೆದಿದ್ದರು. ಹಾಗಾಗಿ ಅಲ್ಲಿ ಹೋಗೋರೆಲ್ಲ ಶ್ರೀಮಂತರ ಮಕ್ಕಳಾಗಿದ್ದರು. ಅಪ್ಪನ ಹತ್ತಿರ ಮಧ್ಯಮ ವರ್ಗದ ಮಕ್ಕಳು ಬಡವರು ಬರುತ್ತಿದ್ದರು. ನಮ್ಮನೆದು ವಾರಕ್ಕ ಎಂಟಾಣೆ ಟ್ಯೂಷನ್. ಬೆಲೆ ಕಡಿಮೆ ಇದ್ದಲ್ಲಿ ಕ್ವಾಲಿಟಿ ಇರೋಲ್ಲ ಅಂತ ಭಾವಿಸ್ತಾರೆ. ಆದರೆ, ಕಾಟಾಚಾರಕ್ಕೆ ಮನೆಪಾಠ ಮಾಡದೆ ಹೇಳುವ ವಿಷಯದಲ್ಲಿ ನಿಖರತೆ ಇರುತ್ತಿತ್ತು. ಹೇಳಿದ ಕಾರ್ಯಗಳನ್ನು ಮಾಡದೆ ಇದ್ದರೆ ಕಠಿಣ ಶಿಕ್ಷೆ ಕಾಯುತ್ತಿತ್ತು. ಮನೆಪಾಠ ವಿಷಯದಲ್ಲಿ ರಾಜಿ ಮಾಡಿಕೊಳ್ಳುತ್ತಾ ಇರಲಿಲ್ಲ. ಬೆತ್ತಕ್ಕ ಬರುವ ಮಕ್ಕಳು ನಲುಗಿ ಹೋಗುತ್ತಿದ್ದರು. 'ಛಡಿ ಚಂ ಛಂ ವಿದ್ಯಾ ಘಂ ಘಂ' ಎನ್ನುವುದು ಅಪ್ಪನ ಧ್ಯೇಯವಾಗಿತ್ತು. ಕೆಲದಿನಗಳಲ್ಲಿ ನಮ್ಮಪ್ಪನ ಮನೆಪಾಠ ಗಟ್ಟಿಗೊಂಡಿತು. ಇದಲ್ಲದೆ ಆ ಸಮಯದಲ್ಲಿ 'ರಾತ್ರಿ ಶಾಲೆ' ಕಲಿಸುವ ಯೋಜನೆ ಬಂದಾಗ ಬರುವ ಅಲ್ಪ ಸಂಭಾವನೆ ಮನೆವೆಚ್ಚಕ್ಕೆ ಆಗುತ್ತದೆ ಎಂದು ಭಾವಿಸಿ ವಯಸ್ಕರ ಶಿಕ್ಷಣ ಕೇಂದ್ರಕ್ಕೆ ಕಲಿಸಲು ಹೋಗ್ತಾ ಇದ್ರು. ಅವರಿಗೆ ಆಸರೆಯಾಗಿ ಅಕ್ಕ, ನಾನು ಹೋಗ್ತಾ ಇದ್ವಿ. ಇವತ್ತು ವಯಸ್ಕರ ಶಿಕ್ಷಣಕ್ಕಾಗಿ ಕೇವಲ ಕಾಗದ ಪತ್ರದಲ್ಲಿ ಕೋಟಿಗಟ್ಟಲೆ ಹಣ ವ್ಯರ್ಥವಾಗುತ್ತಿದೆ. ಆದರೆ ಆಗ ಕೊಡುತ್ತಿದ್ದ ಮಾಸಿಕ 20/- ರೂ.ಗೆ ಅಪ್ಪ ರಾತ್ರಿ ಪಾಠ ಹೇಳಿಕೊಡಲು ಹೋಗುತ್ತಿದ್ರು. ವಯಸ್ಕರ ಶಿಕ್ಷಣ ಔಪಚಾರಿಕ ಶಾಲೆಗಿಂತಲೂ ಮಿಗಿಲಾಗಿತ್ತು. ಅವರ ಕೈಯಲ್ಲಿ ಅಕ್ಷರಜ್ಞಾನ ಪಡೆದವರೆಲ್ಲ ಈಗಲೂ ಅವರನ್ನು ನೆನೆಯುತ್ತಾರೆ. ಅವರ ಪುಣ್ಯದಿಂದ ನಾವು ವ್ಯವಹಾರ ಮಾಡಂಗ ಆಗ್ಯಾದ ಎಂದು ಕಣ್ಣೀರ ತೆಗಿತಾರೆ. ಅವರ ದಯೆಯಿಂದ ನೀವು ಮಾಸ್ತರರಾಗಿದ್ದರಲ್ಲ ಬಾಳ ಖುಷಿ ಆಯ್ತು ಅಂತ ಸಂಭ್ರಮಿಸ್ತಾರೆ.

ನಾವಿದ್ದುದು ಕರೆಂಟ್ ಇಲ್ಲದ, ಹೊಗೆಗಿಂಡಿ ಇಲ್ಲದ, ಮೇಲೆ ಅಡ್ಡಾಡಿದರೆ ನಡಗುವ, ಮಾತಾಡಿದರೆ ಮಣ್ಣು ಉದುರುವ, ಮಳೆ ಬಂದರೆ ರಜ್ಜಾಗುವಂತಹ, ಜಂತಿಯಲ್ಲಿ ಇಲಿ, ಹುಳ ಹುಪ್ಪಡಿಗಳು ವಾಸವಾಗಿರುವ, ನಿತ್ಯ ಚೇಳುಗಳು ಆಗಾಗ ಹಾವುಗಳು ದರ್ಶನ ಕೊಡುವ ಬಹುಶಃ ಜನ ವಾಸಕ್ಕೆ ಯೋಗ್ಯವಾಗಿರದ ಮನೆಯಲ್ಲಿ. ಹೊಗಿಗಿಂಡಿ ಇಲ್ಲದ ಮನೆ ಅಂದ್ರ ಊಹಿಸಿಕೊಳ್ಳದೆ ಕಷ್ಟ. ಅಡುಗೆ ಮಾಡುವಾಗ ಹೊಗೆ ಇಡೀ ಮನೆಯನ್ನು ಆವರಿಸಿ ಕಣ್ಣುಗಳಲ್ಲಿ ಉರಿ ಎದ್ದು, ಉಸಿರಾಡಿಸಲು ಪರದಾಡಬೇಕಾದಂತಹ ಪರಿಸ್ಥಿತಿ. ಒಂದರ್ಥದಲ್ಲಿ ನಿತ್ಯ ಗ್ಯಾಸ ಚೇಂಬರ್‌ನಲ್ಲಿ ಶಿಕ್ಷೆ ಕೊಟ್ಟ ಹಾಗೆ. ಇಂತಹ ಬದುಕಿಗೆ ಮುಕ್ತಿ ಸಿಗುತ್ತೋ ಇಲ್ಲೋ ಎಂದು ಒಮ್ಮೊಮ್ಮೆ ಅತ್ತಿದ್ದು ಉಂಟು. ಈಗ ನನ್ನ ಮಕ್ಕಳಿಗೆ ಆಗಾಗ ಈ ಬಗ್ಗೆ ಹೇಳ್ತಾ ಇದ್ರೆ ನಗತಾ ಇರತಾರೆ.

ನಾವು 5-6ನೇ ತರಗತಿ ಇದ್ದಾಗ ನಮ್ಮಪ್ಪನಿಗೆ ಬರುತ್ತಿದ್ದುದು ಕೇವಲ ಮೂರುನೂರು ರೂಪಾಯಿ ಪಗಾರ. ಅದರಲ್ಲಿ ಜೀವನ ಸಾಗಿಸಬೇಕಾಗಿತ್ತು. ಮರಳದ ತಿಪ್ಪಣನವರ ನ್ಯಾಯಬೆಲೆ ಅಂಗಡಿಯಲ್ಲಿ ಅಕ್ಕಿ ನಿತ್ಯಕ್ಕೆ ಆಹಾರ. ಸ್ಮರಿಸಬೇಕು ಅವರನ್ನ. ಉಪಯೋಗಕ್ಕೆ ಬಾರದ ರೇಷನ್ ಕಾರ್ಡ್ ಇದ್ದಾಗಲೂ ನಿಯಮ ಮೀರಿ ಅಪ್ಪನ ವ್ಯಕ್ತಿತ್ವ ನೋಡಿ ಸಾಮಾನ್ಯ ದರದಲ್ಲೇ ಬೇಸರಿಸಿಕೊಳ್ಳದ ಅಕ್ಕಿಯನ್ನ, ಗೋದಿಯನ್ನ ಕೊಡುತ್ತಿದ್ದರು. ಖಾದಿ ಸೀರೆ ದೋತ್ರ ಬಂದಾಗಲೂ ತೆಗೆದಿಡುತ್ತಿದ್ದರು. ತೊಗರಿ ಬೇಳೆ ಬೆಲೆ ಆಗ ಬಡವರ ಕೈಗೆ ನಿಲುಕದಷ್ಟಿತ್ತು. ಈಗಲೂ ಹಾಗೆ ಇದೆ. ಹಾಗಾಗಿ ಕಡಿಮೆ ಕಿಮ್ಮತ್ತಿಗೆ ಸಂತೆಯಲ್ಲಿ ಸಿಗುತ್ತಿದ್ದ ಹೆಸರಬೇಳೆ ನಮಗೆ ಸಾಂಬಾರಿಗೆ. ಅವನ್ನು ಒಡೆದು ಅದರಿಂದ ಮಾಡುವ ಸಾರು. ಅದರಲ್ಲಿ ಅವ್ವನಿಗೆ ಸರಿಯಾಗಿ ಅಡುಗೆ ಮಾಡಲು ಬರುತ್ತಿರಲಿಲ್ಲ. ಮಾಡಬೇಕು ಮಾಡಬೇಕು ಅನ್ನೋ ಮನೋಭಾವದವಳು. ಯಾವತ್ತಾದರೂ ನಾಷ್ಟ ಮಾಡಿದರೆ ಉದ್ದಿನ ಬೇಳೆ ಇಲ್ಲದ ಗುಂಡುಪಂಗಲು, ಕೊಬ್ರಿ, ಪುಟಾಣಿ ಇಲ್ಲದ ಬರಿ ಮೆಣಸಿನ ಕಾಯಿ ಚಟ್ನಿ. ಚೆನ್ನಾಗಿರುವ ಊಟ ದೂರವೇ ಉಳಿಯಿತು. ನಾವು ಇಡ್ಲಿ ತಿಂದಿದ್ದು ಮೆಟ್ರಿಕ್ಕಿಗೆ ಬಂದಾಗ. ಅಪ್ಪಗ ಮೂಲವ್ಯಾಧಿ ಆಪರೇಷನ್ ಆದ ಮೇಲೆ ಖಾರ ಕೊಡೋದು ಕಡಿಮೆ ಮಾಡಿ ಎಂದಾಗ. ಅಪ್ಪ ರಾಯಚೂರಿನಿಂದ ಬರುವಾಗ ಒಂದು ಇಡ್ಲಿ ಪಾತ್ರೆ ತೆಗೆದು ಕೊಳ್ಳೋಣ ಎಂದ್ರು. ಆಗ ಅಕ್ಕ ಕಾಲೇಜು ಅಭ್ಯಾಸದಲ್ಲಿದ್ಲು. ಅಕ್ಕನ ನೆರವಿನಿಂದ ಅವ್ವ ಪ್ರಥಮ ಬಾರಿಗೆ ಹವರಾದ ಇಡ್ಲಿ ಮಾಡಿಹಾಕಿದ್ಲು.

ವಯಸ್ಸಿನ ಅಂತರದಿಂದ ಆಗಾಗ ಮನಸ್ತಾಪಗಳು ಬರುತ್ತಿದ್ದವು. ಅವ್ವಳ ತಿಳುವಳಿಕೆ ಮಟ್ಟನೂ ಕಡಿಮೆ ಇದ್ದುದರಿಂದ ಅವ್ವ ಒಂದು ರೀತಿ ಒದರಾಡಕಿ, ಅಪ್ಪ ಒಂದು ರೀತಿ ಒದರ್ಯಾಡಾತ. ಅಮ್ಮ ಆಗಾಗ ಆತ್ಮಹತ್ಯೆ ಮಾಡಿಕೊಳ್ಳಾಕ ಪ್ರಯತ್ನಿಸಿದ್ಲು ಅದನ್ನು ತಡೆಯಲು ಏನು ಅರಿಯದ ನಾವು ಒದ್ಯಾಡೋದು. ನಿಜಕ್ಕೂ ಅದನ್ನು ನೆನೆಸಿಕೊಳ್ಳಬಾರದು.

ನಂಬಲಸಾಧ್ಯ ನಂಬಲೇಬೇಕು. ಪಾಪಿ ಸಮುದ್ರಕ್ಕ ಇಳದರೂ ಮೊಣಕಾಲಮಟ ನೀರು ಅನ್ನೋ ಹಾಂಗ ಬ್ರಾಹ್ಮಣರ ಓಣ್ಯಾಗ ಯಾವತ್ತಿಗೂ ನೀರಿನ ಬರಗಾಲ. ಇಳಿ ವಯಸ್ಸಿನಲ್ಲಿ ಅದುವಾಗಿರುವಂತಹ ಕಾಲುಗಳಿಂದ ನೀರು ತರೋದನ್ನ ನೆನೆಸಿಕೊಂಡ್ರೆ ಈಗಲೂ ಮೈಜುಂ ಎನ್ನುತ್ತೆ. ಅಂತಹ ಕಷ್ಟದ ಬದುಕನ್ನ ಎದುರಿಸಿದ ಮಹನೀಯ. ಮನೆಯಲ್ಲಿ ಶೌಚಾಲಯ ಇಲ್ಲವಾದ್ದರಿಂದ ಆ ಕಾರ್ಯಕ್ಕೆ ದೂರದ ಸ್ಥಳಕ್ಕೆ ತಡವರಿಸುತ್ತಾ ನಡೆದು

ಹೋಗಿಬರುವುದನ್ನು ನೋಡಿದರೆ ಕರಳು ಕಿತ್ತಿ ಬರುತ್ತಿತ್ತು. ವಯೋ ಬಾಧೆ, ಭವಿಷ್ಯದ ಮಕ್ಕಳ ಬಗ್ಗೆ ಚಿಂತಿಸುತ್ತ ನಿದ್ದೆ ಮಾಡದೆ ನರಳಾಡುತ್ತಿದ್ದ ಅಪ್ಪನ ಮನಸ್ಥಿತಿ ಅರಿತು ಮನಸ್ಸು ಹೋಯ್ದಾಡುತ್ತಿತ್ತು.

ಮಸ್ಕಿಗೆ ಬಂದದ್ದು ನಮ್ಮನ್ನು ಓದಿಸಲು. ನಿವೃತ್ತ ಶಿಕ್ಷಕನಾದ ಅಪ್ಪ ಟ್ಯೂಷನ್ ಹೇಳಿ ಹೊಟ್ಟೆಹೊರೆಯಬೇಕು ಎನ್ನುವ ನಿಲುವಿನಲ್ಲಿ. ಮರಾಠ ಎನ್ನುವ ಊರಿನಲ್ಲಿ ಕೆಲ ಜ್ಯೋತಿಷ, ಪಂಚಾಂಗಗಳನ್ನು ಓದಿ ಅಲ್ಲಿ ಜನಕ್ಕೆ ತಿಳಿಸ್ತಿದ್ದರಂತೆ. ನಿವೃತ್ತಿಯಲ್ಲಿ ಪ್ರೀತಿಯಿಂದ ಕೇಳಿಬರುವ ಬಡವರಿಗೆ ತಿಳಿದಷ್ಟು ಯಾವುದೇ ಫಲಾಪೇಕ್ಷೆ ಇಲ್ಲದೆ ಹೇಳತಿದ್ದ. ಇದು ವೈದಿಕ ವೃತ್ತಿ ಮಾಡುವವರಿಗೆ, ಮಡಿ ಅಮ್ಮನವರ ಕಿವಿಗೆ, ಕಣ್ಣಿಗೆ ಬಿದ್ದು ನಮ್ಮ ವೃತ್ತಿಗೆ ಧಕ್ಕೆ ತಂದಾರೂ ಅಂತ ತಿಳಿದು ವಯಸ್ಸಿನ ಅಂತರ ಗ್ರಹಿಸದೆ ''ಏನು ಕೀರ್ತಪ್ಪ ಮಾಸ್ತರ ಊರಾಗ ಬಾಳ್ವೆ ಮಾಡಬೇಕು ಅನಕೊಂದರಾ ಹ್ಯಾಂಗ'' ಎಂದು ಕೇಳುವಷ್ಟರ ಮಟ್ಟಿಗೆ ಮಾತಾಡಿದ್ದರಂತೆ. ನಮ್ಮಪ್ಪ ಇಂತವಕ್ಕೆಲ್ಲ ಸೊಪ್ಪ ಹಾಕುವವರಲ್ಲ. ಹೇಳಿದವರ ಮಕ್ಕಳಿಗೆ ವೈದಿಕ ಪಕ್ಷ ಇದ್ದಾಗ ಆಮಂತ್ರಣ ನೀಡಿ ಹೇಗೆ ಈ ವೃತ್ತಿ ನಿಭಾಯಿಸಬೇಕೆಂದು ತಿಳಿಹೇಳಿಕೊಟ್ಟವರು.

ಅಸಮರ್ಥರ ಶೋಷಣೆ ಸರ್ವಕಾಲಿಕ, ಜಾತ್ಯಾತೀತ. ಮುಂದವರೆದ್ದು ಎಂದು ಹಣೆಪಟ್ಟಿಕಟ್ಟಿಕೊಂಡು ಹುಟ್ಟಿದ ಜಾತಿಯಲ್ಲೂ ಶೋಷಣೆ ಇದೆ. ಇಲ್ಲಿಯೂ ಸಮಾಜದಲ್ಲಿ ಕಾಣುವಂತಹ ಎಸ್ಸಿ. ಎಸ್ಟಿ. ಓಬಿಸಿ ಕೆಟಗರಿಗಳಿವೆ. ಹೇಳಿಕೊಳ್ಳಲು ಬಾಯಿಲ್ಲ ಅಷ್ಟೆ. ಆ ಪರಿಸ್ಥಿತಿಯಲ್ಲಿ ಶೋಷಿತರಾಗಿ ಧ್ವನಿ ಕಳೆದುಕೊಂಡ ಜೀವಗಳೆಷ್ಟೋ. ವಿಧವೆಯರು, ಬಡವರು, ಕಡಿಮೆ ಮತದವರು, ಅಂಗಹೀನರು ಅಲ್ಲಿಯೂ ನಾನಾ ಬಗೆ. ನಾವು ಇಂತಹ ಶೋಷಣೆಗೆ ಒಳಗಾಗಿಲ್ಲ ಎಂದು ಹೇಳುವ ಧೈರ್ಯ ಇಲ್ಲ. ಪೇಪರ್ ಓದಲು ಇದ್ದವರ ಮನೆಗೆ ಹೋದರೆ ಕಸಿದುಕೊಂಡು ಬೈದಿದ್ದು, ನೀರಿಗೆ ಹೋದರೆ ದಬ್ಬಿದ್ದು, ಶಾಲೆಗೆ ಬುತ್ತಿ ಒಯ್ದಾಗ ಹಂಚಿಕೊಳ್ಳಲು ನಿರಾಕರಿಸುತ್ತಿದ್ದುದು, ಮದುವೆ ಮುಂಜುವಿಗಳಿಗೆ ಓಣಿಗೆಲ್ಲ ಆಮಂತ್ರಣ ನೀಡಿದರೂ ನಮಗೆ ಮಾತ್ರ ಬಿಡುತ್ತಿದ್ದದು, ತಾತ ಮೊಮ್ಮೊಕ್ಕಳಂತೆ ಕಾಣುತ್ತಿದ್ದ ನಮ್ಮ ಕುಟುಂಬವನ್ನು ಹೀಯಾಳಿಸುತ್ತಿದ್ದುದು, ಒಂದಲ್ಲ ಅವನ್ನೆಲ್ಲ ನೆನಸಿಕೊಂಡರೆ ಮನಭಾರವಾಗದೆ ಇರದು.

ವಿಷಯಾಂತರಕ್ಕೆ ಕ್ಷಮೆ ಇರಲಿ. ಇಳಿ ವಯಸ್ಸು. ಆರ್ಥಿಕ ದುಸ್ಥಿತಿ, ಮಕ್ಕಳ ಪಾಲನೆ, ಸಾಮಾಜಿಕ ಅಪಸ್ವರ ಇವುಗಳ ಮಧ್ಯ ಅವರು ಉಳಿಸಿಕೊಂಡಿದ್ದ ಲವಲವಿಕೆ, ಹುಮ್ಮಸ್ಸು ಎಂತವರನ್ನು ನಾಚಿಸಬೇಕು. ಬಂದವರಿಗೆಲ್ಲ ನಗುಮೊಗದಿಂದ ಮಾತಾಡುವುದು ಅದೆಂತ ಚೈತನ್ಯ ಅವರಲ್ಲಿ. ಎಂದೂ ತಮಗೆ ಬಂದ ಕಷ್ಟಗಳ ಬಗ್ಗೆ ಎದೆಗುಂದಿದವರಲ್ಲ. ಬದುಕನ್ನು ಆತ್ಮವಿಶ್ವಾಸದಿಂದ ಎದುರಿಸಿದವರು. ಅವರು ಮನೆಗಾಗಿ ಮಾಡಿದ ಕೆಲಸ ಸಮಾಜಕ್ಕೆ ಮಾಡಿದ್ದರೆ ಅದು ಬೇರೆನೆ ಆಗಿರುತ್ತಿತ್ತು. ಮನೆ ಮಾರು ಎರಡು ಗೆದ್ದವರು.. ಅಪ್ಪನ ಮಾತಿನ ಪ್ರಭಾವಕ್ಕೆ ಒಳಗಾಗದವರೇ ಇಲ್ಲ. ನಾನು ಸೇವೆಗೆ ಸೇರಿದ ಮೇಲೆ ನಮ್ಮ ಅನೇಕ ಹಿರಿಯ ಸಹೋದ್ಯೋಗಿ ಮಿತ್ರರು ನನಗಾಗಿ ಮನೆಗೆ ಬಂದರೂ ನಾನಿರದಿದ್ದರೂ ತಾಸುಗಟ್ಟಲೇ ಅಪ್ಪನೊಂದಿಗೆ ಮಾತಿಗಿಳಿದು ಹೋಗುತ್ತಿದ್ದರು. ಬಹುಶಃ ಆ ಸ್ಥಿತಿ ಈಗಿದ್ದರೆ ನಮ್ಮ ಮನೆಗೆ ಯಾರೂ ಬರುತ್ತಿರಲಿಲ್ಲವೇನೋ? ಆದರೆ ಲೈಟಿರದ ಮನೆಗೆ ಅಪ್ಪನ ಮೇಲಿನ ಅಭಿಮಾನಕ್ಕೆ ಎಷ್ಟು ಬಂಧುಗಳು ಅಂತಸ್ಥಿನ ಲೆಕ್ಕವಿಲ್ಲದೆ ಬಂದು ಇದ್ದು ಹೋಗುತ್ತಿದ್ದರು.

ನಾನು ಗ್ರಹಿಸಿಲ್ಲ ಆದರೆ ನನ್ನಪ್ಪ ಕೆಲಸ ಮಾಡಿದ ಆ ಊರಿನ ಜನ ಹೇಳೋರು. ರಜಾ ಇತ್ಯಾದಿ ದಿನಗಳು ಬಂದರೆ ಮೂವತ್ತು ಜನಕ್ಕೆ ಕಡಿಮೆ ಇರುತ್ತಿರಲಿಲ್ಲವಂತೆ. ತಂಗಿ, ತಮ್ಮಂದಿರ ಮಕ್ಕಳೆಲ್ಲ ಅಲ್ಲೇ ಓದಿದವರು. ನಮ್ಮಜ್ಜಿ ಅಲ್ಲೇ ಇರೋರು. ಅದು ಮಾತೃ ಹೃದಯದ ಮನಸ್ಸು ಬಂದೋರಿಗೆಲ್ಲ ಓಣಿಗಿನ ಮಂದಿಗೆಲ್ಲ ಮಾಡೋದು. ಈಗಲೂ ಆ ಊರಿಗೆ ಹೋದ್ರೆ, ಎಲ್ಲರೂ ನೆನೆಯುವವರೆ. ವಯಸ್ಸಾಗಿರುವ ನನ್ನ ಅಕ್ಕನ ಮಕ್ಕಳು, ಅಕ್ಕಂದಿರು, ಅತ್ತೆ ಮಾವನ ಮಕ್ಕಳು ಅಪ್ಪನ ಆ ಪ್ರೀತಿಯ ಸಾಮ್ರಾಜ್ಯವನ್ನು, ಅಪ್ಪನ ಅಂತಃಕರಣವನ್ನು ಅಪಾರವಾಗಿ ಸ್ಮರಿಸುವವರೇ. ಮುಪ್ಪಿನ ಕಾಲದಲ್ಲಿ ಅಪ್ಪನಿಗೆ ಏನು ಮಾಡದಿದ್ದರೂ ಅವರ ಋಣದ ನೆನಪು ಅವರ ಮೇಲಿದೆಯಲ್ಲ ಅದೆ ಸಂತಸ.

ವಯಸ್ಸಾದರೂ ಆತ್ಮಾಭಿಮಾನ ಬಿಡದ ವ್ಯಕ್ತಿ. ಎಲ್ಲ ಕೆಲಸಗಳನ್ನು ಸ್ವಂತವಾಗಿ ಮಾಡಬೇಕೆನ್ನುವ ಹಠವಾದಿ. ಆರಾಮ ಇಲ್ಲದಾಗ್ಯೂ ಕೈ ಹಿಡಿಯಲು ಹೋದರೆ ಅವರ ಆತ್ಮಾಭಿಮಾನಕ್ಕೆ ಅಡ್ಡಿಯಾಗುತ್ತಿತ್ತು. ಕೊಸರಿಕೊಳ್ಳುತ್ತಿದ್ದರು. ದೇಹ ಬಿಡುವ ಹಿಂದಿನ ದಿನವೂ ಆ ಗತ್ತನ್ನು ಪಾಲಿಸಿದವರು. ಅಪ್ಪ ತನ್ನ ಸೇವಾವಧಿಯಲ್ಲಿ ಏನನ್ನು ಮಾಡಿಕೊಳ್ಳಲಿಲ್ಲ. ನಮಗೆ ಇಚ್ಛಿತ ಓದು ಓದಿಸಲು ಸಾಧ್ಯವಾಗದಿದ್ದರೂ ಒಳ್ಳೆ ಆತ್ಮಾಭಿಮಾನದ ಬದುಕು ನಡೆಸುವ ಸಂಸ್ಕಾರ ನೀಡಿದವರು. ಓದುವಾಗ ನಮ್ಮೊಂದಿಗೆ ಹಿರಿಯ ವಿದ್ಯಾರ್ಥಿಯಾಗಿ ಮೊದಲೇ ಕಲಿತುಕೊಂಡು ಲೆಕ್ಕ ಹೇಳಿಕೊಡುತ್ತಿದ್ದರು, ಶಾಲೆಗೆ ಹೋಗಿ ಬರುವಷ್ಟರಲ್ಲಿ ಎಲ್ಲ ಪ್ರಶ್ನೋತ್ತರಗಳಿಗೆ ಉತ್ತರ ಹುಡುಕಿ ಇಟ್ಟಿರುತ್ತಿದ್ದರು, ಹಳೆಯ ಪ್ರಶ್ನೆಗಳನ್ನು ಸಂಗ್ರಹಿಸಿ ಆ ಪ್ರಶ್ನೆಗಳನ್ನು ಬಿಡಿಸಲು ನೀಡುತ್ತಿದ್ದರು. ಏಳನೇ ತರಗತಿ ಓದಿದ್ದ ಅಪ್ಪ ನಮಗಾಗಿ ಹತ್ತನೆಯ ತರಗತಿ ಪುಸ್ತಕಗಳನ್ನು ಓದುತ್ತಿದ್ದ. ಪರೀಕ್ಷೆ ಇದ್ದಾಗ ಪ್ರೀತಿಯಿಂದ ಎಬ್ಬಿಸಿ ಹಾಲಿನ ಪುಡಿಯಿಂದ ಚಹಾ ಮಾಡಿ ಕುಡಿಸಿ ತಲೆಸವರಿ 'ನಿದ್ದೆ ಮಾಡಬೇಡಪ್ಪ ಓದು, ಓದು, ಬದುಕು ಕಟ್ಟಿಕೋ' ಎಂದು ಆಲಂಗಿಸುತ್ತಿದ್ದರು. ಕಾಲೇಜು ಅಭ್ಯಾಸಕ್ಕಾಗಿ ಹೊರಗಡೆ ಓದುವಾಗಲೂ ಅಲ್ಲಿ ಅಪ್ಪನ ನೆರವನ್ನು ಪಡೆದ ಹಲವಾರು ಮನೆಗಳಿದ್ದರೂ ಯಾರನ್ನು ಬೇಡದೆ 'ನೀನು ಹಾಸ್ಟೆಲ್‌ನಲ್ಲಿಯೆ ಇದ್ದು ಸ್ವಂತ ಮಾಡಿಕೊಂಡು ಉಣ್ಣು ಯಾರ ಹಂಗಿನಲ್ಲಿರಬೇಡ' ಎಂಬ ಸ್ವಾಭಿಮಾನದ ಚಿಗುರನ್ನು ಬಿತ್ತಿದವರು ಅಪ್ಪ. ಬದುಕಿನಲ್ಲಿ ಸುಖಕ್ಕಿಂತ ಕಷ್ಟಗಳ ಸರಮಾಲೆಯಲ್ಲೇ ಹೊದ್ದು ಮಲಗಿದ ಅಪ್ಪನಿಗೆ ಇರುವಷ್ಟು ದಿನ ಸುಖದಲ್ಲಿರಿಸಲು ಉದ್ಯೋಗ ದೊರಕಿದ ಮರು ತಿಂಗಳಲ್ಲೇ ನಾನು ಅಪ್ಪನಿಗೆ ಸುಖ ಎನಿಸಬಹುದಾದ ಎಲ್ಲಾ ಕಾರ್ಯ ಮಾಡಿದೆ. ಅಪ್ಪನಿಗಾಗಿ ಶೌಚವಿರುವ, ಅಂದದ ಮನೆ, ಮಲಗಲು ಮಂಚ ಮೆತ್ತನೆ ಗಾದಿ ಖರೀದಿಸಿದೆ, ಮೂಕವಿಸ್ಮಿತನಾಗಿ ಗ್ರಹಿಸುತ್ತಿದ್ದ ಟಿ.ವಿ.ಯನ್ನು ತಂದಿರಿಸಿದೆ. ಅಪ್ಪನಿಗೆ ಇಷ್ಟವಾಗುವ ಎಲ್ಲವನ್ನು ತಂದಿರಿಸಿ ಅವರ ವೃದ್ಧಾಪ್ಯದಲ್ಲಿ ಮಗುವಿನ ಆನಂದವನ್ನು ಕಂಡು ಸಂತೃಪ್ತನಾದೆ.

ಈಗಲೂ ನಾನು ಅಪ್ಪನ ಅಪ್ಪಟ ಅಭಿಮಾನಿ. ನಮಗಾಗಿ ಆಸ್ತಿ, ಮನೆ ಕಡೆಗೆ ಒಂದು ಫ್ಲಾಟು ಮಾಡಲಿಲ್ಲ, ಮದುವೇನೂ ಇಚ್ಛೆಯಂತೆ ಮಾಡಲಿಲ್ಲ. ಆದರೆ ಮಾಡಲಿಲ್ಲ ಎನ್ನುವ ಕೊರಗು ಇರದಂತೆ ನಮ್ಮ ಮನದಲ್ಲಿ ಈಗಲೂ ನೆಲೆಗೊಂಡಿದ್ದಾರೆ. ಅಪ್ಪನ ನಗುಮೊಗದ ಆ ಫೋಟೋ ನೋಡಿದೊಡನೆ ಎಂತಹ ನೋವು ಹಗುರಾಗದೆ ಇರದು. ಈಗಲೂ ಆಗಾಗ ಕನಸಿನಲ್ಲಿ ಆಪ್ತವಾಗಿ ಮಾತಾಡುವ ಮನಸ್ಸು ಅವರದು.

☆

# ಮೀನೆಂಬ ಸನ್ಯಾಸಿ ಸಂಸಾರದ ಕತೆ

**- ಸುಷ್ಮಾ ನಿವಾಳ್ಕರ್**

**ನ್ಯೂ**ಯಾರ್ಕಿನಲ್ಲಿರುವ ನನ್ನ ಮಗನ ಶಾಲೆಯಲ್ಲಿ ವಾರ್ಷಿಕ ಉತ್ಸವಕ್ಕೆ ಇನ್ನೂ ಒಂದು ವಾರ ಬಾಕಿ ಇತ್ತು. ಆದರೆ ಅವನ ಉತ್ಸಾಹ ಈಗಲೇ ಎದ್ದು ಕಾಣುತ್ತಿತ್ತು. ಮಾತು ಮಾತ್ರ ಗೋಲ್ಡ್ ಫಿಶ್ ಬಗ್ಗೆ. ಅಲ್ಲಿ ನಡೆಯಲಿರುವ ಒಂದು ಸ್ಪರ್ಧೆಯಲ್ಲಿ ಗೆದ್ದವರಿಗೆ ಒಂದು ಗೋಲ್ಡ್ ಫಿಶ್ ಬಹುಮಾನ. ಅದರ ಮೇಲೆ ಅವನ ಕಣ್ಣು. ಅದನ್ನು ಗೆಲ್ಲಲೇ ಬೇಕೆಂಬ ಹಂಬಲ.



ಕೊನೆಗೂ ಉತ್ಸವದ ದಿನ ಬಂದಿತು.

ಅದೊಂದು ಮಾಮೂಲು ಸ್ಪರ್ಧೆ, ಗೆಲ್ಲುವುದು ಸುಲಭ ಎಂದು ಭಾವಿಸಿದ್ದೆ. ಮಗರಾಯ ಪ್ರವೇಶ ಶುಲ್ಕವಾಗಿ 5 ಡಾಲರ್ ಪಡೆದುಕೊಂಡ. ಅವನಿಗೆ ಒಂದು ಪುಟ್ಟ ಚೀಲದಲ್ಲಿ 20 ಟೇಬಲ್ ಟೆನ್ನಿಸ್ ಬಾಲ್‌ಗಳನ್ನು ಕೊಟ್ಟರು. ಆ ಬಾಲ್‌ಗಳನ್ನು ಅನತಿ ದೂರದಲ್ಲಿಟ್ಟಿದ್ದ ಗಾಜಿನ ಬೌಲ್‌ನತ್ತ ಎಸೆಯಬೇಕಿತ್ತು. ಬೌಲ್ ಒಳಗೆ ಬಾಲ್ ಬಿದ್ದರೆ ಒಂದು ಗೋಲ್ಡ್ ಫಿಶ್ ಬಹುಮಾನ.

ನನ್ನ ಮಗ ಎಸೆಯಲು ಶುರು ಮಾಡಿದ. ಸ್ನೇಹಿತರು ಅವನನ್ನು ಹುರಿದುಂಬಿಸುತ್ತಿದ್ದರು. 20 ಬಾಲ್‌ಗಳೂ ಎಸೆದಾಯಿತು. ಆದರೆ ಒಂದೂ ಆ ಬೌಲ್‌ನಲ್ಲಿ ಬೀಳಲಿಲ್ಲ. ಮುಖ ಪೆಚ್ಚಾಯಿತು. ಅವನು ಸ್ನೇಹಿತರೊಡನೆ ಸಮಾಲೋಚಿಸಿದ. ನಂತರ ನನ್ನ ಬಳಿ ಬಂದ. 'ಅಮ್ಮಾ, ಇನ್ನೈದು ಡಾಲರ್ ಕೊಡು ಪ್ಲೀಸ್' ಎಂದು ಬೇಡಿದ. ಇಲ್ಲ ಎನ್ನಲಾಗಲಿಲ್ಲ. 5 ಡಾಲರ್ ನನ್ನ ಕೈ ಬಿಟ್ಟಿತು. 'ಇದೇ ಕೊನೆ ಛಾನ್ಸ್' ಎಂದೆ. ಒಪ್ಪಿಕೊಂಡು ಹೋದ. ನಾನು ಲೆಕ್ಕ ಹಾಕಿದೆ. ಈಗವನು ಗೆದ್ದರೆ 10 ಡಾಲರ್ ಕೊಟ್ಟು ಒಂದು ಗೋಲ್ಡ್ ಫಿಶ್ ಕೊಡಂತಾಗುತ್ತದೆ. ಅಂಗಡಿಯಲ್ಲೇ ಕೊಂಡರೆ ಬೆಲೆ ಎಷ್ಟಾಗಬಹುದು?

ನನ್ನ ಮಗನತ್ತ ಕಣ್ಣು ಹಾಯಿಸಿದೆ. ಅವನು ಫುಲ್ ಬ್ಯುಸಿ. ಸ್ನೇಹಿತರಿಂದ ಪುಕ್ಕಟೆ ಸಲಹೆಗಳು - ನಿಧಾನವಾಗಿ ಎಸೆ, ಸರಿಯಾಗಿ ಗುರಿ ಇಡು, ಕೈ ಮೇಲಕ್ಕೆತ್ತು ಎಸೆಯುವಾಗ.. ಒಂದೇ ಎರಡೇ..

ಸರಿಯಾಗಿ ಗುರಿ ಇಟ್ಟು, ಕೈ ಮೇಲಕ್ಕೆತ್ತಿ ನಿಧಾನವಾಗಿ ಎಸೆದಾಗ... ಓ! ಒಂದು ಬಾಲ್ ಬೌಲ್‌ನಲ್ಲಿ ಬಿದ್ದೇ ಬಿಟ್ಟಿತು. 'ಹೋ' ಎಂದಿತು ಗೆಳೆಯ ಸಮೂಹ. ನನ್ನ ಮಗ ಒಲಿಂಪಿಕ್ಸ್‌ನಲ್ಲಿ ಗೆದ್ದವನಂತೆ ಬೀಗಿದ. ಗೋಲ್ಡ್ ಫಿಶ್ ಕೈ ಸೇರಿತು. ಖುಷಿಯೋ ಖುಷಿ. 10 ಡಾಲರ್ ಬೆಲೆ ಬಾಳುವ ಆ ಮೀನನ್ನು ಹೆಮ್ಮೆಯಿಂದ ನನ್ನ ಮಗ ಕೈಲಿ ಹಿಡಿದ.

'ಸರ್ ಅದಕ್ಕೆ ಆಹಾರ ಕೊಳ್ಳುತ್ತೀರ?' ಎಂದು ಕಾರ್ಯಕರ್ತರು ಕೇಳಿದರು.

ಆಗ ಇಷ್ಟು ಹೊತ್ತೂ ಸುಮ್ಮನಿದ್ದ ನನ್ನ ಗಂಡ ತಲೆ ಹಾಕಿ 'ಹೇಗೂ ಆ ಫಿಶ್‌ಗಾಗಿ ಒಂದು ಟ್ಯಾಂಕ್ ಕೊಳ್ಳಬೇಕಿದೆ. ಆಗ ಆಹಾರವನ್ನೂ ಕೊಳ್ಳುತ್ತೇವೆ' ಎಂದ.

ಈಗ ನಾವು ಮೂವರೂ, ಸಾರಿ ಫಿಶ್ ಸೇರಿ ನಾಲ್ಕು ಮಂದಿ, ಅಂಗಡಿಯತ್ತ ಹೊರಟೆವು. ನೀರು ತುಂಬಿದ್ದ ಪ್ಲಾಸ್ಟಿಕ್ ಚೀಲದಲ್ಲಿ ಓಡಾಡುತ್ತಿದ್ದ ಆ 10 ಡಾಲರ್ ಬೆಲೆ ಬಾಳುವ ಆ ಸಿಂಗಲ್ ಫಿಶ್ ಬಹುಶಃ ತನ್ನ ಮುಂದಿನ ಮನೆ ಎಲ್ಲಿರಬಹುದು ಎಂದು ಯೋಚಿಸುತ್ತಿತ್ತೇನೋ?

ಅನೇಕ ವಿಷಯಗಳ ಬಗ್ಗೆ ನಮ್ಮ ಮೂವರಲ್ಲಿ ಭಿನ್ನಾಭಿಪ್ರಾಯ ಮೂಡುತ್ತದೆ. ಈಗಲೂ ಅಷ್ಟೆ. ನನಗೆ ಒಂದು ಈಗಲೇ ಒಂದು ಟ್ಯಾಂಕ್ ಬೇಕಿರಲಿಲ್ಲ. 'ಒಂದು ಪ್ಲಾಸ್ಟಿಕ್ ಬೌಲ್ ಕೊಂಡು ಅದರಲ್ಲಿ ಗೋಲ್ಡ್ ಫಿಶ್ ಸಾಕೋಣ' ಎಂಬ ನಿಲುವನ್ನು ಮುಂದಿಟ್ಟೆ. ಆದರೆ ನನ್ನ ಗಂಡನಿಗೆ ಫಿಶ್ ಟ್ಯಾಂಕ್, ಅದರಲ್ಲಿ ದೀಪ, ಗಿಡ ಎಲ್ಲ ಇರುವ ಆಧುನಿಕ ಟ್ಯಾಂಕ್ ಬೇಕಿತ್ತು. ನನ್ನ ಮಗ ಒಂದು ದೊಡ್ಡ ಟ್ಯಾಂಕ್ ಇರಲಿ ಎಂದ.

ಅಂಗಡಿ ತಲುಪಿದಾಗ ಅಲ್ಲೊಂದು ಮೀನಿನ ಪ್ರಪಂಚವೇ ತೆರೆದುಕೊಂಡಿತು. ತಂದೆ ಮಗ ಚರ್ಚಿಸಿ 70 ಡಾಲರ್ ಕೊಟ್ಟು ಅತ್ಯಾಧುನಿಕ ಟ್ಯಾಂಕ್ ಕೊಂಡರು. ಅದನ್ನು ಸಿಂಗರಿಸಲು ಬಣ್ಣದ ಗೋಲಿಗಳಿಗಾಗಿ 20 ಡಾಲರ್ ಕೈಬಿಟ್ಟಿತು. ಮತ್ತೆ ಆಹಾರ ಬೇಡವೆ? ಅದಕ್ಕಾಗಿ ಇನ್ನೊಂದು 10 ಡಾಲರ್ ಖರ್ಚಾಯಿತು. ಈಗ ನನಗೆ ಒಂದು ಕುತೂಹಲವಾಯಿತು. ಇಲ್ಲಿ ಗೋಲ್ಡ್ ಫಿಶ್ ಕೊಂಡರೆ ಎಷ್ಟು ಬೆಲೆ ಇರಬಹುದು? ವಿಚಾರಿಸಿದೆ. 'ಓನ್ಲಿ 33 ಸೆಂಟ್ಸ್ ಮೇಡಂ' ಎಂದಳು ನಗುನಗುತಾ ಸೇಲ್ಸ್ ಹುಡುಗಿ. ಹತ್ತು ಡಾಲರ್‌ಗೆ ಎಷ್ಟು ಗೋಲ್ಡ್ ಫಿಶ್ ಬರಬಹುದಿತ್ತು ಎಂದು ಮನಸ್ಸಿನಲ್ಲೇ ಲೆಕ್ಕ ಹಾಕುತ್ತ 70 ಡಾಲರ್ ಟ್ಯಾಂಕ್, 10 ಡಾಲರ್ ಗೋಲಿ ಮತ್ತು 10 ಡಾಲರ್ ಫಿಶ್ ಫುಡ್ ಜತೆಗೆ 10 ಡಾಲರ್ ಖರ್ಚು ಮಾಡಿ ಪಡೆದ 33 ಸೆಂಟ್ ಬೆಲೆಬಾಳುವ ಒಂದು ಗೋಲ್ಡ್ ಫಿಶ್‌ನೊಡನೆ ಮನೆಗೆ ಹೊರಟೆವು. ಗೋಲ್ಡ್ ಫಿಶ್ ನಗುತ್ತಿತ್ತೇನೋ ಆದರೆ ನನಗೆ ಗೊತ್ತಾಗಲಿಲ್ಲ.

ಈಗ ನನ್ನ ಮಗ ಆ ಒಂಟಿ ಮೀನಿಗೆ ಕಂಪನಿ ಇರಲಿ ಎಂದು ಹೇಳುತ್ತಿದ್ದಾನೆ. ಇನ್ನೊಂದು ಮೀನಿಗೆ ಎಷ್ಟು ಖರ್ಚು ಬರುತ್ತದೋ ನೋಡಬೇಕು.

ಸನ್ಯಾಸಿ ಸಂಸಾರದ ಬಗ್ಗೆ ಕೇಳಿದ್ದೆ. ಮೀನಿನ ಸಂಸಾರ ಒಂದು ಹೊಸ ಅನುಭವ ನನಗೆ.

☆

---


**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಧರೆಗಿಳಿದ ಕೈಲಾಸ

- ರತ್ನಾ ಮಣೂರ

''ಒಂದೊಂದೇ ಕಲ್ಲನ್ನು ಕೆತ್ತಿ ಜೋಡಿಸಿ, ಯೋಜಿಸಿ ಕಟ್ಟಿದ ದೇವಾಲಯವಿದಲ್ಲ. ಅನರ್ಘ್ಯ ರತ್ನವನ್ನು ಕೆತ್ತಿ ಸುಂದರವಾದ ಆಭರಣ ತಯಾರಿಸಿದಂತೆ ಬೆಟ್ಟವನ್ನು ಕೊರೆದು ನಿರ್ಮಿಸಿದ ಏಕಶಿಲಾ ರಚನೆಯ ಉತ್ಕೃಷ್ಟ ದೇವಾಲಯ ಎಲ್ಲೋರಾದ ಈ ಕೈಲಾಸ ದೇವಾಲಯ. ಬೃಹತ್ ಬೆಟ್ಟವನ್ನು ಮೇಲಿನಿಂದ ಕೆಳಗೆ ಮೊದಲು ಕಡೆದು, ನಂತರ ಹೊರಗಿನಿಂದ ಒಳಕ್ಕೆ ಕೊರೆದು ಕೈಲಾಸದ ರೂಪ ಕೊಟ್ಟಿರುವುದು ಅದ್ಭುತ.'' ಮಾರ್ಗದರ್ಶಿ ಮನೀಷ ವಿವರಿಸುತ್ತಿದ್ದಂತೆ ನಾವು ಮಂತ್ರಮುಗ್ಧರಾಗಿ ಹಿಂಬಾಲಿಸುತ್ತಿದ್ದೆವು.

ದೇವಾಲಯದ ಮುಂಭಾಗದಲ್ಲಿರುವ ನೂರು ಅಡಿ ದೀಪಸ್ಥಂಬವನ್ನು ವಿಸ್ಮಯದಿಂದ ತಲೆ ಎತ್ತಿ ನೋಡುತ್ತಿರುವಾಗ, ಪ್ರವಾಸಿಗರಲ್ಲಿ ರೋಮಾಂಚನ ಮೂಡಿಸುವ ಸ್ವರದಲ್ಲಿ ಮನೀಷ ಹೇಳಿದ, ''ದೀಪಸ್ಥಂಬದ ಎತ್ತರದ ಆಧಾರದ ಮೇಲೆ ಲೆಕ್ಕ ಹಾಕಿ ಅಂದಾಜಿಸಿದಾಗ, ಬೆಟ್ಟವನ್ನು ಕಡಿದು, ಕೊರೆದು ಹಾಕಲಾಗಿರುವ ಕಲ್ಲಿನ ಪ್ರಮಾಣ 4,00,000 ಟನ್ನುಗಳು. ಹದಿನೆಂಟು ವರ್ಷಗಳ ಕಾಲಾವಧಿಯಲ್ಲಿ ದೇವಾಲಯವನ್ನು ನಿರ್ಮಿಸಿದುದಾಗಿ ಇತಿಹಾಸತಜ್ಞರು ಹೇಳುತ್ತಾರೆ. ಕೆಲಸಗಾರರು ದಿನದಲ್ಲಿ 12 ಗಂಟೆ ಸತತ ಕೆಲಸ ಮಾಡಿದುದಾಗಿ ಭಾವಿಸಿದರೆ, ಪ್ರತಿವರ್ಷ 22,000 ಟನ್ನು, ಪ್ರತಿದಿನ 60 ಟನ್ನು, ಅಂದರೆ ಗಂಟೆಗೆ 5 ಟನ್ನಿನಷ್ಟು ಶಿಲೆಯನ್ನು ಬೆಟ್ಟದಿಂದ ಕೊರೆದು ತೆಗೆಯಲಾಗಿದೆ. ಇದು ಕಲ್ಪನೆಗೂ ಮೀರಿದುದು. ಭವ್ಯತೆ, ಔನ್ನತ್ಯ ಮತ್ತು ಸೌಂದರ್ಯ ಇಲ್ಲಿ ಒಗ್ಗೂಡಿವೆ.''

ಗೈಡ್ ಮನೀಷ ಮತ್ತೂ ಭಾವುಕನಾಗಿ ವಿವರಿಸತೊಡಗಿದ, ''ಇಲ್ಲಿ ನೋಡಿ, ಕೈಲಾಸವನ್ನೇ ಎತ್ತುತ್ತಿರುವ ರಾವಣನ ಶಿಲ್ಪ. ಕೈಲಾಸವನ್ನು ಎತ್ತುವಾಗ ರಾವಣನ ಸ್ನಾಯುಗಳು ಉಬ್ಬಿವೆ, ಕೈಲಾಸವು ಅಲುಗಾಡಿದಾಗ ಹುಲ್ಲೆಯಂತೆ ಬೆದರಿದ ಪಾರ್ವತಿ ಆಸರೆಗೆ ಶಿವನ ತೋಳನ್ನು ಹಿಡಿದಿದ್ದಾಳೆ, ಹಿನ್ನೆಲೆಯಲ್ಲಿ ಭಯಭೀತರಾದ ಸ್ತ್ರೀಯರಿದ್ದಾರೆ, ಶಿವಗಣಗಳೂ ಹೆದರಿ ನಿಂತಿವೆ, ವಾನರಗಳಂತೂ ಅಂಜಿಬಿಟ್ಟಿವೆ. ದೃಶ್ಯಕಾವ್ಯವನ್ನು, ಕಲ್ಲಿನಲ್ಲಿ ಕೆತ್ತಿದ್ದಾನೆ ಶಿಲ್ಪಿ. ಈ ದೇವಾಲಯವನ್ನು ನೋಡದವ ಕಣ್ಣಿದ್ದೂ ಕುರುಡನಂತೆ.''

ಮಾರ್ಗದರ್ಶಿ ಮನೀಷನ ವಿವರಗಳನ್ನು ತನ್ಮಯತೆಯಿಂದ ಕೇಳುತ್ತ, ಧನ್ಯತೆಯಿಂದ ಅದರ ಸೌಂದರ್ಯವನ್ನು ಕಣ್ಣಲ್ಲಿ ತುಂಬಿಕೊಳ್ಳುತ್ತಿದ್ದೆ. ಧರೆಗಿಳಿದ ಈ ದೇವಾಲಯವನ್ನು ನೋಡಿ ಜನ್ಮ ಪಾವನವಾಯಿತೆಂದುಕೊಂಡೆ. ಕಣ್ಣುಗಳು ಭಾವಪೂರ್ಣತೆಯಿಂದ ತೇವಗೊಂಡವು. ಇನ್ನು ನನ್ನ ಕಣ್ಣು ಕುರುಡಾದರೂ ಬೇಸರವಿಲ್ಲ ಎಂದುಕೊಳ್ಳುತ್ತ ಮೆಟ್ಟಿಲಿಳಿಯುತ್ತಿರುವಾಗ ದೇವರು ತಥಾಸ್ತು ಎಂಬಂತೆ ಕನ್ನಡಕ ಕೆಳಕ್ಕೆ ಬೀಳಬೇಕೆ? ಮುಂದಿನ ಪ್ರವಾಸದುದ್ದಕ್ಕೂ ಕನ್ನಡಕವಿಲ್ಲದೆ ಕುರುಡನಂತೆ ಪಟ್ಟ ಫಜೀತಿ ವಿವರಿಸಬೇಕೆ?

☆

# ಕುರಿಗಳು....

**- ನಂದಿನಿ ಕಾಪಡಿ**

**ಎಂ**ಭತ್ತರ ದಶಕ, ಮುಂಬೈ ಮಹಾನಗರದಲ್ಲಿ ನಮ್ಮ ವಾಸ ಯಜಮಾನರ ಬ್ಯಾಂಕಿನ ಸುಂದರ ಎರಡು ಬಿ.ಎಚ್.ಕೆ. ಫ್ಲಾಟಿನಲ್ಲಿ ನಮ್ಮ ವಾಸ. 2 ವರ್ಷದ ಮಗಳು ತುಂಬಾ ಮಾತಾಡುತ್ತಿದ್ದಳು. ನಮ್ಮ ಮನೆಯ ಕೆಳ ಫ್ಲಾಟಿನಲ್ಲಿ ಇಬ್ಬರು ಪ್ರೊಬೇಷನರಿ ಆಫೀಸರ್ ಹೊಸದಾಗಿ ಬಂದಿದ್ದರು. ನಮ್ಮ ಯಜಮಾನರು ಅವರಿಗಿಂತ ಸೀನಿಯರ್ ಆದ್ದರಿಂದ ನಮ್ಮ ಮನೆಗೆ ಕಾಲ್ ಆನ್ ಎಂದುಕೊಂಡು ಬಂದಿದ್ದರು. ಒಬ್ಬನು ಪಾಲಕ್ಕಾಡಿನ ಹುಡುಗ ಸುಬ್ಬು. ಎರಡನೆಯವನು ಮಧ್ಯಪ್ರದೇಶದ ಹರಿ ಜೈಸ್ವಾಲ್. ಚೆನ್ನಾಗಿ ತಿಂಡಿ ತಿಂದು ಇಬ್ಬರೂ ಮೊದಲನೆಯ ದಿನವೇ ನಮಗೆ ಹತ್ತಿರವಾಗಿಬಿಟ್ಟರು. ಸುಬ್ಬು ಈಗಾಗಲೇ ಮದುವೆಯಾಗಿ ಹೆಂಡತಿ ಎಂ.ಬಿ.ಎ. ಮಾಡಲು ಅಮೆರಿಕಾಗೆ ಹೋಗಿದ್ದಳು. ಹರಿ ಇನ್ನೂ ಬ್ರಹ್ಮಚಾರಿ. ಇಂಗ್ಲಿಷ್‌ನಲ್ಲಿ ಹೇಳಬೇಕಾದರೆ ಮೋಸ್ಟ್ ಎಲಿಜಿಬಲ್ ಬ್ಯಾಚುಲರ್! ಅವರ ಊರಿನಲ್ಲಿ ಸಾವಿರ ಸಾವಿರ ಲಕ್ಷ ಲಕ್ಷ ವರದಕ್ಷಿಣೆ ಸ್ಟೇಟ್ ಬ್ಯಾಂಕ್ ಪ್ರೊಬೇಷನರಿ ಆಫೀಸರ್‌ಗೆ ಕೊಡುವಂತೆ, ನೋಡಲೂ ಸುಂದರ ಅವರ ತಂದೆ ಯೂನಿವರ್ಸಿಟಿಯಲ್ಲಿ ಪ್ರೊಫೆಸರ್ ಅಂತೆ.

ಪ್ರತಿ ದಿನ ಏನೋ ನಿಮಿತ್ತ ಮಾಡಿಕೊಂಡು ಇಬ್ಬರೂ ನಮ್ಮ ಮನೆಗೆ ಬಂದು ನಮ್ಮ ಮಗಳ ಜತೆ ಆಟ ಆಡುತ್ತ ಹೇಗೋ ರಾತ್ರಿ ಊಟದವರೆಗೆ ಇದ್ದುಬಿಡುತ್ತಿದ್ದರು. ನಾನೂ ಸರ್ಕಾರಿ ನೌಕರಳಾಗಿದ್ದರಿಂದ ಆಫೀಸ್‌ನಿಂದ ಮನೆಗೆ ಬಂದು ಕೆಲಸ ಮಾಡಿ ಸುಸ್ತಾಗಿರುತ್ತಿದ್ದೆ. ಅಡಿಗೆಯವಳು ವಾರಕ್ಕೆ ನಾಲ್ಕು ದಿನ ಚಕ್ಕರ್! ಮಣಿ ಮಣಿಯಾಗಿ ಮಗಳ ಹತ್ತಿರ ಮಾತಾಡುತ್ತಾ ಇಬ್ಬರೂ ಊಟ ಮಾಡಿಕೊಂಡೇ ಹೋಗುವ ಅಭ್ಯಾಸ ಮಾಡಿಕೊಂಡಾಗ, ನಾನು ಗೊಣಗಿಕೊಂಡೇ ಸೈರಿಸಿಕೊಳ್ಳುತ್ತಿದ್ದೆ.

ಸ್ವಲ್ಪ ದಿನ ಕಳೆದ ನಂತರ ಇಬ್ಬರೂ ಮನೆಗೆ ಬರುವುದು ಕಡಿಮೆ ಆಯಿತು. ಸುಬ್ಬು ಚಿಕ್ಕಮ್ಮ ನಮ್ಮ ಬಡಾವಣೆಗೆ ಬಂದಿದ್ದರು. ಹರಿ ಮನ್ಮಥನ ಬಾಣಕ್ಕೆ ಗುರಿಯಾಗಿದ್ದ ಬ್ಯಾಂಕಿನ ಹೆಡ್ ಆಫೀಸಿನಲ್ಲಿ ಅವನ ಡಿಪಾರ್ಟ್ಮೆಂಟ್‌ನಲ್ಲೇ ಗುಮಾಸ್ತೆಯಾಗಿ ಕೆಲಸ ಮಾಡುತ್ತಿದ್ದ ರಜನಿ ನಿಂಬಾಲ್ಕರ್ ಅವನ ಹೃದಯ ಕದ್ದಿದ್ದಳು. ಸರಿ ನಮ್ಮ ಹರಿ ರಜನಿಗೆ ಪೂರ್ತಿ ಶರಣಾಗಿಬಿಟ್ಟ. ನಮ್ಮ ಮನೆಗೆ ಬರುವುದೂ ಅಪರೂಪ.

ಒಂದು ದಿನ ಸುಬ್ಬು ಬಂದ. ''ನೋಡಿದಿರಾ ಮ್ಯಾಮ್, ಹರಿ ಈಗ ಎಷ್ಟೊಂದು ಬದಲಾಗಿದ್ದಾನೆ! ಆ ಹುಡುಗಿ ಇವನನ್ನು ವಶೀಕರಣ ಮಾಡಿಬಿಟ್ಟಿದ್ದಾಳೆ'' ಎಂದೆಲ್ಲಾ ಬಡಬಡಿಸಿದ. ಬಿಸಿ ಚಹಾ ಜೊತೆಗೆ ಖಾರದ ಬಿಸ್ಕತ್ತು ಕೊಟ್ಟು ಹರಿಯ ಸುಂದರಿಯ ಬಗ್ಗೆ ಕುತೂಹಲ ವ್ಯಕ್ತಪಡಿಸಿದೆ. ಸುಬ್ಬು ಹರಟೆಮಲ್ಲ. ಅವನಿಗೂ ಹೇಳಲು ಸುದ್ದಿ ಬೇಕಾದಷ್ಟಿತ್ತು. ಮುಖ್ಯ ವಿಷಯ ನಮ್ಮ ಹರಿ ಮತ್ತು ಅವನ ಪ್ರೇಮದಲ್ಲಿ ಸಿಲುಕಿಕೊಂಡಿರುವ ಹುಡುಗಿ. ರಜನಿ ಒಬ್ಬ ಮರಾಠಿ ಹುಡುಗಿ. ನೋಡಲೇನೂ ಸುಂದರಿಯಲ್ಲ. ಆದರೆ ಮುಂಬೈ ಹುಡುಗಿಯಾದ್ದರಿಂದ ತುಂಬಾ ಫ್ಯಾಷನ್ ಮಾಡ್ತಾಳೆ. ಬೊಬ್ ಕಟ್ ಮಾಡಿಕೊಂಡು ದಿನ

ದಿನ ಹೊಸ ಉಡುಗೆ ಧರಿಸುತ್ತಾಳೆ. ಮೇಲಿನ ಅಂತಸ್ತಿನಲ್ಲಿ ಏನೂ ಇಲ್ಲ. ಆದರೂ ಇಂಗ್ಲಿಷ್ ಭಾಷೆ ಸ್ವಲ್ಪ ಸ್ಟೈಲ್ ಆಗಿಯೇ ಮಾತಾಡುತ್ತಾಳೆ. ನಮ್ಮ ಹರಿಗೆ ಬುದ್ಧಿ ಇಲ್ಲ. ಅವಳ ಮೋಹದಲ್ಲಿ ಬಿದ್ದಿದ್ದಾನೆ. ತಂದೆ ತಾಯಿಗಳಿಗೆ ಇನ್ನೂ ತಿಳಿಸಿಲ್ಲ. ನಿಧಾನವಾಗಿ ಹೇಳೋಣ ಎಂದು ರಜಿನಿ ಹೇಳಿದಂತೆ ಪ್ರತಿ ದಿನ ಆಫೀಸ್ ನಂತರ ಇಬ್ಬರೂ ಸಿನೆಮಾ ನೋಡಲು ಹೋಗುತ್ತಾರೆ. ಅಲ್ಲಿ ಇಲ್ಲಿ ಓಡಾಡಿಕೊಂಡು ರಾತ್ರಿ ಬಂದು ಮಲಗುತ್ತಾನೆ. ಸಿ.ಎ.ಐ.ಐ.ಬಿ. ಪರೀಕ್ಷೆ ಹತ್ತಿರ ಬರುತ್ತಿದೆ ಓದು ಎಂದರೆ ಮುಂದಿನ ವರ್ಷ ಎನ್ನುತ್ತಾನೆ......

ಬರ ಬರುತ್ತಾ ದಿನ ಕಳೆದವು. ಇದ್ದಕ್ಕಿದ್ದ ಹಾಗೆ ಒಂದು ಭಾನುವಾರದ ಬೆಳ್ಳಂಬೆಳಗ್ಗೆ ಹರಿಯ ಆಗಮನ. ''ಮ್ಯಾಮ್ ನೀವು ನನಗೆ ಅಕ್ಕನ ತರಹ ನಿಮ್ಮ ಮತ್ತು ಸರ್ ಅವರ ಸಹಾಯ ಬೇಕು. ನನ್ನ ಪ್ರೇಮ ಪ್ರಕರಣದ ಬಗ್ಗೆ ನಿಮಗೆ ಗೊತ್ತೇ ಇದೆ. ನಾವಿಬ್ಬರೂ ಮುಂದಿನ ವರ್ಷ ಮದುವೆಯಾಗೋಣ ಎಂದುಕೊಂಡಿದ್ದೆವು. ನಿನ್ನೆ ರಜಿನಿ ಸಾಯಂಕಾಲ ಸಿಕ್ಕು ತುಂಬಾ ಬಿಕ್ಕಿ ಬಿಕ್ಕಿ ಅತ್ತುಬಿಟ್ಟಳು. ಅವಳ ತಂದೆ ತಾಯಿ ಅವಳಿಗೆ ವರ ನೋಡುತ್ತಿದ್ದಾರಂತೆ. ಅವರ ಪರಿಚಯದ ಕುಟುಂಬದಲ್ಲೇ ವರ ಇದ್ದಾನಂತೆ ಮಹಾರಾಷ್ಟ್ರ ರಾಜ್ಯ ಸರ್ಕಾರದಲ್ಲಿ ಗುಮಾಸ್ತೆಯಂತೆ ರಜಿನಿ ತುಂಬಾ ದುಃಖದಲ್ಲಿದ್ದಾಳೆ.

ನಾನೂ ನಿನ್ನೆ ರಾತ್ರಿಯೆಲ್ಲ ನಿದ್ರೆ ಮಾಡದೆ ಯೋಚನೆ ಮಾಡುತ್ತಿದ್ದೆ. ನೋಡಿ ನನ್ನ ತಂದೆ ತಾಯಿ ಬೇರೆ ರಾಜ್ಯದ ಹುಡುಗಿಯನ್ನು ಸೊಸೆ ಎಂದು ಸ್ವೀಕರಿಸುವುದಿಲ್ಲ. ನಮ್ಮ ತಾಯಿ ಈ ವಿಷಯದಲ್ಲಿ ತುಂಬಾ ಕಟ್ಟು. ಹಾಗೆಯೇ ರಜಿನಿಯ ತಂದೆ ನನ್ನನ್ನು ಅಳಿಯನಾಗಿ ಸ್ವೀಕಾರ ಮಾಡುವುದಿಲ್ಲ. ಮರಾಠಿ ಸಂಸ್ಕೃತಿಗೆ ಕುಗ್ಗು ಮಾಡುವ ಕೆಲಸ ಅವರೆಂದೂ ಮಾಡುವುದಿಲ್ಲವಂತೆ. ಹೀಗಾಗಿ ನಂಗೆ ರಜಿನಿ ಏನು ಹೇಳಿದ್ಲು ಗೊತ್ತಾ? ನಾವಿಬ್ಬರೂ ಮದುವೆ ರಿಜಿಸ್ಟ್ರೇಷನ್ ಆಫೀಸ್‌ಗೆ ಹೋಗಿ ಕಾಯದೆಯ ಪ್ರಕಾರ ಮದುವೆ ಆಗೋಣ. ಆಮೇಲೆ ಮಂದಿರಕ್ಕೆ ಹೋಗೋಣ. ಅಲ್ಲಿ ನೀನು ನನ್ನ ಕೊರಳಿನಲ್ಲಿ ಮಂಗಳಸೂತ್ರ ಹಾಕಿಬಿಡು ಎಂದಳು. ಇನ್ನು ಎರಡು ದಿನಗಳಲ್ಲಿ ನಿನ್ನ ನಿರ್ಧಾರ ಹೇಳು. ಎಂದು ಖಡಾಖಂಡಿತವಾಗಿ ಹೇಳಿದಳು. ನೀನೇನಾದರೂ ಒಪ್ಪಿಕೊಳ್ಳದಿದ್ದಲ್ಲಿ ಇದೇ ಬಿಲ್ಡಿಂಗಿನ ಟೆರೆಸ್ಸಿಗೆ ಹೋಗಿ ಅಲ್ಲಿಂದ ಧುಮುಕಿ ಆತ್ಮಹತ್ಯೆ ಮಾಡಿಕೊಳ್ಳುವೆ ಎಂದಳು. 21 ಮಜಲಿನ ಬಿಲ್ಡಿಂಗಿನಿಂದ ಇವಳು ಹಾರಿಕೊಂಡರೆ ನನ್ನ ಗತಿ ಏನು? ನಾನೂ ಯೋಚನೆ ಮಾಡಿದೆ. ಬೇರೆ ಮಾರ್ಗವೇ ಇಲ್ಲ. ಈಗ ನಂಗೆ ನಿಮ್ಮ ಸಹಾಯ ಬೇಕು. ನೀವು ನಿಮ್ಮ ಆಫೀಸಿನ ಮೂಲಕ ಮದುವೆ ರಿಜಿಸ್ಟ್ರೇಷನ್‌ಗೆ ಸಹಾಯ ಮಾಡಬೇಕು ನಮ್ಮ ಮದುವೆಗೆ ಸರ್ ವಿಟ್ನೆಸ್ ಎಂದು ಸಹಿ ಮಾಡಬೇಕು.

ಈಗ ನಂಗೆ ಅಕ್ಕನ ದರ್ಜೆ ಕೊಟ್ಟ ಎಂದ ಮೇಲೆ ನನ್ನ ಹೃದಯ ಕರಗಿ ಹೋಯಿತು. ''ಅದು ಸರಿ ಮದುವೆಯಾದಮೇಲೆ ನಿನಗೆ ಮನೆ ಬೇಡವೇ? ಈಗಿರುವ ಫ್ಲ್ಯಾಟ್‌ನಲ್ಲಿ ಸುಬ್ಬು ಕೂಡ ವಾಸವಾಗಿದ್ದಾನಲ್ಲ ಎಂದು ನನ್ನ ಸಂಶಯ ಹೇಳಿದೆ. ಹರಿಯ ಮುಖದಲ್ಲಿ ಮುಗುಳ್ನಗೆ ಬೀರಿತು.'' ಸುಬ್ಬು ಮೂರು ತಿಂಗಳು ರಜಾ ತೆಗೆದುಕೊಂಡು ಅಮೆರಿಕಾಗೆ ಹೆಂಡತಿಯ ಹತ್ತಿರ ಹೋಗುತ್ತಾನೆ. ಅಲ್ಲೇ ಕೆಲಸಕ್ಕೆ ಪ್ರಯತ್ನಿಸುತ್ತಾನೆ. ಸಿಕ್ಕದಿದ್ದರೆ ವಾಪಸ್ಸು ಬರುತ್ತಾನೆ. ಅಷ್ಟರಲ್ಲಿ ನಾನು ಮತ್ತು ರಜಿನಿ ಬೇರೆ ಫ್ಲ್ಯಾಟ್ ಹುಡುಕುತ್ತೇವೆ.''

ಮಾರನೆಯ ದಿನದಿಂದ ನನಗೂ ಸಂಭ್ರಮ. ನಮ್ಮ ಆಫೀಸ್‌ನ ಮೂಲಕ ಹರಿ ಮತ್ತು ರಜಿನಿಯ ಮದುವೆ ರಿಜಿಸ್ಟ್ರೇಷನ್‌ಗೆ ನೋಟೀಸ್ ಕೊಡಿಸಲು ನೆರವಾದೆ. ಸರಿಯಾಗಿ ಎರಡು ವಾರದ ನಂತರ ಅವರ ಮದುವೆ. ನಾರಿಮನ್ ಪಾಯಿಂಟ್‌ನಲ್ಲಿ ಸ್ಟೇಟ್ ಬ್ಯಾಂಕ್ ಮುಖ್ಯ ಕಾರ್ಯಾಲಯ. ನನ್ನ ಆಫೀಸ್ ಚರ್ಚ್‌ಗೇಟ್‌ನಲ್ಲಿ ಮದುವೆಗೆ ಇನ್ನೇನು ಒಂದು ವಾರವಿದೆ ಎಂದಾಗ ಹರಿ ನನ್ನ ಆಫೀಸಿಗೆ ಬಂದು ನನ್ನ ಕೈಯಲ್ಲಿ 2 ಸಾವಿರ ರೂಪಾಯಿ ಕೊಟ್ಟ. ''ನೋಡಿ, ಬ್ಯಾಂಕ್‌ನವರು ಕೊಟ್ಟಿರುವ ಫರ್ನೀಚರ್ ಚೆನ್ನಾಗೇ ಇದೆ. ಆದರೆ ದಯವಿಟ್ಟು ನೀವು ರಜಿನಿ ಮನೆಗೆ ಬರುವ ಮೊದಲು ಮನೆ ಸಜ್ಜು ಮಾಡಬೇಕು. ಪ್ರತಿ ರೂಮಿಗೂ ಏನೇನು ಸಾಮಾನು ಬೇಕೋ ತೆಗೆದುಕೊಳ್ಳಿ. ಹಾಗೆಯೇ ಅಡಿಗೆ ಮನೆ ಸಜ್ಜು ಮಾಡಿ. ಪ್ಲೀಜ್ ನಿಮ್ಮಂತಹ ಅಕ್ಕ ಸಿಕ್ಕಿದ ನಾನು ಧನ್ಯನೇ ಎನ್ನುತ್ತಾ ನಾನು ಕ್ಯಾಂಟೀನ್‌ನಿಂದ ತರಿಸಿದ ಪೂರಿ ಭಾಜಿ ತಿಂದು ಮಸಾಲ ಚಹಾ ಕುಡಿದು ಹೋದ!

ನಾನು ಯಜಮಾನರಿಗೆ ಫೋನ್ ಮಾಡಿ ಹರಿ ಬಂದು ಹೋದ ವಿಷಯ ಹೇಳಿದೆ. ಸ್ವಲ್ಪ ಖಾರವಾಗಿಯೇ ನಮ್ಮವರು ತಮ್ಮ ಮತ ವ್ಯಕ್ತಪಡಿಸಿದರು. ಮಾರನೇಯ ದಿನ ಎರಡನೇ ಶನಿವಾರ ನಂಗೆ ರಜಾ ಮಗುವನ್ನೂ ಕರೆದುಕೊಂಡು ರಿಕ್ಷಾ ಹತ್ತಿ ಗೋರೆಗಾವ್‌ನ ಮಾರ್ಕೆಟ್ ಸುತ್ತಿದೆ. ಪಾತ್ರೆಗಳು, ಡಬ್ಬಿಗಳು, ಸ್ಟೋವ್, ತಟ್ಟೆ ಲೋಟಗಳು, ಬೆಡ್ ಶೀಟುಗಳು, ಬಕೆಟ್ ಹೀಗೆ ಮನೆಗೆ ಬೇಕಾಗುವ ಕನಿಷ್ಠ ಸಾಮಾನು ಕೊಂಡು ಹಮಾಲನ ಹತ್ತಿರ ಹೊರಿಸಿಕೊಂಡು ಬಂದೆ. ಟೈಲರ್‌ಗೆ ಹೇಳಿ ಮನೆಯ ಕಿಟಿಕಿಗಳಿಗೆ ಅರ್ಜೆಂಟಾಗಿ ಪರದೆ ಹೊಲಿಸಿದೆ. ಲೆಕ್ಕ ನೋಡಿದರೆ ಸರಿಯಾಗಿ ರೂ. 3050/- ಖರ್ಚಾಗಿತ್ತು. ನನ್ನ ಲೆಕ್ಕ ಎಡವಟ್ಟಾಗಿತ್ತು. ಹೋಗಲಿ ಬಿಡು ಹರಿಗೆ ಹೇಳಿದರೆ ಸಾವಿರ ರೂಪಾಯಿ ಕೊಡುತ್ತಾನೆ ಎಂದು ಕೊಂಡೆ. ಸಾಯಂಕಾಲ ಬಾಯಿಯನ್ನು ಕರೆದು ಫ್ಲ್ಯಾಟ್ ಸ್ವಚ್ಛ ಮಾಡಿಸಿದೆ. ನಂತರ ಸಾಮಾನುಗಳನ್ನು ಇಡಿಸಿದೆ.

ರಾತ್ರಿಯಾಯಿತು ಹನ್ನೊಂದು ಗಂಟೆಗೆ ಹರಿಯ ಆಗಮನ. ಮ್ಯಾಮ್ ಹೊಟ್ಟೆ ತುಂಬಾ ಹಸಿವಾಗಿದೆ. ಏನಿದ್ದರೂ ಕೊಡಿ ಎಂದ. ಗೊಣಗಿಕೊಂಡೆ ಚಪಾತಿ ಮಾಡಿಕೊಟ್ಟೆ. ನನ್ನ ಖರ್ಚಿನ ಲೆಕ್ಕ ಕೊಟ್ಟೆ. ಆದರೆ ಹರಿ ಗಮನವೇ ಕೊಡಲಿಲ್ಲ. ಹೋಗಲಿ ಆಮೇಲೆ ಕೊಡುತ್ತಾನೆ ಎಂದು ನಂಗೆ ನಾನೇ ಸಮಾಧಾನ ಮಾಡಿಕೊಂಡೆ. ನನ್ನ ಪತಿ ದೇವರ ಮುಖ ನೋಡಿ ಹರಿ ''ಸರ್ ತುಂಬಾ ಕಷ್ಟದಲ್ಲಿದ್ದೇನೆ. ಒಂದು ಕಡೆ ನಿಮ್ಮಂತಹ ದೇವ ಮಾನವರು. ಇನ್ನೊಂದು ಕಡೆ ರಜಿನಿಯ ತಂದೆ ಶಂಕರರಾವ್ ನಿಂಬಾಳ್ಕರ್ ಹಳೆಯ ತಂಡದವರು. ಕಟ್ಟು ನಿಟ್ಟಿನ ಮನುಷ್ಯ ಮರಾಠಿ ಸಂಸ್ಕೃತಿಯ ವಿರುದ್ಧ ಏನೂ ಚ್ಯುತಿಯಾಗಬಾರದು. ಮಹಾರಾಷ್ಟ್ರ ಸರ್ಕಾರದ ಸೆಕ್ರೇಟರಿಯೇಟ್‌ನಲ್ಲಿ ಅವರು ಕ್ಲರ್ಕ್. ಅದಲ್ಲದೇ ಶಿವ ಸೇನೆಯ ಸದಸ್ಯರು ಕೂಡ. ಸ್ವತಃ ಮಗಳು ಓಡಿ ಹೋಗಿ ಉತ್ತರ ಭಾರತೀಯನೊಂದಿಗೆ ಮದುವೆಯಾದರೆ ಹೇಗೆ? ಅವರೇನೂ ಆತ್ಮಹತ್ಯೆ ಮಾಡಿಕೊಳ್ಳುವುದಿಲ್ಲ. ಆದರೆ ನನ್ನನ್ನು ಮಾತ್ರ ಹಣ್ಣು ನೀರು ಮಾಡಿಸುತ್ತಾರೆ. ಪಾಪ ರಜಿನಿ ಮುಗ್ಧ ಹುಡುಗಿ. ಒಂದು ಕಡೆ ತಂದೆಯ ಪ್ರೇಮ ಇನ್ನೊಂದು ಕಡೆ ನನ್ನ ಪ್ರೇಮ. ತುಂಬಾ ಕಷ್ಟ ಪಡುತ್ತಿದ್ದಾಳೆ'' ಎಂದೆಲ್ಲಾ ಬಡಬಡಿಸಿದ.

ನಮ್ಮಿಂದ ಏನು ಸಹಾಯ ಬೇಕು ಎಂದು ಯಜಮಾನರು ಕೇಳಿದಾಗ ''ಸರ್, ನೀವು ಮತ್ತು ಮ್ಯಾಮ್ ನಿಮ್ಮ ಪೊಲೀಸ್ ಮಿತ್ರರಿಗೆ ಹೇಳಿ ನಂಗೆ ಸುರಕ್ಷೆ ಕೊಡಿಸಿ'' ಎಂದು

ದುಂಬಾಲು ಬಿದ್ದ. ರಣಜಿತ್ ಚವಾಣ್ ಬಾಂದ್ರಾ ಪೋಲಿಸ್ ಸ್ಟೇಷನ್‌ನ ಅಧಿಕಾರಿ. ಅವರು ಯಜಮಾನರ ಮಿತ್ರ ಟೆಂಭೇಕರ್ ಅವರ ಪರಮ ಮಿತ್ರ. ಮಾರನೇ ದಿನವೇ ಚವಾಣ್ ಸಾಹೇಬರಿಗೆ ಫೋನ್ ಮಾಡಿ ಹರಿ ಮತ್ತು ರಜಿನಿಯ ಮದುವೆ ರಿಜಿಸ್ಟ್ರೇಷನ್‌ಗೆ ಯಾವುದೇ ಅಡಚಣೆ ಬಾರದ ಹಾಗೆ ಏರ್ಪಾಟು ಮಾಡಿಸಿದರು ಪತಿದೇವರು.

ಮಾರನೆಯ ದಿನ ಮತ್ತೆ ಹರಿಯ ಆಗಮನ ನನ್ನ ಆಫೀಸ್‌ಗೆ. ''ಮ್ಯಾಮ್, ರಜಿನಿಗೆ ಅಡಿಗೆ ಮಾಡಲು ಬರುವುದಿಲ್ಲ. ದಯಮಾಡಿ ನೀವು ಒಬ್ಬಳು ಅಡಿಗೆಯವಳನ್ನು ಗೊತ್ತು ಮಾಡಿ. ಮತ್ತು ಮನೆಗೆ ಬೇಕಾಗುವ ಸಾಮಾನು ತರಿಸಿಬಿಡಿ'' ಎಂದ. ನಾನು ಉತ್ಸಾಹದಿಂದ ಸಂಜೆಯೇ ಮಾರ್ಕೆಟ್ಟಿಗೆ ಹೋಗಿ ಸುಮಾರು ಒಂದು ತಿಂಗಳಿಗೆ ಬೇಕಾಗುವ ಸಾಮಾನುಗಳನ್ನು ತಂದುಕೊಟ್ಟೆ. ದುಡ್ಡು ನನ್ನದೇ ಮೊದಲಿನ 3050 ರೂ. ಮತ್ತು ಈಗಿನ ಖರ್ಚು ಇನ್ನೊಂದು ಎಂಟು ನೂರು ಮತ್ತೆ ಲೆಕ್ಕ ಬರೆದೆ.

ಹರಿಯ ಮದುವೆ ರಿಜಿಸ್ಟ್ರೇಷನ್ ದಿನ ಬಂದೇ ಬಿಟ್ಟಿತು. ನಾನು ಅರ್ಧ ದಿನದ ರಜ ಹಾಕಿ ಮಗುವನ್ನೂ ಕರೆದುಕೊಂಡು ಟ್ಯಾಕ್ಸಿಯಲ್ಲಿ ಬಾಂದ್ರಾದ ಮದುವೆ ರಿಜಿಸ್ಟ್ರೇಷನ್ ಆಫೀಸಿಗೆ ಬಂದೆ. ಯಜಮಾನರು ತಮ್ಮ ಆಫೀಸಿನಿಂದ ಬಂದರು. ಬ್ಯಾಂಕಿನ ಕಡೆಯಿಂದ ಇನ್ನಿಬ್ಬರು ಮತ್ತು ನಮ್ಮ ಸುಬ್ಬು ಹಾಜರಾಗಿದ್ದರು. ಹರಿ ಮತ್ತು ರಜಿನಿಯ ಆಗಮನವಾಯಿತು. ರಜಿನಿ ಬನಾರಸಿ ಸೀರೆಯಲ್ಲಿ ಚೆನ್ನಾಗಿ ಕಾಣಿಸಿದಳು. ಅವಳ ಮುಖದಲ್ಲಿ ಒಂದು ಚೂರೂ ಚಿಂತೆ ಕಾಣಲಿಲ್ಲ. ಹರಿ ಪಾಪ ತುಂಬಾ ಪೆಚ್ಚಾಗಿದ್ದ ನಮ್ಮನ್ನೆಲ್ಲಾ ನೋಡಿ ಸ್ವಲ್ಪ ಸಮಾಧಾನ ಪಟ್ಟುಕೊಂಡ. ಅಷ್ಟರಲ್ಲಿ ಹೊರಗೆ ದೊಡ್ಡ ಗಲಾಟೆ ಕೇಸರಿ ಬಾವುಟ ಹಿಡಿದ ಶಿವ ಸೇನೆ ಜನರ ತಂಡ ಜೋರು ಜೋರಾಗಿ ಮರಾಠಿ ಘೋಷಣೆ ಮಾಡುತ್ತಿದ್ದರು. ಹರಿ ಬೆವರಿಬಿಟ್ಟ ಯಜಮಾನರು ಹೊರಗೆ ನೋಡಿಕೊಂಡು ಬಂದು ''ಯಾವುದೋ ರಿಕ್ರೂಟ್‌ಮೆಂಟ್ ಬಗ್ಗೆ ಗಲಾಟೆ, ಹೆದರಬೇಡ'' ಎಂದರು. ಆದರೂ ಹರಿಯ ಗಮನವೆಲ್ಲ ಹೊರಗಿನಿಂದ ಕೇಳಿ ಬರುತ್ತಿದ್ದ ಸದ್ದಿನತ್ತಲೇ.

ಸಬ್ ರಿಜಿಸ್ಟ್ರಾರ್ ಎದುರಿಗೆ ಹರಿ ಮತ್ತು ರಜಿನ ಹೂವಿನ ಹಾರ ಒಬ್ಬರಿಗೊಬ್ಬರು ಹಾಕಿದರು. ಫೇಡಾ ತರುವುದು ಮರೆತೇ ಬಿಟ್ಟೆವಲ್ಲಾ ಎಂದುಕೊಂಡರು. ಹರಿಯ ಕಡೆಯಿಂದ ನಮ್ಮ ಯಜಮಾನರು, ರಜಿನಿಯ ಕಡೆಯಿಂದ ಅವಳ ಗೆಳತಿ ಲೀನಾ ಸಾಕ್ಷಿಯಾಗಿ ಸಹಿ ಮಾಡಿದರು. ಮದುವೆ ರಿಜಿಸ್ಟ್ರೇಷನ್ ಮುಗಿದು ಹೋಯಿತು. ನಾವೆಲ್ಲಾ ಹೊರಗೆ ಬಂದೆವು. ತುಂಬಾ ಜನಗಳ ನಡುವೆ ಒಬ್ಬ ವೃದ್ಧ ದಂಪತಿ ಕಾಣಿಸಿದರು. ರಜಿನಿ ಅವರತ್ತಲೇ ನೋಡಿದಳು. ಅಯ್ಯೋ ಪಾಪ ತಂದೆ ತಾಯಿಗಳನ್ನು ನೆನಪಿಸಿಕೊಂಡಳೋ ಏನೋ ಎಂದು ನನ್ನ ಹೃದಯ ಕರಗಿ ಹೋಯಿತು. ಮೊದಲು ಗೊತ್ತು ಮಾಡಿದ ಪ್ರಕಾರ ಎಲ್ಲರೂ ದೊಡ್ಡ ಹೋಟೆಲಿಗೆ ಹೋಗಿ ತಿಂಡಿ ತಿಂದು ಮನೆಗೆ ಹೋಗುವುದು ಎಂದು. ಆದರೆ ರಜಿನಿ ದೇವಸ್ಥಾನಕ್ಕೆ ಹೋಗಲು ಅವಸರ ಪಡಿಸಿದರಿಂದ ಅದೇ ಆಫೀಸಿನ ಕ್ಯಾಂಟೀನಿಗೆ ಹೋಗೋಣ ಎಂದ ಹರಿ. ಕ್ಯಾಂಟೀನಿನಲ್ಲಿ ವಡಾಪಾವ್ ಮತ್ತು ಕಟಿಂಗ್ ಚಾಯ್ (ಬೆಂಗಳೂರಿನ ಬೈ ಟೂ ಚಹಾ) ಕೊಡಿಸಿದ. ನನ್ನ ಮಗಳು ಐಸ್ ಕ್ರೀಮ್ ಎಂದು ಮುದ್ದು ಮುದ್ದಾಗಿ ಕೇಳಿದಾಗ ಹರಿ ಕೇಳಿಸಿಕೊಳ್ಳಲಿಲ್ಲ. ಕೊಡಿಸುತ್ತೇನೆ ಎಂದು

ಯಜಮಾನರು ಅವಳನ್ನು ಹೊರಗೆ ಕರೆದುಕೊಂಡು ಹೋದರು. ಎಲ್ಲರೂ ಚಹಾ ಕುಡಿಯುವ ಮೊದಲೇ ಹರಿ ಮತ್ತು ರಜಿನಿ ಹೊರಟುಬಿಟ್ಟರು. ಕ್ಯಾಂಟೀನಿನ ಬಿಲ್ ಬಂದಾಗ ಸುಬ್ಬು ಕೊಟ್ಟ ಮತ್ತು ನನ್ನ ಕಡೆ ನೋಡಿ ಪೆಚ್ಚಾಗಿ ನಕ್ಕ.

ನಮ್ಮ ಯಜಮಾನರು ಮಗುವಿನೊಂದಿಗೆ ಬಂದರು. ಯಾವುದಾದರೂ ಹೋಟೆಲಿಗೆ ಹೋಗಿ ಸರಿಯಾಗಿ ತಿಂಡಿ ತಿಂದು ಹೋಗೋಣ ಎಂದರು. ಸುಬ್ಬು ಹುಂಗುಟ್ಟಿದ. ಆದರೆ ರಜಿನಿಯ ಗೆಳತಿ ಲೀನಾ ಬಂದು ''ನೋಡಿ ರಜಿನಿ ಮತ್ತು ಹರಿ ದೇವಸ್ಥಾನದಿಂದ ಸೀದಾ ಮನೆಗೆ ಬರುತ್ತಾರೆ. ಅವರನ್ನು ಎದುರುಗೊಳ್ಳಬೇಕು. ಆಮೇಲೆ ಅವರು ಮಲಗುವ ಕೋಣೆಯನ್ನು ಸಜ್ಜು ಮಾಡಬೇಕು ಹೋಗೋಣ ಎಂದಳು. ಬಾಂದ್ರಾದಿಂದ ಗೋರೆಗಾವಿನ ವರೆಗೆ ಟ್ಯಾಕ್ಸಿ ಮಾಡಿಕೊಂಡು ಬಂದೆವು. ಟ್ಯಾಕ್ಸಿಯ ದುಡ್ಡನ್ನು ಪತಿ ದೇವರೇ ಕೊಟ್ಟರು. ಲೀನಾ ಬೇಗ ಬೇಗ ಮೇಲೆ ಹೋದಳು. ಸುಬ್ಬು ತನ್ನ ಸಾಮಾನನ್ನು ಪ್ಯಾಕ್ ಮಾಡಿ ಚಿಕ್ಕಮ್ಮನ ಮನೆಗೆ ಹೊರಟ. ನಾನು ಮತ್ತು ಲೀನಾ ಮನೆಯ ಹೊರಗೆ ರಂಗೋಲಿ ಬಿಡಿಸಿ ಶಯ್ಯಾ ಕೋಣೆಯನ್ನು ಹೂವಿಂದ ಸಿಂಗರಿಸಿದೆವು. ಮನೆಗೆ ಬಂದಾಗ ಯಜಮಾನರು ಬುಸುಗುಡುತ್ತಿದ್ದರು ಬೇಗ ಬೇಗ ಬೆಳಗ್ಗೆ ಮಾಡಿಟ್ಟ ಅಡಿಗೆ ಬಿಸಿ ಮಾಡಲು ಇಟ್ಟು ಚಪಾತಿ ಮಾಡಲು ಹೋದೆ.

ಊಟವಾಯಿತು. ಮಗುವಿಗೆ ಯಜಮಾನರಿಗೆ ಹೇಳಿದೆ ''ಹರಿ-ರಜಿನಿ ಮನೆಗೆ ಬಂದರೋ ಇಲ್ವೋ ಸ್ವಲ್ಪ ನೋಡಿಕೊಂಡು ಬನ್ನಿ.'' ಅಷ್ಟೇ ಸಾಕಾಯಿತು ಯಜಮಾನರಿಗೆ. ''ನಿನಗೆ ಬುದ್ಧಿ ಭ್ರಮಣೆ ಆಗಿದೆಯೋ ಹೇಗೆ? ಹರಿ-ರಜಿನಿಯ ಮದುವೆಯಾಯಿತು ಮನೆಗೆ ಬಂದರೋ ಅಥವಾ ಇನ್ನೆಲ್ಲಿಗೋ ಹೋದರೋ ನಮಗೆ ಯಾಕೆ? ಅತಿ ಮಾಡಬೇಡ ಮಲಗಿಕೊ ಎಂದು ಬೈದರು.

ಮಾರನೆಯ ದಿನ ಬೆಳಿಗ್ಗೆ ಹತ್ತು ಗಂಟೆಗೆ ಕಾಲಿಂಗ್ ಬೆಲ್ ಸದ್ದಾಯಿತು. ಅಷ್ಟರಲ್ಲಿ ನಮ್ಮ ಮೂವರ ತಿಂಡಿ ಆಗಿತ್ತು. ಕಣ್ಣು ಒರೆಸಿಕೊಳ್ಳುತ್ತಾ ಹರಿ ಒಳಗೆ ಬಂದು ''ರಜಿನಿಗೆ ಬೆಡ್ ಟೀ ಅಭ್ಯಾಸ'' ಎರಡು ಕಪ್ ಟೀ ಕೊಡಿ ಎನ್ನುತ್ತಾ ಥರ್ಮೋಸ್ ಫ್ಲಾಸ್ಕ್ ಮುಂದಿಟ್ಟ. ಟೀ ಮಾಡಲು ಒಳಗೆ ಹೋದೆ. ಥರ್ಮೋಸ್ ಅವನ ಕೈಯಲ್ಲಿ ಬಂದ ತಕ್ಷಣ ''ತಿಂಡಿ ಏನಾದರೂ ಮಾಡಿದ್ದರೆ ಕೊಡಿ'' ಎಂದ. ಗೊಣಗಿಕೊಂಡೇ ಮಿಕ್ಕಿದ್ದ ಅವಲಕ್ಕಿಗೆ ಇನ್ನಷ್ಟು ಈರುಳ್ಳಿ ಆಲೂಗಡ್ಡೆ ಹುರಿದು ಹಾಕಿ ತಂದುಕೊಟ್ಟೆ. ಥ್ಯಾಂಕ್ಸ್ ಎನ್ನುತ್ತಾ ಹರಿ ಹೊರಗೆ ಹೊರಟ. ''ಅಲ್ಲಾ ತಾಜ್ ಟೀ ಬ್ಯಾಗ್ಸ್, ಹಾಲು ಎಲ್ಲ ಇವನ ಮನೆಯಲ್ಲಿ ತಂದಿಟ್ಟಿದ್ದೆನಲ್ಲ'' ಎಂದುಕೊಂಡೆ. ನನ್ನ ಪತಿ ದೇವರು ಮಗಳ ಜತೆ ಲೆಗೋ ಆಡುತ್ತ ನಗುತ್ತಿದ್ದರು.

ಆದಾದ ನಂತರ ಹರಿ ನಮ್ಮ ಮನೆಗೆ ಬರಲಿಲ್ಲ. ಬ್ಯಾಂಕಿನಲ್ಲಿ ಪತಿ ದೇವ್ರಿಗೆ ಯಾರೋ ಹೇಳಿದರಂತೆ ಹರಿ ಮತ್ತು ರಜಿನಿ ಹರಿಯ ತಂದೆತಾಯಿಗಳನ್ನು ಕಾಣಲು ಮಧ್ಯಪ್ರದೇಶಿಗೆ ಹೋದರೆಂದು. ಕೆಲವೇ ದಿನಗಳಲ್ಲಿ ಪತಿ ದೇವರಿಗೆ ವರ್ಗವಾಯಿತು. ನಾನು ಬ್ಯಾಂಕಿನ ಫ್ಲಾಟ್ ಬಿಟ್ಟು ನನ್ನ ಕೇಂದ್ರ ಸರ್ಕಾರೀ ಕ್ವಾರ್ಟಸ್ಗೆ ಹೋದೆ. ಹರಿ ಮತ್ತು ರಜಿನಿ ಕೂಡ ಬೇರೆ ಕಡೆಗೆ ಹೋದರೆಂದೂ ತಿಳಿಯಿತು. ಕಾಲದ ಮಹಿಮೆ ನೋಡಿ ಹರಿ ರಜಿನಿ ನಮ್ಮ ಸ್ಮೃತಿ ಪಟಲದಿಂದ ಮಾಯವಾದರು.

ಸುಮಾರು ಎಂಟು ವರ್ಷ ಕಳೆದು ಹೋದವು ಈಗ ನಾವು ಗೋವಾದಲ್ಲಿ ವಾಸವಾಗಿದ್ದೆವು. ನಮ್ಮ ಇಬ್ಬರು ಹೆಣ್ಣು ಮಕ್ಕಳು ಶಾಲೆಗೆ ಹೋಗುತ್ತಿದ್ದರು. ಒಂದು ದಿನ

ಇದ್ದಕ್ಕಿದ್ದ ಹಾಗೆ ಸುಬ್ಬುವಿನ ಫೋನ್ ಬಂದಿತು ಯಜಮಾನರಿಗೆ. ಈಗ ತಾನು ಮತ್ತು ಹೆಂಡತಿ ದುಬೈನಲ್ಲಿ ತಮ್ಮ ಪುಟ್ಟ ಮಗಳ ಜತೆ ಇರುತ್ತೇವೆಂದೂ, ರಜಕ್ಕಾಗಿ ಗೋವಾಗೆ ಬಂದಿರುವರೆಂದೂ ಹೇಳಿ ನಮ್ಮನ್ನು ತಾವಿರುವ ಹೋಟೆಲಿಗೆ ರಾತ್ರಿಯ ಭೋಜನಕ್ಕಾಗಿ ಕರೆದಿದ್ದ.

ನಾವೂ ಸಂತಸದಿಂದ ಒಪ್ಪಿಕೊಂಡೆವು. ಸುಂದರ ಸಂಜೆ ಸಮುದ್ರದ ನೋಟ. ನಗುತ್ತ ಮಾತನಾಡುತ್ತ ಕಳೆದೆವು. ಸುಬ್ಬು ತಾನು ಬ್ಯಾಂಕ್ ಬಿಟ್ಟು ದುಬೈನಲ್ಲಿ ಬೇರೆ ಕೆಲಸ ಮಾಡುತ್ತಿದ್ದೇನೆಂದ ಅವನ ಪತ್ನಿ ದೊಡ್ಡ ಕಂಪನಿಯಲ್ಲಿ ಮ್ಯಾನೇಜರ್ ಅಂತೇ. ಪುಟ್ಟ ಮಗಳು ಮುದ್ದಾಗಿದ್ದಳು.

ಸುಬ್ಬು ನನ್ನತ್ತ ನೋಡುತ್ತಾ ''ನಿಮಗೆ ಹರಿ ರಜನಿಯ ನೆನಪು ಇದೆ ತಾನೇ'' ಎಂದು ಪೀಠಿಕೆ ಹಾಕಿದ. ಮರೆತು ಹೋಗಿದ್ದೆ ಎಂದುಕೊಂಡ ನೆನಪುಗಳೆಲ್ಲಾ ಜಲಪಾತದಂತೆ ನುಗ್ಗಿದವು. ''ಹೌದಪ್ಪಾ ನಿನ್ನ ಗೆಳೆಯ ನನ್ನಿಂದ ಸಾಕಾದಷ್ಟು ಕೆಲಸ ಮಾಡಿಸಿಕೊಂಡು ಮರೆತೇ ಬಿಟ್ಟ'' ಎಂದೆ. ನನ್ನ ಪತಿ ದೇವರು ನನ್ನ ಮಾತಿಗೆ ಒಗ್ಗರಣೆ ಹಾಕುತ್ತ ''ನೋಡು ಸುಬ್ಬು, ಬೇಡ ಬೇಡ ಎಂದರೂ ಇವಳು ಮುಂದೆ ಹೋಗಿ ಸಾವಿರಾರು ರೂಪಾಯಿ ಖರ್ಚು ಮಾಡಿ ಅವನ ಮನೆ ಸಜ್ಜು ಮಾಡಿದಳು. ಆಮೇಲೆ ಅವರಿಬ್ಬರೂ ನಮ್ಮ ಮನೆಗೆ ಬಂದಾಗ ಗಿಫ್ಟ್ ಕೊಡಬೇಕು ಎಂದು ಕುಣಿದಾಡಿದಳು. ಅವನಿಗೆ ಗಿಫ್ಟ್ ಕೊಡಲೇ ಇಲ್ಲ ಎಂದು ಬೇಜಾರು ಮಾಡಿಕೊಂಡಳು. ಅವರ ಮನೆಗಾಗಿ ತಂದಿದ್ದ ಪ್ರೆಷರ್ ಕುಕ್ಕರ್ ನಾವೇ ಉಪಯೋಗಿಸಿಕೊಂಡೆವು. ಭಾರಿ ಚಾಲಾಕಿನ ಮನುಷ್ಯ. ಇವಳನ್ನು..... ಕುರಿ ಮಾಡಿದ'' ಎಂದರು.

''ನನ್ನನ್ನು ಮನೆಯಿಂದ ಓಡಿಸಿದ್ದು ನಿಮಗೆ ಕಾಣಲೇ ಇಲ್ಲ. ನನ್ನ ಸಾಮಾನುಗಳನ್ನೂ ಉಪಯೋಗಿಸಿ ತನ್ನ ಜತೆ ತೆಗೆದುಕೊಂಡು ಹೋಗಿದ್ದು, ಎಲೆಕ್ಟ್ರಿಸಿಟಿ ಬಿಲ್ ನನ್ನ ಹತ್ತಿರ ಕೊಡಸುತ್ತಿದ್ದು ಇವೆಲ್ಲ ನಿಮಗೆ ಗೊತ್ತೇ ಇಲ್ಲ. ಅವನ ಮದುವೆ ರಿಜಿಸ್ಟ್ರೇಷನ್ ದಿವಸ ಕ್ಯಾಂಟೀನಿನ ಬಿಲ್ಲನ್ನೂ ನನ್ನ ಹತ್ತಿರ ಕೊಡಿಸಲಿಲ್ಲವೇ? ನಾನೂ ಕುರಿ ಆದೆನಲ್ಲ'' ಎಂದು ಸುಬ್ಬು ದಬಾಯಿಸಿದ. ಸುಬ್ಬು ಹೆಂಡತಿ ನಮಗೆ ಸಮಾಧಾನ ಹೇಳಿದಳು. ''ಸುಬ್ಬು, ಹರಿ ನಮಗೆ ಸಿಕ್ಕಿದ್ದ ವಿಷಯ ಹೇಳಲೇ ಇಲ್ಲವಲ್ಲ'' ಎಂದು ಪೀಠಿಕೆ ಹಾಕಿದಳು.

ಹಾಂ, ಹೇಳುವುದು ಬೇಕಾದಷ್ಟಿದೆ. ಹರಿ ಸ್ಟೇಟ್ ಬ್ಯಾಂಕ್ ಬಿಟ್ಟು ಕುವೈಟ್‌ನಲ್ಲಿ ಬೇರೆ ಬ್ಯಾಂಕ್ ಸೇರಿದ್ದಾನೆ. ನನಗೆ ದುಬೈನಲ್ಲಿ ಯಾವುದೋ ಮೀಟಿಂಗ್‌ನಲ್ಲಿ ಸಿಕ್ಕಿದ್ದ ಸಾಯಂಕಾಲ ನಾವಿಬ್ಬರೂ ನನ್ನ ಹೋಟೆಲಿನಲ್ಲಿ ಭೇಟಿ ಮಾಡಿದೆವು. ಹರಿ ಎರಡು ಪೆಗ್ ಕುಡಿದ ನಂತರ ತುಂಬಾ ವಿಮನಸ್ಕನಾದ ಈಗ ಅವನ ಕಥೆಕೇಳಿ....

ಹರಿ ಪಾಪ ಭೋಳೆ ಮನುಷ್ಯ. ಪ್ರೊಬೇಷನರಿ ಆಫೀಸರ್ ಪರೀಕ್ಷೆ ತೇರ್ಗಡೆಯಾಗಿ ಸ್ಟೇಟ್ ಬ್ಯಾಂಕಿನಲ್ಲಿ ಕೆಲಸ ಸಿಕ್ಕಾಗ ತಂದೆ ತಾಯಿಯರು ಸಂಭ್ರಮ ಪಟ್ಟರು. ಹತ್ತಾರು ಕುಟುಂಬಗಳಿಂದ ಮದುವೆ ಮಾತುಗಳು ಕೇಳಿ ಬಂದವು. ಮೊದಲು ಕೆಲಸ ಕನ್ಫರ್ಮ್ ಆಗಲಿ ಆಮೇಲೆ ಮದುವೆ ಎಂದು ಹರಿ ತಪ್ಪಿಸಿಕೊಂಡ. ಬೇರೆ ಬೇರೆ ತರಹೆಯ ಟ್ರೈನಿಂಗ್ ಹೆಡ್ ಆಫೀಸಿಗೆ ಪೋಸ್ಟಿಂಗ್ ಆದಾಗ ಹರಿ ಸಂತಸದಿಂದ ಸುಬ್ಬುವಿನೊಂದಿಗೆ ಬ್ಯಾಂಕ್ ಕೊಟ್ಟ

ಫ್ಲ್ಯಾಟಿಗೆ ಬಂದು ಸೇರಿದ್ದ. ಎರಡು ವಾರ ಕಳೆದ ನಂತರ ರಜಿನಿ ಕಾಣಿಸಿದಳು. ಪ್ರತಿ ದಿನ ಸ್ಟೈಲಾಗಿ ಡ್ರೆಸ್ ಮಾಡಿಕೊಂಡು ''ಸರ್, ಟೀ ಕುಡಿಯುವಿರಾ? ನಾನು ತಾಜ್ ಟೀ ಬ್ಯಾಗ್ಸ್ ತಂದಿದ್ದೇನೆ ಎನ್ನುತ್ತಾ ಇವನ ಟೇಬಲ್ ಮುಂದೆ ಕುಳಿತು ಟೀ ಕೊಟ್ಟು ತಾನೂ ಕುಡಿಯುವಳು. ತಲೆಯ ಕೂದಲು ಮುಂದೆ ಹಾರಿದಾಗ ಪೂರ್ತಿ ಕೊರಳನ್ನು ಅಲ್ಲಾಡಿಸಿ ಕೂದಲು ಹಿಂದೆ ಮಾಡಿಕೊಳ್ಳುತ್ತ ಮಾತನಾಡುವಳು. ಟೀ ಜತೆಗೆ ಬಟಾಟಾ ವಡ, ಪೋಹಾ, ಧೋಕ್ಲಾ ಹೀಗೆ ಮನೆಯಿಂದ ತಿಂಡಿ ತಂದುಕೊಡುತ್ತ ನಮ್ಮ ತಿಂಡಿಪೋತನ ಹೃದಯ ಗೆಲ್ಲತೊಡಗಿದಳು. ನಂತರ ಹೊರಗಡೆ ಹೋಗಿ ಸುತ್ತಾಡುವ ರೂಢಿಯಾಯಿತು. ಆಮೇಲೆ ಸಿನಿಮಾ ನೋಡುವ ಹುಚ್ಚು.

ಸರಿ ಪ್ರೇಮ ಈ ರೀತಿ ಪ್ರಾರಂಭವಾಯಿತು. ಹರಿಗೆ ಇಷ್ಟು ಬೇಗ ಮದುವೆ ಬೇಡವಾಗಿತ್ತು. ಆದರೆ ರಜಿನಿ ಪೀಡಿಸತೊಡಗಿದಳು. ಆಮೇಲೆ ಆತ್ಮಹತ್ಯೆಯ ಪ್ರಲಾಪ.

ಈಗ ನೋಡಿ ತಮಾಷೆ. ನಾವೆಲ್ಲಾ ಹರಿ ರಜಿನಿಯ ರಿಜಿಸ್ಟ್ರೇಷನ್‌ಗೆ ಸಹಾಯ ಮಾಡಿದೆವಲ್ಲ. ಆಮೇಲೆ ರಜಿನಿ ಗಲಾಟೆ ಮಾಡಿ ದೇವಸ್ಥಾನಕ್ಕೆ ಹೋಗಬೇಕು ಹೊತ್ತಾಯಿತು ಎನ್ನುತ್ತಾ ಹರಿಯನ್ನು ಕರೆದುಕೊಂಡು ಹೋದಳಲ್ಲ. ಟ್ಯಾಕ್ಸಿ ಸಿದ್ಧಿವಿನಾಯಕ ಮಂದಿರದ ಮುಂದೆ ಬಂದಾಗ ರಜಿನಿ ಹರಿಯ ಕೈ ಬಿಗಿಯಾಗಿ ಹಿಡಿದು ''ನಮ್ಮ ತಂದೆ ತಾಯಿಗಳ ಆಶೀರ್ವಾದವಿಲ್ಲದೆ ಹೇಗೆ ಮಂಗಳಸೂತ್ರ ಕಟ್ಟಿಸಿಕೊಳ್ಳಲಿ? ಒಂದೇ ನಿಮಿಷ ನಮ್ಮ ಮನೆಗೆ ಹೋಗೋಣ ಎಂದವಳೇ ಟ್ಯಾಕ್ಸಿಯನ್ನು ವಡಾಲಕ್ಕೆ ತಿರುಗಿಸಿದಳು. ಹರಿ ಭಯದಿಂದ ನಡುಗುತ್ತಿದ್ದ. ಅಲ್ಲಿ ನೋಡಿದರೆ ಫ್ಲಾಟಿನ ಮುಂದೆ ರಂಗೋಲಿ ಬಿಡಿಸಿ ಬಲೂನು ತೋರಣ ಕಟ್ಟಿ ಇವರಿಬ್ಬರನ್ನು ಒಳಗೆ ಬರಮಾಡಿಕೊಂಡರಂತೆ. ಮನೆಯ ತುಂಬಾ ರಜಿನಿಯ ಹತ್ತಿರದ ಸಂಬಂಧಿಕರು ಜಮಾಯಿಸಿದ್ದರು. 10 ಇಂಚಿನ ಪುಟ್ಟ ಹವನ ಕುಂಡ ತಯಾರಾಗಿತ್ತು. ಪುರೋಹಿತರು ಕುಳಿತಿದ್ದರು. ಹರಿಯನ್ನು ರಜಿನಿಯ ತಮ್ಮ ಒಳಗೆ ಕರೆದುಕೊಂಡು ಹೋಗಿ ಬೇಗ ಬೇಗ ರೇಶಿಮೆಯ ಮಗುಟವುಡಿಸಿ ಮರಾಠಿ ಜನರು ಕಟ್ಟಿಸಿಕೊಳ್ಳುವ ಮುತ್ತಿನ ಬಾಸಿಂಗವನ್ನು ಕಟ್ಟಿ ಟೋಪಿ ಹಾಕಿ ಹೊರಗೆ ಕರೆದುಕೊಂಡು ಬರುವ ಹೊತ್ತಿಗೆ, ರಜಿನಿ ಸೀರೆ ಬದಲಾಯಿಸಿ ಬಾಸಿಂಗ ಕಟ್ಟಿಕೊಂಡು ತಯಾರಾಗಿದ್ದಳಂತೆ. ಪುರೋಹಿತರು ಮಂಗಳಾಷ್ಟಕ, ಮಂತ್ರ ಹೇಳಿ, ಹೋಮ ಕುಂಡದ ಸುತ್ತ ಏಳು ಸುತ್ತು ಸುತ್ತಿಸಿ ಮಂಗಳಸೂತ್ರ ಕಟ್ಟಿಸಿದರಂತೆ. ಇವರಿಬ್ಬರೂ ಹಿರಿಯರ ಕಾಲಿಗೆ ಬಿದ್ದರಂತೆ. ಗುಮ್ಮಾಗಿಯೇ ರಜಿನಿಯ ತಂದೆ ಶಂಕರ ರಾವ್ ಹರಿಗೆ ಚಿನ್ನದ ಉಂಗುರ ಹಾಕಿ ರಿಸ್ಟ್ ವಾಚ್ ಕಟ್ಟಿದರಂತೆ. ನಂತರ ಇವರಿಬ್ಬರಿಗೂ ಮಹಿಳೆಯರು ಆರತಿ ಮಾಡಿದರಂತೆ. ಎಲ್ಲಿಂದಲೋ ಹಾಜರಾದ ಫೋಟೋಗ್ರಾಫರ್ ಬೇಗ ಬೇಗ ಒಂದಿಪ್ಪತ್ತು ಫೋಟೋ ಕ್ಲಿಕ್ಕಿಸಿದನಂತೆ. ಮೊದಲೇ ಹೇಳಿದಂತೆ ಪಕ್ಕದ ಬೀದಿಯ ಕ್ಯಾಟರರ್ ಬಂದು ಊಟ ಬಡಿಸಿದನಂತೆ. ಬಂದ ಜನವೆಲ್ಲ ಊಟ ಮಾಡಿ ಹೋದರಂತೆ ಅವರ ಮರಾಠಿ ಭಾಷೆ ಇವನಿಗೆ ಏನೂ ಗೊತ್ತಿಲ್ಲ. ರಜಿನಿ ತಾಯಿಯನ್ನು ತಬ್ಬಿಕೊಂಡು ಕಣ್ಣೀರು ಕರೆದಳಂತೆ ನಂತರ ರಜಿನಿ ''ನಮ್ಮ ಮನೆಗೆ ಹೋಗೋಣ ಬಾ'' ಎಂದಳಂತೆ.

ಆಮೇಲೆ ಇವರಿಬ್ಬರು ಸಿದ್ಧಿ ವಿನಾಯಕ ಮಂದಿರಕ್ಕೆ ಹೋಗಿ ಕೈ ಮುಗಿದು ಮನೆಯ ಕಡೆ ಬಂದರಂತೆ. ಇಲ್ಲಿ ನಾನು ಚಿಂತೆ ಮಾಡುತ್ತಾ ಇವರ ಹಾದಿ ಕಾಯುತ್ತ ಕೂತಿದ್ದೆ ನೋಡಿ ವಿಪರ್ಯಾಸ!!

ಇವರು ಮನೆಗೆ ಬಂದಾಗ ಹನ್ನೊಂದು ಗಂಟೆಯಾಗಿತ್ತಂತೆ. ಮಾರನೆಯ ದಿನ ಚಹಾ ತಿಂಡಿ ನಾನು ಕೊಟ್ಟೆನಲ್ಲ!

ಹರಿ ತನ್ನ ತಂದೆ ತಾಯಿಗಳಿಂದಲೂ ಆಶೀರ್ವಾದ ಸ್ವೀಕರಿಸಲು ಜಬಲ್ ಪುರಕ್ಕೆ ಹೆಂಡತಿಯನ್ನು ಕರೆದುಕೊಂಡು ಹೊರಟ. ಪ್ರೀತಿಯ ಮಗ ತಮಗೆ ತಿಳಿಸದೇ ಮುಂಬೈನ ಹುಡುಗಿಯನ್ನು ಮದುವೆಯಾಗಿ ನಮ್ಮ ಸೊಸೆ ಇವಳು ಎಂದು ಪರಿಚಯ ಮಾಡಿಸಿದಾಗ ಹರಿಯ ತಾಯಿ ಮೂರ್ಛೆ ಹೋದರಂತೆ. ಹರಿ ಅವರನ್ನು ಸಮಾಧಾನ ಪಡಿಸಿ ''ಮಾ ನನ್ನನ್ನು ಕ್ಷಮಿಸು'' ಎಂದು ದೀನನಾಗಿ ಕೇಳಿದಾಗ ತಾಯಿಯ ಮೃದು ಹೃದಯ ಕರಗಿ ಎರಡೇ ದಿನಗಳಲ್ಲಿ ರಿಸೆಪ್ಶನ್ ಏರ್ಪಡಿಸಿ ಅದಕ್ಕೆ ಮುನ್ನ ಉತ್ತರ ಭಾರತೀಯ ಪದ್ಧತಿಯಂತೆ ಮದುವೆ ಶಾಸ್ತ್ರವನ್ನು ಮಾಡಿಸಿದರಂತೆ... ಆದರೆ ನಮ್ಮ ರಜಿನಿ ತನ್ನ ಪಾಡಿಗೆ ತಾನು ಕೋಣೆಯಲ್ಲಿ ಕುಳಿತು ನೈಲ್ ಪೋಲಿಷ್ ಹಾಕಿಕೊಳ್ಳುತ್ತಾ ಹರಿಯ ತಾಯಿಯನ್ನು ಒಮ್ಮೆಯೂ ಸರಿಯಾಗಿ ಮಾತನಾಡಿಸಲಿಲ್ಲವಂತೆ. ತಾಯಿ ಅಳುತ್ತಾ ''ನಮ್ಮನ್ನು ದೂರ ಮಾಡಬೇಡಪ್ಪ'' ಎನ್ನುತ್ತಾ ಇವರನ್ನು ಬೀಳುಕೊಟ್ಟರಂತೆ. ಆದರೆ ತಂದೆ ಒಂದು ಸಾರಿಯೂ ಮಗನ ಅಥವಾ ಸೊಸೆಯ ಹತ್ತಿರ ಮಾತನಾಡಲಿಲ್ಲವಂತೆ.

ಮುಂದಿನ ಕಥೆ ಮಾಮೂಲು. ರಜಿನಿ ಮನೆಯ ಮುಖ್ಯಸ್ಥೆ. ಎಲ್ಲವೂ ಅವಳು ಹೇಳಿದ ಹಾಗೆ ಹರಿ ಬುದ್ಧಿ ಜೀವಿ. ಸಂಗೀತ ಸಾಹಿತ್ಯದಲ್ಲಿ ಉತ್ತಮ ಅಭಿರುಚಿಯುಳ್ಳವನು. ರಜಿನಿಗೆ ಅದೊಂದೂ ಬೇಡ. ಬರೀ ಸಿನಿಮಾ ಮೇಕಪ್ ಬಟ್ಟೆಗಳು ಹೀಗೆ ಅವಳ ಆಸಕ್ತಿ. ಸುಬ್ಬು ಮೊದಲೇ ಹೇಳಿದಂತೆ ಮೇಲಿನ ಅಂತಸ್ತು ಖಾಲಿ! ಒಂದು ಸಂಜೆ ರಜಿನಿಯ ತಮ್ಮ ಇವರ ಮನೆಗೆ ಬಂದಿದ್ದನಂತೆ. ಒಂದೆರಡು ಪೆಗ್ ಕುಡಿದ ನಂತರ ಸಡಿಲವಾಗಿ ಮಾತನಾಡುತ್ತಾ ''ಭಾವೂಜಿ, ನಮ್ಮಪ್ಪ ಮಹಾ ಚಾಲಾಕು ಮನುಷ್ಯ ಅಕ್ಕನಿಗೆ ನಿಮ್ಮನ್ನು ಕಟ್ಟಿ ಹಾಕೇ ಹಾಕುತ್ತೀನಿ ಎನ್ನುತ್ತಾ ನಿಮ್ಮ ಬ್ಯಾಂಕಿನ ಅಡ್ಮಿನಿಸ್ಟ್ರೇಷನ್ ಮತ್ತು ಯೂನಿಯನ್ ಮೂಲಕ ರಜಿನಿಯನ್ನು ನೀವಿರುವ ಡಿಪಾರ್ಟ್ಮೆಂಟಿಗೆ ವರ್ಗ ಮಾಡಿಸಿ ನಿಮ್ಮ ಮದುವೆ ಮೂರೇ ತಿಂಗಳುಗಳಲ್ಲಿ ಮಾಡಿಸಿದರು. ಇಷ್ಟು ದೊಡ್ಡ ಆಫೀಸರ್ ಅನ್ನು ಅಳಿಯ ಮಾಡಿಕೊಳ್ಳಲು ನಮ್ಮ ಪಂಗಡದಲ್ಲಿ ಲಕ್ಷ ರೂಪಾಯಿ ವರದಕ್ಷಿಣೆ ಕೊಟ್ಟು ಮದುವೆಯನ್ನು ಅದ್ಧೂರಿಯಾಗಿ ಮಾಡಿಕೊಡಬೇಕಿತ್ತು. ನಮ್ಮಪ್ಪ ಹೆಚ್ಚು ಖರ್ಚು ಮಾಡದೆ ನಿಮ್ಮನ್ನು ಬುಟ್ಟಿಗೆ ಹಾಕಿಕೊಂಡರು'' ಎಂದುಬಿಟ್ಟ. ಪಾಪ ಹರಿಯ ವಿಸ್ಕಿ ಗ್ಲಾಸ್ ಅವನ ಕೈಯಲ್ಲೇ ಉಳಿಯಿತು.

''ಸುಬ್ಬು ಶಂಕರ್‌ರಾವ್ ನಿಂಬಾಳ್ಕರ್ ಮತ್ತು ಅವನ ಮಗಳು ನನ್ನನ್ನು ಕುರಿ ಮಾಡಿಬಿಟ್ಟರು. ನನ್ನ ಪಾಡು ಬೀದಿ ನಾಯಿಯ ಪಾಡಾಯಿತು. ಎರಡು ವರ್ಷದ ನಂತರ, ನಮಗೆ ಅವಳಿ ಮಕ್ಕಳಾದವು. ಒಂದು ಗಂಡು ಮಗು, ಒಂದು ಹೆಣ್ಣು ಮಗು. ಮೊಮ್ಮಕ್ಕಳನ್ನು ನೋಡಿ ನಮ್ಮ ತಾಯಿ ತಂದೆ ಮೆತ್ತಗಾದರು. ಮಕ್ಕಳು ಸಧ್ಯ ನನ್ನ ತರಹ ಆದರೆ ಸಾಕು'' ಎಂದು ಇನ್ನೆರಡು ಪೆಗ್ ಕುಡಿದು ಹರಿ ತನ್ನ ರೂಮಿಗೆ ಹೋದ.

ಸುಬ್ಬು ಕಥೆ ಮುಗಿಸಿ ಸುಮ್ಮನಾದ. ನನ್ನ ಪತಿ, ನಾನು ಮತ್ತು ಸುಬ್ಬು ಒಂದು ನಿಮಿಷ ಮೌನವಾಗಿದ್ದೆವು. ಹುತಾತ್ಮರ ನೆನಪಿನಲ್ಲಿ ಮೌನ ತೋರಿಸಿದಂತೆ. ಆಮೇಲೆ ಜೋರಾಗಿ ಗಹಗಹಿಸಿ ನಕ್ಕೆವು! ನಮ್ಮನ್ನು ಕುರಿ ಮಾಡಿದ್ದ ಹರಿ ತಾನೇ ಕುರಿಯಾಗಿದ್ದ!

☆

# ಇಟ್ಟ ಹೆಜ್ಜೆಯ ಛಾಪು

**- ಬೇಲೂರು ರಾಮಮೂರ್ತಿ**

**ಹೆಂ**ಡತಿ ತಂದಿಟ್ಟ ಕಾಫಿ ಕುಡಿಯುತ್ತಾ ತಿಮ್ಮಪ್ಪಯ್ಯ ಸಣ್ಣಗೆ ನಕ್ಕರು. ಅದರಿಂದ ಅವರ ಹೆಂಡತಿ ವನಜ ಅವರ ಮುನಿಸು ತುಸು ಹೆಚ್ಚೇ ಆಯಿತು. ಗಂಡ ನಕ್ಕಿದ್ದಕ್ಕೆ ಕಾರಣ ಹೇಳದೇ ಇದ್ದಾಗ ಅವರೇ ''ಯಾಕೆ ನಕ್ಕಿದ್ದು'' ಅಂತ ಕೇಳಿದರು. ಹೆಂಡತಿ ಕಡೆ ನೋಡಿ ''ಎರಡು ವಿರುದ್ಧ ದಿಕ್ಕಿನ ನಕ್ಷತ್ರಗಳು ಒಟ್ಟಿಗೆ ಸೇರಿಕೊಂಡು ಅದು ಹೇಗೆ ಮೂವತ್ತು ವರ್ಷ ಕಳೆದಿವೆ ನೋಡು. ನಾನು ಹೀಗೆ ನಡ್ಕೊಂಡ್ರೆ ನಿಂಗೆ ಕೋಪ ಬರುತ್ತೆ ಅಂತ ಗೊತ್ತಿದ್ರೂ ನಾನು ಹೀಗೇ ನಡ್ಕೊತಾ ಇದೀನಿ. ನನ್ನ ಕೋಪ ಅವರಿಗೆ ಲೆಕ್ಕಕ್ಕೇ ಇಲ್ಲ ಅಂದುಕೊಂಡರೂ ನೀನು ಕೋಪ ಮಾಡಿಕೊಳ್ಳೋದನ್ನು ಬಿಟ್ಟಿಲ್ಲ. ಇದೇ ಅಲ್ಲವೇ ಸಾಮರಸ್ಯ ದಾಂಪತ್ಯ ಅಂದ್ರೆ. ಇದು ಇವತ್ತಿನ ಜೋಡಿಗಳಲ್ಲಿ ನಿರೀಕ್ಷೆ ಮಾಡೋಕೆ ಸಾಧ್ಯವೇ'' ಅಂತ ಪ್ರಶ್ನೆ ಮಾಡಿದರು. ಗಂಡ ಹೀಗೇ ಬಹಳ ದೀರ್ಘವಾಗಿ ಮಾತಾಡೋದು ಅನ್ನೋದು ವನಜ ಅವರಿಗೆ ಗೊತ್ತು. ನಾನು ಹೀಗೆ ಇಷ್ಟುದ್ದ ಮಾತಾಡಿದ್ರೆ ಅವಳಿಗೆ ಏನೂ ಅರ್ಥ ಆಗೋಲ್ಲ ಅನ್ನೋದೂ ತಿಮ್ಮಪ್ಪಯ್ಯನವರಿಗೆ ಗೊತ್ತು. ಆದರೂ ಹೀಗೇ ಮಾತಾಡ್ತಾರೆ. ನಂತರ ಅವರು ಹೆಂಡತಿನ ಕೂರಿಸಿಕೊಂಡು ಅರ್ಥ ಮಾಡಿಸುತ್ತಾರೆ. ಈಗಲೂ ಹಾಗೇ ಹೆಂಡತಿಯ ಕೈ ಹಿಡಿದು ಮುಂದೆ ಕೂರಿಸಿಕೊಂಡು ''ನೋಡು ವನಜ, ಯಾವುದೇ ಮನುಷ್ಯನಿಗೆ ತಾನು ಮಾಡುತ್ತಿರುವುದು ಸರಿಯಾದ, ನ್ಯಾಯಯುತವಾದ ಕೆಲಸ, ಇದು ನನ್ನ ಮೂಗಿನ ನೇರಕ್ಕೆ ಮಾತ್ರ ಸರಿ ಅಂತಲ್ಲ, ಬದಲಿಗೆ ಯಾರು ಯಾವುದೇ ಕೋನದಿಂದ ನೋಡಿದರೂ ಇದು ಸರಿ ಅಂತ ಗೊತ್ತಾದರೆ, ಮನದಟ್ಟಾದರೆ ಅಂಥಾ ಕೆಲಸಗಳನ್ನು ಮಾಡುತ್ತಿರಲು ಅವನು ಯಾರಿಗೂ, ಯಾರಿಗೂ ಅಂದ್ರೆ ದೇವರಿಗೂ ಹೆದರಬೇಕಾಗಿಲ್ಲ. ಇಷ್ಟು ವರ್ಷ ಇದೇ ನನ್ನನ್ನು ಕಾಪಾಡಿಕೊಂಡು ಬರುತ್ತಿರುವುದು. ಈಗ ನಿನ್ನ ಕೋಪ ಏನೂ ಅಂದ್ರೆ, ನಾನು ಅಪಾತ್ರರಿಗೆಲ್ಲಾ ಸಹಾಯ ಮಾಡ್ತಾ ಇದೀನಿ ಅಂತ ತಾನೇ. ಅಪಾತ್ರರು ಅಂದ್ರೆ ಯಾರು? ನಮ್ಮ ಸಹಾಯವನ್ನು ದುರುಪಯೋಗ ಮಾಡಿಕೊಳ್ಳೋರು. ಒಂದು ವಿಚಾರ ತಿಳ್ಕೊ, ಯಾರೇ ಆಗಲಿ ಸಹಾಯ ಮಾಡಬೇಕು ಅನಿಸಿದರೆ ಮಾಡಿಬಿಡಬೇಕು. ಅದು ಬಿಟ್ಟು ನಾನು ಸಹಾಯ ಮಾಡಿದ್ದನ್ನು ಅವರು ಹೇಗೆ ಉಪಯೋಗ ಮಾಡಿಕೊಳ್ಳುತ್ತಾರೆ, ಅವರು ನನ್ನನ್ನು ನೆನಪು ಮಾಡಿಕೊಳ್ಳುತ್ತಾರೆಯೇ, ಧನ್ಯವಾದ ಅರ್ಪಿಸುತ್ತಾರೆಯೇ ಅಂತೆಲ್ಲ ಯೋಚನೆ ಮಾಡಬಾರದು. ಹಾಗೆ ಮಾಡಿದರೆ ಅದು ಸಹಾಯ ಅನಿಸೋದೇ ಇಲ್ಲ. ನಾವು ಪ್ರಕೃತಿಯಿಂದ ಬಹಳಷ್ಟು ಕಲಿಯೋದಿದೆ. ಉದಾಹರಣೆಗೆ ಸೂರ್ಯ ಬಿಸಿಲನ್ನು ಕೊಡ್ತಾನೆ. ಅವನೇನು ಯೋಚನೆ ಮಾಡ್ತಾನೆಯೇ, ನನ್ನ ಬಿಸಿಲನ್ನು ಯಾರು ಉಪಯೋಗ ಮಾಡ್ಕೊತಾರೆ, ಹೇಗೆ ಮಾಡ್ಕೊತಾರೆ ಅಂತ. ಅವನನ್ನು ಇದೇನು ಹಾಳಾದ್ದು ಬಿಸಿಲು, ಇವತ್ತೇನು ಈ ಸೂರ್ಯ ಈ ಪಾಟಿ ಸುಡ್ತಾ ಇದಾನೆ ಅಂತ ಕೋಪ ಮಾಡಿದರೂ ಅವನು ಬಿಸಿಲು ನೀಡೋದನ್ನು ಬಿಡೋದಿಲ್ಲ. ನೋಡಯ್ಯ ನಾನು ಇಷ್ಟು ಕೊಡ್ತಾ ಇದೀನಿ ನಿನಗೆಷ್ಟು ಬೇಕೋ ಅಷ್ಟು ಉಪಯೋಗಿಸಿಕೊ ಅನ್ನುವ ಬುದ್ಧಿ ಅವನದು. ಇದನ್ನೇ

ಮನುಷ್ಯ ಮಾತ್ರದವರೂ ಪಾಲಿಸಬೇಕು. ಕೊಡಬೇಕು ಎನ್ನುವ ಬುದ್ಧಿಯನ್ನು ಬೆಳೆಸಿಕೊಳ್ಳಬೇಕು, ಉಳಿಸಿಕೊಳ್ಳಬೇಕು, ನಂತರ ಜೀವನದುದ್ದಕ್ಕೂ ಅದನ್ನು ಬಳಸಿಕೊಳ್ಳಬೇಕು. ಇದೇ ಬುದ್ಧಿಯನ್ನೇ ಚಂದ್ರ, ತಾರೆ, ನದಿ, ಮರ, ಗಿಡ, ಇವೆಲ್ಲವೂ ಪಾಲಿಸಿಕೊಂಡು ಬಂದಿರುವುದು.

ತಿಮ್ಮಪ್ಪಯ್ಯ ಮಾತಾಡ್ತಾ ಮಾತಾಡ್ತಾ ತಮ್ಮ ಗಮನ ಯಾವ ಕಡೆ ಇದೆ ಅನ್ನುವುದನ್ನೇ ಮರೆತಿದ್ದವರು ನೋಡಿದರೆ ಹೆಂಡತಿ ಯಾವಾಗಲೋ ಅಡಿಗೆ ಮನೆಗೆ ಹೋಗಿಯಾಗಿದೆ. ಮತ್ತೆ ಅವರಿಗೆ ನಗು ಬಂತು. ನಾನು ಸುತ್ತಾಡ್ಕೊಂಡು ಬರ್ತೀನಿ ಅಂತ ಹೆಂಡತಿಗೆ ಕೇಳುವ ಹಾಗೆ ಹೇಳಿ ಹೊರಟರು.

ತಿಮ್ಮಪ್ಪಯ್ಯ ತಮ್ಮ ಬದುಕಿನಲ್ಲಿ ಬಹಳಷ್ಟನ್ನು ಕೊಟ್ಟಿದ್ದಾರೆ. ಕೆಲವು ಹೆಂಡತಿಗೆ ಗೊತ್ತಿದ್ದು, ಇನ್ನು ಕೆಲವು ಹೆಂಡತಿಗೆ ಗೊತ್ತಾಗದೇ. ಅವರ ದೃಷ್ಟಿಯಲ್ಲಿ ಇದೆಲ್ಲವೂ ನನ್ನದಲ್ಲ ಅಂದ ಮೇಲೆ ನಾನು ಕೊಟ್ಟೆ ಅನ್ನೋದೇನು. ನನ್ನ ಮುಖಾಂತರ ಹೋಗಿದೆ ಅಷ್ಟೆ. ನನಗೂ ಅಷ್ಟೆ ಯಾರದೋ ಮುಖಾಂತರ ಬಂದಿದೆ ಎನ್ನುವುದು ಅರಿವಾಗಿದೆ. ಅಲ್ಲ, ಇವತ್ತೋ ಯಾವತ್ತೋ ಎಲ್ಲಾ ಕಂತೆ ಒಗೆದು ಹೋಗುವಾಗ ಯಾವುದು ನನ್ನದು. ನನ್ನದು ಎಂದುಕೊಂಡಿರುವುದು ಎಲ್ಲರದೂ ಆಗಲಿ ಅನ್ನುವುದು ಅವರ ಆಂತರಿಕ ಭಾವ. ಆದರೆ ಅವರ ಹೆಂಡತಿಯ ತಕರಾರು ಏನೆಂದರೆ ನಾವು ಮಾಡಿದಷ್ಟು ವೇಗವಾಗಿ ನಮಗೆ ಸಹಾಯ ದೊರಕುತ್ತಿಲ್ಲವಲ್ಲ ಅಂತ. ಆದರೆ ಆ ಲೆಕ್ಕಾಚಾರವೇ ಬೇರೆ.

ತಿಮ್ಮಪ್ಪಯ್ಯನವರ ಮೊಬೈಲ್ ರಿಂಗಾಯಿತು. ಏನಾದರೂ ತುರ್ತು ಇದ್ದರೆ ಮಾತ್ರ ಕರೆ ಮಾಡು ಅಂತ ಹೆಂಡತಿಗೆ ಹೇಳಿದ್ದರು. ಹಾಗಿರುವಾಗ ಈ ಕರೆ ತುರ್ತಿನದೇ ಇರಬೇಕು ಅನಿಸಿತು. ''ನೀವು ಅಷ್ಟು ಉದ್ದ ಮಾತಾಡಿ ನನ್ನ ಮನಸ್ಸಿನಲ್ಲಿದ್ದ ಮಾತನ್ನು ಮರೆಸಿಬಿಟ್ಟಿರಿ. ನನಗೆ ಬೇಜಾರಾಗಿ ಅಡಿಗೆ ಮನೆಗೆ ಹೋದೆ. ಅಷ್ಟರಲ್ಲಿ ನೀವು ಹೊರಗೆ ಹೊರಟಿರಿ. ಈಗ ನಾನು ಹೇಳುವುದನ್ನು ಸರಿಯಾಗಿ ಕೇಳಿಸಿಕೊಳ್ಳಿ, ನಮ್ಮ ಪ್ರಸಾದ ಬೆಂಗಳೂರಿಗೆ ಹೋಗಿ ಆರು ತಿಂಗಳಾಯಿತು. ಇವತ್ತು ಕೆಲಸ ಸಿಕ್ಕುತ್ತೆ ನಾಳೆ ಸಿಕ್ಕುತ್ತೆ ಅಂತ ಹೇಳಿಕೊಂಡೇ ಇದಾನೆ. ಅವನು ಇವತ್ತು ಫೋನ್ ಮಾಡಿ ಇಲ್ಲಿ ನನಗೆ ಕೆಲಸ ಸಿಕ್ತಿಲ್ಲ ನಾನು ವಾಪಸ್ ಬರ್ತಿದೀನಿ ಅಂತಿದಾನೆ. ಅಷ್ಟೊಂದು ಓದಿರುವ ಅವನು ಇಲ್ಲಿ ಬಂದು ಏನು ಮಾಡ್ತಾನೆ. ನೀವು ಅವನಿಗೆ ಏನಾದರೊಂದು ದಾರಿ ತೋರಿಸಬಾರದೇ'' ಅಂತ ಹೆಂಡತಿಯೂ ಅಷ್ಟುದ್ದ ದೂರು ಕೊಟ್ಟರು.

ತಿಮ್ಮಪ್ಪಯ್ಯ ''ಮನೆಗೆ ಬರ್ತಿದೀನಿ, ನಂತರ ಕೂತು ಮಾತಾಡೋಣ'' ಅಂದು ನಡಿಗೆ ಮುಂದುವರಿಸಿದರು. ಇನ್ನೂ ಅರ್ಧ ಗಂಟೆ ನಡೆದಾಡಿ, ಸಿಕ್ಕ ಸ್ನೇಹಿತರ ಜೊತೆ ಮಾತುಕತೆ ನಡೆಸಿ ಬೇಕಾದ ಒಂದೆರಡು ಹಣ್ಣುಗಳನ್ನು ತೆಗೆದುಕೊಂಡು ಮನೆಗೆ ಹೊರಟರು. ಹೆಂಡತಿ ದುಗುಡದಲ್ಲಿರ್ತಾಳೆ ಅವಳನ್ನು ಸಮಾಧಾನ ಮಾಡಬೇಕು. ಮುಂದೆ ಏನು ಮಾಡಬೇಕು ಅಂತ ಯೋಚಿಸಬೇಕು ಅಂತ ಮನದಲ್ಲಿ ಸಿದ್ಧತೆ ಮಾಡಿಕೊಂಡು ಹೊರಟರು.

ಮನೆ ಬಾಗಿಲು ತೆಗೆದ ಹೆಂಡತಿ ಬಹಳ ಆನಂದದಿಂದ, ಅಕ್ಕರೆಯಿಂದ ಗಂಡನನ್ನು ಬರಮಾಡಿಕೊಂಡರು. ಮಾತಿಲ್ಲದೇ ಕೈ ಹಿಡಿದು ತಿಮ್ಮಪ್ಪಯ್ಯನವರನ್ನು ಆರಾಮ ಕುರ್ಚಿಯಲ್ಲಿ ಕೂರಿಸಿ ಅಡಿಗೆ ಮನೆಗೆ ಹೋಗಿ ಒಂದು ಚಮಚ ಸಕ್ಕರೆ ತಂದು ಏಕ್‌ದಂ

ಗಂಡನ ಬಾಯಲ್ಲಿ ಹಾಕಿದರು. ಹೆಂಡತಿಯ ಈ ಅನಿರೀಕ್ಷಿತ ಸಂಗತಿ ಈ ಮೂವತ್ತು ವರ್ಷದಲ್ಲಿ ನಡೆದಿರಲಿಲ್ಲ. ಹೆಂಡತಿ ಮೊದಲ ಬಾರಿಗೆ ಗರ್ಭಿಣಿಯಾದಾಗಲೂ ಹೀಗೆ ಆಗಿರಲಿಲ್ಲ.

''ನಿಮ್ಮತ್ರ ಮಾತಾಡಿಯಾದ ಸ್ವಲ್ಪ ಹೊತ್ತಿಗೆ ಪ್ರಸಾದ ಫೋನ್ ಮಾಡಿದ. ಅಮ್ಮಾ ನನಗೆ ಪ್ರಸಾದ ಸಿಕ್ಕಿತು ಅಂದ. ಒಂದು ವಾರದ ಹಿಂದೆ ಅವನು ಸ್ನೇಹಿತರ ಮನೆಯಿಂದ ಹಿಂದಿರುಗುವಾಗ ಎದುರಿಗೆ ಬಂದವರೊಬ್ಬರು ನೀನು ತಿಮ್ಮಪ್ಪಯ್ಯನವರ ಮಗ ಪ್ರಸಾದು ಅಲ್ವೇ ಅಂತ ಕೇಳಿದರಂತೆ. ಇವನು ಹೌದು ಅಂತ ತನ್ನ ಕಥೆ ಹೇಳಿಕೊಂಡಿದ್ದಾನೆ. ಅವರು ಬಾ ನನ್ನ ಜೊತೆ ಅಂತ ಅವರ ಮನೆಗೆ ಕರೆದುಕೊಂಡು ಹೋಗಿ ದೊಡ್ಡ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಅವರ ಮಗನಿಗೆ ಹೇಳಿ ಆ ಕೂಡಲೇ ಕಂಪ್ಯೂಟರಿನಲ್ಲಿ ಅರ್ಜಿ ಹಾಕಿಸಿದರಂತೆ. ಎರಡು ದಿನದಲ್ಲಿ ಸಂದರ್ಶನಕ್ಕೆ ಕರೆ ಬಂತಂತೆ. ನೆನ್ನೆ ಕೆಲಸದ ಆರ್ಡರ್ ಬಂತಂತೆ. ಇದೇನು ಕನಸೋ ನನಸೋ ಅನ್ನುವ ಹಾಗೆ ನನಗೆ ಕೆಲಸ ಸಿಕ್ಕಿತು ಅಂದ. ಅಲ್ಲಾರೀ ಅವರ್ಯಾರು ಗೋವಿಂದಪ್ಪ ಅನ್ನೋರು ನಿಮಗೆ ಬಹಳ ಚೆನ್ನಾಗಿ ಗೊತ್ತಂತೆ. ನೀವು ಅವರಿಗೆ ಅನೇಕ ಸಾರಿ ಅವರ ಮರ್ಯಾದಿ ಕಾಪಾಡುವಷ್ಟು ಸಹಾಯ ಮಾಡಿದೀರಂತೆ. ನೀವು ಅವರ ಬಗೆಗೆ ಒಂದು ಸಾರಿನೂ ಹೇಳಿರಲಿಲ್ಲ'' ಅಂತ ಕೇಳಿದರು.

''ಅವರ ವಿಚಾರ ಹೇಳೋಕೆ ಹೋದರೆ ರಾತ್ರಿ ಕಳೆದು ಹಗಲಾಗುತ್ತೆ. ಯಾವಾಗಲೋ ಅವರು ನನ್ನಿಂದ ಸಹಾಯ ಪಡೆದಿದ್ದಾರೆ. ಅದನ್ನು ಪದೇ ಪದೇ ಹೇಳುತ್ತಲೇ ಇದ್ದರು. ನನಗೂ ಕೇಳಿ ಕೇಳಿ ಬೇಜಾರಾಗಿತ್ತು. ಅವರು ಬೇರೆ ಊರಿಗೆ ಹೋದ ಮೇಲೆ ನಾನು ನೆಮ್ಮದಿಯಾಗಿದ್ದೆ. ಯಾಕೆಂದರೆ ಅತಿಯಾದ ಹೊಗಳಿಕೆ ಅಂದರೆ ಅದು ವಿಷಕ್ಕೆ ಸಮಾನ. ಈಗ ಪ್ರಸಾದು ನೋಡಿ ಅವರಿಗೆ ಹಳೇದೆಲ್ಲ ನೆನಪಾಗಿದೆ'' ಅಂದರು.

ರಾತ್ರಿ ಊಟ ಮಾಡಿ ಮಲಗುವ ಮುನ್ನ ಹೆಂಡತಿಯ ಕಡೆ ನೋಡಿ ''ಇದೇ ಜೀವನದ ಸತ್ಯ, ಕೊಟ್ಟಿದ್ದು ತನಗೆ ಬಚ್ಚಿಟ್ಟದ್ದು ಪರರಿಗೆ ಅಂತಾರಲ್ಲ ಅದೇ ಇದು. ಕೊಟ್ಟುಬಿಡಬೇಕು, ಮರೆತುಬಿಡಬೇಕು. ನಾನು ಯಾರಿಗೋ ಯಾವತ್ತೋ ಮಾಡಿದ ಸಹಾಯ ಇವತ್ತು ಹೀಗೆ ನನ್ನನ್ನು ಬಿಟ್ಟು ನನ್ನ ಮಗನನ್ನು ಹುಡುಕಿಕೊಂಡು ಬಂದಿದೆ ಅಂದ್ರೆ. ಇದಕ್ಕೆ ಯಾರು ಲೆಕ್ಕ ಇಟ್ಟೋರು, ಯಾರು ಬಡ್ಡಿ ಲೆಕ್ಕ ಹಾಕಿರೋರು. ಇದನ್ನೇ ಅಲ್ಲವೇ ವಿಧಿ ಅನ್ನೋದು. ಅದಕ್ಕೇ ಹೇಳೋದು ನಾವು ಸದಾ ಒಳ್ಳೇದನ್ನೇ ಮಾಡುತ್ತಾ ಇದ್ದರೆ ಅದು ನಮ್ಮನ್ನು ಕಾಯುವುದರ ಜೊತೆಗೆ ನಮ್ಮ ಮುಂದಿನ ಪೀಳಿಗೆಯನ್ನೂ ಕಾಯುತ್ತದೆ ಅಂತ. ನಮ್ಮ ಒಳ್ಳೆಯ ದಿನಕ್ಕಾಗಿ ನಾವು ಕಾಯಬೇಕು ಅಷ್ಟೆ. ಈಗ ಸೂರ್ಯ ಬೆಳಗ್ಗೆ ಆರು ಗಂಟೆಗೆಲ್ಲಾ ಹುಟ್ಟುತ್ತಾನೆ. ಆದರೆ ಅವನ ಶಾಖದ ಅನುಭವ ನಮಗೆ ಆಗಬೇಕಾದರೆ ಕೆಲವು ನಿಮಿಷಗಳು ಬೇಕಾಗುತ್ತವಲ್ಲ ಹಾಗೆ. ಆದರೆ ಬೆಂಕಿ ಹಾಗಲ್ಲ ತಕ್ಷಣವೇ ಸುಡುತ್ತದೆ. ನಾವು ಎರಡು ಬಗೆಯ ಅನುಭವಕ್ಕೂ ಹೊಂದಿಕೊಂಡು ಹೆಜ್ಜೆ ಇಡಬೇಕು'' ತಿಮ್ಮಪ್ಪಯ್ಯನವರ ಮಾತು ಮುಗಿದಿರಲಿಲ್ಲ. ಹೆಂಡತಿ ನಿದ್ದೆಗೆ ಜಾರಿಯಾಗಿತ್ತು. ಮತ್ತೊಮ್ಮೆ ತಿಮ್ಮಪ್ಪಯ್ಯನವರಿಗೆ ನಗು ಬಂತು. ಇನ್ನು ಮೇಲಾದರೂ ಇಷ್ಟು ಉದ್ದುದ್ದ ಮಾತಾಡೋದನ್ನು ಕಡಿಮೆ ಮಾಡಬೇಕು ಅಂದುಕೊಂಡರು.

☆

## ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ನೀವು ಏನು ಕೆಲಸ ಮಾಡುತ್ತೀರಾ ಎಂಬುದಕ್ಕಿಂತ ಹೇಗೆ ಕೆಲಸ ಮಾಡುತ್ತೀರಾ ಎಂಬುದು ಮುಖ್ಯ .
- ಸರ್.ಎಂ.ವಿ. ಅವರು ಅಮೆರಿಕಾ ಅಮೆರಿಕಾ ಎಂದೋ ಅಥವಾ ಬ್ರಿಟಾನಿಕಾ ಬ್ರಿಟಾನಿಕಾ ಎಂದೋ ಹೇಳಿ ಕೆ.ಆರ್.ಎಸ್. ಡ್ಯಾಂಗೆ ಡ್ಯಾಮ್ ಇಟ್ ಎಂದು ಜೀನ್ಸ್ ಷರಾಯಿ ತೊಟ್ಟು ಹೂವರ್ ಡ್ಯಾಂ ಕಟ್ಟಲು ಹೊರಟುಬಿಟ್ಟಿದ್ದರೆ ಅಥವಾ ಟಾಟಾ ಕೂಡ ಭಾರತಕ್ಕೆ ಟಾಟಾ ಹೇಳಿದ್ದರೆ ಏನಾಗುತ್ತಿತ್ತು ಕಲ್ಪಿಸಿಕೊಳ್ಳಿ.
- ಹೆಣ್ಣು ಮಕ್ಕಳು ಇಂಜಿನ್‌ನಂತೆ, ಹಿಂದೆ ಹಲವಾರು ಬೋಗಿಗಳು ಇರುತ್ತವೆ.
- ಸಿ.ಎಂ. ಮನೆ ಮುಂದೆ ಟೋಪಿ ಮಾರೋ ಅಂಗಡಿ ತೆಗೆದರೆ ಹೇಗೆ?
- ಲಾಫ್ಟರ್ ಈಸ್ ಇನ್‌ಸ್ಟಂಟ್ ವೆಕೇಷನ್.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಅವನು ರಾಮನಾಗಿ ಹುಟ್ಟಬೇಕಿತ್ತು. ಆದರೆ ತಡವಾದ್ದರಿಂದ ಶತ್ರುಘ್ನನಾಗಿ ಹುಟ್ಟಿದ.
- ಮುಂದಿನ ಕ್ಷಣದಲ್ಲಿ ಎದುರಾಗಲಿರುವ ಆಶ್ಚರ್ಯಕ್ಕೆ ನನ್ನನ್ನು ಸಿದ್ಧಪಡಿಸು ಎಂದು ನಾವು ದೇವರನ್ನು ಕೇಳುವುದಿಲ್ಲ.
- ಮೊಬೈಲ್‌ಗಳಿಂದ ಜನಗಳು ಇಮ್ಮೊಬೈಲ್ ಆಗಿದ್ದಾರೆ.
- ಮನಿ ಹ್ಯಾಸ್ ಎ ಲೊ ಬಾಯ್ಲಿಂಗ್ ಪಾಯಿಂಟ್. ಇಟ್ ಎವಾಪೊರೇಟ್ಸ್ ಕ್ವಿಕ್ಲಿ.
- ದಣಿವಾಗುವುದು ಕೆಲಸದಿಂದ ಅಲ್ಲ. ಫಲಗಳನ್ನು ನಿರೀಕ್ಷಿಸುವುದರಿಂದ.
- ದೆ ಆರ್ ಹ್ಯಾಪಿಲಿ ಮ್ಯಾರೀಡ್ - ಬಟ್ ನಾಟ್ ಟು ಈಚ್ ಅದರ್.
- ನಿಜವಾದ ಬದುಕು ಇರುವುದು ಸುಖದ ಕ್ಷಣಗಳಾಚೆ.
- ಬಾಹ್ಯಾಕಾಶಕ್ಕೆ ಹೋಗಿ ಬಂದ ಇರುವೆಯನ್ನು ಆಸ್ಟ್ರೋನ್ಯಾಂಟ್ ಅಥವಾ ಕಾಸ್ಮೋನ್ಯಾಂಟ್ ಎಂದು ಕರೆಯಬಹುದೆ?
- ಫಲಭರಿತ ಮರ ಮಾತ್ರ ನೆಲಕ್ಕೆ ಬಗ್ಗುತ್ತದೆ.
- ಸೋಲೇ ಅನುಭವಿಸದವನು ಗೆಲ್ಲುವ ಸುಖವನ್ನು ಸವಿಯಲು ಸಾಧ್ಯವಿಲ್ಲ.

☆

# ಮೂವರು ಶ್ರೀ ಸಾಮಾನ್ಯರು

**- ಪ್ರೊ. ಕೆ.ಎಲ್. ರಾಮದಾಸ್**

**ಮೌ**ಲ್ಯಗಳು ಕೇವಲ ನಗರ ಅಥವಾ ಮೆಟ್ರೋ ನಿವಾಸಿಗಳ ಸ್ವತ್ತಾಗಿರದೆ, ನಮ್ಮ ಗ್ರಾಮಾಂತರ ಹಾಗೂ ಹಳ್ಳಿಗಳಲ್ಲಿ ಹೆಚ್ಚು ಬಲವಾಗಿ ಬೇರೂರಿವೆ. ಇದಕ್ಕೆ ನಿದರ್ಶನವೆಂಬಂತೆ, ನನ್ನ 2007ರಲ್ಲಿ ತಮಿಳುನಾಡಿನ ಮಧುರೈ ಪ್ರವಾಸದಲ್ಲಿ ನನಗೆ ನಮ್ಮ ಮೌಲ್ಯ ವ್ಯವಸ್ಥೆಯಲ್ಲಿನ ನಂಬಿಕೆ ಹೆಚ್ಚಿಸುವ ಅನುಭವವಾಯಿತು.

ನನ್ನ ಪ್ರವಾಸದ ಮೊದಲ ಸುತ್ತಿನಲ್ಲಿ ಮಧುರೈನಲ್ಲಿ ಉಳಿಯಬೇಕಾದ ಸಂದರ್ಭ ಬಂದಾಗ, ಹಾಗೆಯೇ ಮಧುರೈ ಮೀನಾಕ್ಷಿ ದೇವಸ್ಥಾನಕ್ಕೆ ನಡೆದುಕೊಂಡೇ ಹೋಗೋಣ ಎಂದುಕೊಂಡು ದೇವಳದ ಸಮೀಪಕ್ಕೆ ಬರುತ್ತಿರುವಾಗ ಒಬ್ಬ ರಿಕ್ಷಾಕಾರ ನಮ್ಮ ಬಳಿ ಬಂದು 'ದೇವಳದ ಪಶ್ಚಿಮ ಭಾಗಕ್ಕೆ ಕರೆದೊಯ್ಯುತ್ತೇನೆ. ಕೇವಲ ಮೂರು ರೂಪಾಯಿ ಕೊಡಿ' ಎಂದು ಕೇಳಿಕೊಂಡಾಗ ಮಾನವೀಯ ಮೌಲ್ಯಗಳನ್ನು ಬಲವಾಗಿ ಪ್ರತಿಪಾದಿಸುತ್ತಿದ್ದ ನನ್ನ ಗೆಳೆಯ ಜನಾರ್ದನ್ ವಿನಯವಾಗಿಯೇ ತಿರಸ್ಕರಿಸಿದ. ಆತನ ದೃಷ್ಟಿಯಲ್ಲಿ ಒಬ್ಬ ಮನುಷ್ಯ ರಿಕ್ಷಾ ತುಳಿಯುತ್ತಾ ನಮ್ಮನ್ನು ಕರೆದುಕೊಂಡು ಹೋಗುವುದು ಅಮಾನವೀಯವಾಗಿತ್ತು. ಜನಾರ್ದನ್ ಆ ರಿಕ್ಷಾಕಾರನಿಗೆ ಹಾಗೆಯೇ ಮೂರು ರೂಪಾಯಿ ಕೊಡಲು ಮುಂದಾದ. ಆದರೆ ರಿಕ್ಷಾಕಾರ ಹಣವನ್ನು ಹಾಗೆಯೇ ಪಡೆಯಲು ಒಪ್ಪಲಿಲ್ಲ. 'ಸರಿ' ಎಂದು ನನ್ನ ಗೆಳೆಯ ರಿಕ್ಷಾದಲ್ಲಿ ಹೋಗಲು ಒಪ್ಪಿದ. ಆ ರಿಕ್ಷಾಕಾರ ನಮ್ಮನ್ನು ಗುಡಿಯ ಪಶ್ಚಿಮ ಭಾಗಮಾತ್ರವಲ್ಲದೇ, ಕೇವಲ ಭಾನುವಾರದ ದಿನ ಮಾತ್ರ ರಿಯಾಯಿತಿ ನೀಡುವ, ಅಲ್ಲಿಯ ಅತ್ಯುತ್ತಮ ಸೀರೆ ಅಂಗಡಿಗೆ ಸಹ ಕರೆದುಕೊಂಡು ಹೋದ. ಕೊನೆಗೂ ನನ್ನ ಗೆಳೆಯ ಅವನಿಗೆ ಐದು ರೂಪಾಯಿ ಕೊಡುವುದರಲ್ಲಿ ಯಶಸ್ವಿಯಾದ. ಕೆಲಸವನ್ನು ಮಾಡದೆ ಮೂರು ರೂಪಾಯಿಗಳನ್ನೂ ಸಹ ತೆಗೆದುಕೊಳ್ಳಲು ನಿರಾಕರಿಸಿದ ಈ ರಿಕ್ಷಾಕಾರ ನಮಗೆ ಸಂತಸ ಹಾಗೂ ಅಚ್ಚರಿ ಮೂಡಿಸಿದ.

ಎರಡನೆಯ ಅನುಭವ ಇದಕ್ಕಿಂತಲೂ ವಿಚಿತ್ರವಾಗಿದ್ದು ನಮಗೆ ಸಂತಸ ಹಾಗೂ ಅಚ್ಚರಿ ಮೂಡಿಸಿತು. ಮಧುರೈ ದೇವಳದ ವೀಕ್ಷಣೆ ಮತ್ತು ಊಟದ ನಂತರ ಒಂದು ಆಟೋದಲ್ಲಿ, ಕಾರೈಕ್ಕುಡಿಗೆ ಪಯಣಿಸಲು ಬಸ್ ನಿಲ್ದಾಣಕ್ಕೆ ಹೊರಟೆವು. ಬಸ್ ಸ್ಟ್ಯಾಂಡ್ ತಲುಪಿದ ನಂತರ ಬಸ್ ಹತ್ತುವ ಭರದಲ್ಲಿ ನನ್ನ ಎರಡು ಕೈಚೀಲಗಳನ್ನು ತೆಗೆದುಕೊಂಡು ಧಾವಿಸಿದೆ. ಮೂರನೆಯ ಬ್ಯಾಗ್ ಅನ್ನು ಆಟೋದಲ್ಲಿಯೇ ಮರೆತು ಬಿಟ್ಟಿದ್ದೆ. 3-4 ನಿಮಿಷದ ನಂತರ ಥಟ್ಟನೆ ನೆನಪಿಗೆ ಬಂದು ಸಮಯವನ್ನು ವ್ಯಯ ಮಾಡದೆ ಇನ್ನೊಂದು ಆಟೋ ತೆಗೆದುಕೊಂಡು ನಾವು ಹತ್ತಿದ ಜಾಗದ ಕಡೆಗೆ ಧಾವಿಸಿದೆವು. ನಾವು ಆಟೋ ಸ್ಟಾಂಡ್ ತಲುಪುತ್ತಿದ್ದಂತೆಯೇ ನಮ್ಮ ಮೊದಲ ಆಟೋವಾಲ ಸಹ ಅಲ್ಲಿಗೆ ಬರುತ್ತಿದ್ದ. ಆತ ನಮ್ಮನ್ನು ಬಸ್ ಸ್ಟಾಂಡ್‌ನಲ್ಲಿ ಬಿಟ್ಟಿದ್ದ ಲಗ್ಗೇಜ್ ಬಗ್ಗೆ ಆತನಿಗೂ ಸಹ ಅರಿವಾಗಿತ್ತು. ನಮ್ಮನ್ನು ಕಂಡಕೂಡಲೇ ಬಿಡದೆ ಕ್ಷಮೆಯಾಚಿಸುತ್ತಿದ್ದ ಆತನನ್ನು, ಆತನ ತಪ್ಪೇನು ಇಲ್ಲವೆಂದು ಸಮಾಧಾನಮಾಡುವ ಕೆಲಸ ನಮ್ಮದಾಗಿತ್ತು. ಕೇವಲ ನಮ್ಮ ಥ್ಯಾಂಕ್ಸ್ ಮಾತ್ರವನ್ನು

ಸ್ವೀಕರಿಸಿದ ಆತ ಇನ್ನೇನು ತೆಗೆದುಕೊಳ್ಳಲು ಸಿದ್ದನಿರಲಿಲ್ಲ. ನನಗೆ ಆ ಸಮಯದಲ್ಲಿ ನನ್ನ ಬ್ಯಾಗ್ ಸಿಕ್ಕಿದ್ದಕ್ಕಿಂತಲೂ ನಮ್ಮ ಜನರ ಜೀವನ ಮೌಲ್ಯಗಳ ಬಗ್ಗೆ ಮತ್ತೊಂದು ಬಾರಿ ಆಶ್ಚರ್ಯ ಮೂಡಿಸಿತ್ತು.

ಈ ರೀತಿಯ ಮತ್ತೊಬ್ಬ ಶ್ರೀ ಸಾಮಾನ್ಯ ನಮಗೆ ಕಂಡಿದ್ದು ಮರುದಿನ ದಿಂಡಿಗಲ್ ರೈಲ್ವೆ ಸ್ಟೇಷನ್‌ನಲ್ಲಿ. ನಾನು ಬೆಂಗಳೂರಿಗೆ ಮಾತನಾಡಲು ಅಲ್ಲಿನ ಎಸ್.ಟಿ.ಡಿ. ಕೌಂಟರ್‌ಗೆ ಹೋಗಿ ಫೋನಾಯಿಸಿದೆ. ಬಿಲ್ಲು 16.50 ರೂಪಾಯಿಯಷ್ಟು ಆಗಿತ್ತು. ನಾನು ಆತನಿಗೆ 20 ರೂ.ಗಳ ನೋಟ್ ನೀಡಿದೆ. ಆತ 50 ಪೈಸೆ ಚಿಲ್ಲರೆ ಕೇಳಿದ. ಬೆಂಗಳೂರಿನಲ್ಲಿ ಮಾಡುವಂತೆ, ನಾನು ಆತನಿಗೆ ಚೇಂಜ್ ಇಟ್ಟುಕೊಳ್ಳಲು ಹೇಳಿ ಹೊರಡಲು ಮುಂದಾದಾಗ, ಆತ ಪ್ರಾಮಾಣಿಕವಾಗಿ 3.50 ರೂಪಾಯಿ ನನಗೆ ನೀಡಿ ಥ್ಯಾಂಕ್ಸ್ ಹೇಳಿದ. 'ಕಸ್ಟಮರ್ ಈಸ್ ಕಿಂಗ್' ಅಂತ ನಾವು ಯಾವಾಗಲೂ ಹೇಳುವ ಮಾತಿನಲ್ಲಿ ನಿಜವಾದ ನಂಬಿಕೆಯಿಟ್ಟಿದ್ದ ಈತ.

ಈ ಮೂವರು ಶ್ರೀ ಸಾಮಾನ್ಯರು ನನ್ನ ಮನಸ್ಸಿನ ಮೇಲೆ ನಮ್ಮ ನಾಡಿನ ಸಂಸ್ಕೃತಿಯ ಬಗ್ಗೆ ಅಚ್ಚಳಿಯದ ಛಾಪನ್ನು ಮೂಡಿಸಿದ್ದರು. 'ಮೇರಾ ಭಾರತ್ ಮಹಾನ್' ಎನ್ನುವ ಮಾತು ಮನಸ್ಸಿನಲ್ಲಿ ಹೆಮ್ಮೆಯಿಂದ ಪ್ರತಿಧ್ವನಿಸಿತು.

☆

---

## ಏಟು ಎದಿರೇಟು

ಗಂಡ ಹೆಂಡತಿ ಕೋಪ ಮಾಡಿಕೊಂಡಿದ್ದರು. ಕಾರಿನಲ್ಲಿ ಹೋಗುತ್ತಿದ್ದರು ಮಾತಿಲ್ಲ ಕತೆಯಿಲ್ಲ. ಅವನು ಶುರು ಮಾಡಲಿ ಎಂದು ಇವಳೂ ಅವಳೇ ಮಾಡಲಿ ಎಂದು ಇವನ ಹಠ. ಮಾರ್ಗ ಮಧ್ಯದಲ್ಲಿ ಕತ್ತೆಗಳ ಹಿಂಡು ಕಂಡಿತು. ಅದರತ್ತ ನೋಡುತ್ತಾ ಗಂಡ ವ್ಯಂಗ್ಯವಾಗಿ 'ನಿಮ್ಮ ಬಂಧುಗಳು' ಎಂದ. ಆಗವಳು 'ಹೌದು ನನ್ನ ಇನ್‌ಲಾಸ್' ಎಂದಳು.

***

'ನೀನು ಎಷ್ಟು ಸುಂದರಿಯೋ ಅಷ್ಟೇ ಪೆದ್ದು ಸಹ' ಎಂದ ಗಂಡ.

'ದೇವರು ನನ್ನನ್ನು ಸುಂದರಿಯಾಗಿಸಿದ ನಾನು ನಿಮಗೆ ಆಕರ್ಷಕವಾಗಿ ಕಾಣಲು. ನಿಮಗೆ ಮರುಳಾಗುವಂತೆ ಮಾಡಲು ನನ್ನನ್ನು ಪೆದ್ದಿಯಾಗಿಸಿದ' ಎಂದಳು ಹೆಂಡತಿ.

# ಪರಮೇಶಿಯ ಕಂತೆ... ಕಂತೆ... ಕಥೆ

- ವೈ.ಎನ್. ಗುಂಡೂರಾವ್

**ಪ**ರಮೇಶಿಯನ್ನು ನೋಡಿ ಬಹಳ ದಿವಸಗಳಾಗಿ ಬಿಟ್ಟಿದೆ, ನೋಡಿಕೊಂಡು ಬರುವ ಎಂದು ಹೊರಟೆ. ಅವನೇ ಬಂದ ಉಭಯಕುಶಲೋಪರಿ ನಡೆಯಿತು.

''ಹೋದ ಸಾರಿ ಬಂದಾಗ ನಮ್ಮ ಸೋದರ ಮಾವನ ಮಗನ ವಿಷಯ ಹೇಳಿದ್ದೆ ಅಲ್ವಾ'' ಎಂದ.

''ಹೌದು ಹೇಳಿದ್ದೆ. ಏನಾಯ್ತು ಆ ವಿಷಯ, ಎಲ್ಲಿಗೆ ಬಂತು?'' ಎಂದು ಕೇಳಿದೆ.

''ಬರೋದೆಲ್ಲಿಗೆ, ತಂದೆಗೆ ಪುಸಲಾಯಿಸಿ ಅವರಿರೋವಾಗ್ಲೆ ಮಹಡಿಯ ಮೇಲೆ ಮನೆ ಕಟ್ಟಿಸ್ತೀನಿ ಸಾಲ ತಗೋಬೇಕು ಅಂತ ಹೇಳಿ ತನ್ನ ಹೆಸರಿಗೆ ಮಾಡಿಸ್ಕೊಂಡ. ಮೂರು ಭಾಗ ಮಾಡಿ ಮನೇನೂ ಕಟ್ಟಿಸ್ದ.''

ನಮ್ಮ ಮಾವಂಗಿದ್ದುದ್ದು ಎರಡು ಗಂಡು, ಒಂದು ಹೆಣ್ಣು. ಮೂರು ಜನಕ್ಕೂ ಮಾಡ್ತಾಯಿದ್ದಾನೆ ಅಂತ ನಂಬ್ಕೊಂಡ್ರು. ಆದ್ರೆ ಮನೆ ಪೂರ್ತಿಯಾಗೋದ್ರೊಳ್ಗೆ ಮಗನೇ ತೀರ್‍ಕೋಬೇಕಾ! ಪಾಪ, ಇದೇ ದುಃಖದಲ್ಲಿ ತಂದೇನೂ ತೀರ್‍ಕೊಂಡ್ರು. ದೊಡ್ಡ ಸೊಸೆ ಎರಡು ಮನೇನ ಬಾಡಿಗೆಗೆ ಕೊಟ್ಕೊಂಡು ಬಿಲ್ಡಿಂಗ್ ಪೂರ್ತಿ ನಂದೇ ಅಂತಿದ್ದಾಳಂತೆ. ಪಾಪ, ಎರಡನೆಯ ಮಗ ಹೆಂಡತಿಯ ಜೊತೆ ಬಾಡಿಗೆ ಮನೇಲಿದ್ದಾನೆ. ಮಗಳ ಪಾಡು ಬಿಡು, ಮದುವೆಯಾಗಿ ಗಂಡನ ಮನೇಲಿ ಸುಖವಾಗಿದ್ದಾಳೆ. ಈಗ ನೋಡು 'ಯಾರಿಗೂ ಆಸ್ತಿ ಮೇಲೆ ಹಕ್ಕಿಲ್ಲ ಎಲ್ಲ ನಂದೇ ಅಂತಿದ್ದಾಳಂತೆ ದೊಡ್ಡ ಸೊಸೆ.'

ಹೇಗೆ ಪರಿಹಾರ ಹುಡುಕೋದು ಹೇಳು ಎಂದ ಪರಮೇಶಿ.

ಇದು ಬಿಡು ಹೇಗೋ ಸರಿಮಾಡಬಹುದು ಅನ್ನೋದ್ರೊಳ್ಗೆ ನಮ್ಮ ಚಿಕ್ಕಮ್ಮನ ಮಗಳ್ದು ರಾಮಾಯಣ ಶುರು ವಾಗ್ಬೇಕಾ? ಆಗಾಗ್ಗೆ ಟ್ರೈನಿಂಗ್‌ಗೆ ಎಂದು ಚೆನ್ನೈ, ಮುಂಬೈ ಎಂದು ಸುತ್ತುತ್ತಿದ್ದಳು. ಹೀಗೊಮ್ಮೆ ಟ್ರೈನಿಂಗ್‌ಗೆ ಎಂದು ಚೆನ್ನೈಗೆ ಹೋದಾಗ ಆಫೀಸಿನಲ್ಲೊಬ್ಬ ಪರಿಚಯವಾದ ಕೆಲವು ತಿಂಗಳ ನಂತರ ಪರಿಚಯ ಪ್ರಣಯಕ್ಕೆ ತಿರುಗಿತು. ಪ್ರಣಯದಿಂದ ಮದುವೆಗೆ ಬಂದು ನಿಂತಿದೆ ಎಂದ ಪರಮೇಶಿ.

''ಹೋಗ್ಲಿ ಬಿಡು ಪರಮೇಶಿ ಇದು ಎಷ್ಟೋ ವಾಸಿ, ಪ್ರಣಯದಾಟವಾಡಿ ಬಿಟ್ಹೋಗಿದ್ರೆ ಏನ್‌ಗತಿ?'' ಸದ್ಯ ಹಾಗಾಗಲಿಲ್ಲ. ಆದ್ರೆ ಇಲ್ಲೇ ಬಂದಿರೋ ಪ್ರಾಬ್ಲಮ್. ಆದ್ರೆ ಮಗಳು ಮದುವೆ ಮಾಡ್ಕೊಂಡು ''ಚೆನ್ನೈಗೆ ಹೊರಟ್ಹೋದ್ರೆ ನನ್ನನ್ಯಾರು ನೋಡ್ಕೋತಾರೆ, ನನ್ನ ಗಂಡ ಕಟ್ಟಿಸಿರೋ ಮನೆ ಬಿಟ್ಟು ನಾನ್ಯಾಕೆ ಚೆನ್ನೈಗೆ ಹೋಗ್ಲಿ'' ಇದು ನಮ್ಮ ಚಿಕ್ಕಮ್ಮನ ವಾದ. ಇವರಿಬ್ಬರ ಸಮಸ್ಯೆಗೆ ಪರಿಹಾರ ಹುಡುಕೋದು ಇದೆಯಲ್ಲಾ!

ಹೋಗ್ಲಿ ಆ ಹುಡುಗಬೇಡ ಬಿಟ್ಹಾಕು. ಬೇರೆ ಹುಡುಕ್ತೀನಿ ಅಂತ ತಾಯಿ ಹೇಳಿದ್ರೆ ಮಗಳು ಮತ್ತೊಂದು ಸಮಸ್ಯೇಲಿ ಸಿಕ್ಕೊಂಡಿದ್ದಾಳೆ. ''ಹುಡುಗ ತನ್ನ ತಂಗಿ ಮದುವೆ

ಮಾಡಿದ ನಂತರ ನಮ್ಮ ಮದುವೆ ಅಂತ ಮದುವೆ ಖರ್ಚಿಗೆಂದು ಇವಳ ಹತ್ತಿರಾನೇ ಹತ್ತು ಲಕ್ಷ ಈಸ್ಕೊಂಡಿದ್ದಾನಂತೆ.''

''ಅಯ್ಯೋ ರಾಮ ಇವಳ್ಯಾಕೆ ಕೊಡೋಕೋದ್ಲು?''

''ಯಾಕೆ ಕೊಡೋಕ್ಹೋದ್ಲು ಅಂದ್ರೆ ಪ್ರೀತಿ... ಪ್ರೀತಿನಪ್ಪ. ಈಗ ನೋಡು ಆ ಹುಡುಗನ್ನ ಬಿಟ್ರೆ ಹತ್ತು ಲಕ್ಷ ಕೈಬಿಡುತ್ತೆ. ಕಟ್ಕೊಂಡ್ರೆ ತಾಯಿಗೆ ನಿಷ್ಠೂರ. ಹೇಗೆ ಪರಿಹರಿಸೋದು ಹೇಳು.''

''ಮಾಜಿ ಪ್ರಧಾನಿ ನರಸಿಂಹರಾವ್ ತರಹ ಸಮಸ್ಯೆ ಬಂದಾಗ ಸುಮ್ಮನಿದ್ದು ಬಿಡೋದಂತೆ, ಹಾಗೆ ಸುಮ್ಮನಿದ್ದು ಬಿಡೋದೆ ಸದ್ಯಕ್ಕೆ ನನಗೆ ಕಾಣ್ತಾಯಿರೋ ಪರಿಹಾರ'' ಎಂದೆ.

ಇದು ಹೋಗ್ಲಿ ಅಂದ್ರೆ, ಬೂದನ ಕೆರೆ ಅನ್ನೋ ಹಳ್ಳೀಲಿದ್ದ ನಮ್ಮ ದೊಡ್ಡಪ್ಪ ಗೊತ್ತಲ್ಲ ಅವರದ್ದೊಂದು ಮಹಾಭಾರತ. ಅವರಿಗೊಂದ್ ಸಾರಿ ಹಾರ್ಟ್ ಅಟ್ಯಾಕ್ ಆಗಿತ್ತು. ಸರಿ, ಇದ್ದ ಒಬ್ಬ ಮಗನಿಗೆ ಮುಂದೆ ತೊಂದ್ರೆ ಆಗ್ಬಾರ್ದು ಅಂತ ಆಸ್ತಿನೆಲ್ಲ ಅವನ ಹೆಸರ್ಗೆ ಮಾಡಿಬಿಟ್ರು. ಮಗ ಗೇಟೆಡ್ ಕಮ್ಯುನಿಟೀಲಿ ದೊಡ್ಡ ಬಂಗ್ಲೆ ತಗೊಂಡಿದ್ದ. ನಾಲ್ಕಾರು ದಿವಸ ಇವನ ಜೋತೇಲೆ ಬಂದಿದ್ರು. ಹೇಗೂ ನಮ್ ಜೊತೇಲೆ ಇರ್ತಾರೆ ಅಂತ ಮಗ ಹಳ್ಳೀಲಿದ್ದ ಮನೆ, ತೋಟ ಎಲ್ಲವನ್ನು ಮಾರ್ಬಿಟ್ಟಿದ್ದ. ಆದರೆ ತಂದೆಗೆ ಅದೇನನ್ನಿಸಿತೋ ಏನೋ. ನಾ ಹುಟ್ಟಿದ ಹಳ್ಳೀನೆ ಸರಿ ಅಂತಾ ತಮ್ಮ ಮನೇನ ಕೊಂಡುಕೊಂಡಿದ್ದವನನ್ನ ಒಪ್ಪಿಸಿ ತಮ್ಮ ಮನೆಗೆ ತಾವೇ ಬಾಡಿಗೇದಾರರಾಗಿ ಹಳ್ಳೀಲಿ ಹೋಗಿ ನಿಂತಿದ್ದಾರೆ.

ನಿಮಗೂ ವಯಸಾಯ್ತು. ಹೃದಯದ ತೊಂದರೆಯಿದೆ. ಪಟ್ಟಣದಲ್ಲಿದ್ರೆ ಏನು ತೊಂದರೆಯಾದ್ರೂ ಬೇಗ ನೋಡ್ಕೋಬೋದು ಅಂದ್ರೆ ಕೇಳ್ತಾಯಿಲ್ಲ. ಈಗ ಮಗ ಒಂದು ಕಡೆ, ತಂದೆ ತಾಯಿ ಒಂದು ಕಡೆ, ಮಗಂಗೆ ಮದ್ವೆ ಬೇರೆ ಆಗಿಲ್ಲ. ಹೇಗಿದೆ ನೋಡು ಅವರ ಜೀವನ?

''ಸರ್ಜಾಪುರದಲ್ಲಿದ್ದ ನಮ್ಮಕ್ಕ ಗೊತ್ತಲ್ಲ ನಿಂಗೆ'' ಅಯ್ಯೋ ಗೊತ್ತು ಮಾರಾಯ, ನನ್ನ ಮಗನ ಮದುವೆಗೆ ಅವರ ಮಗಳನ್ನ ಕರ್ಕೊಂಡು ಬಂದಿದ್ರಲ್ಲ.

''ಹ್ಞಾಂ! ಆ ಹುಡುಗೀದೆ ಈಗ ಶುರುವಾಗಿರೋ ಕಥೆ''

''ಏನ್ಮಾಡ್ಕೊಂಡ್ಲು?''

ಪಾಪದ ಹುಡ್ಗಿ ಅದೇನು ಮಾಡ್ಕೊಂಡಿಲ್ಲ ಸಧ್ಯ. ಈಗ ಮಗಳಿಗೆ ಕೆಲ್ಸ ಆದ್ಮೇಲೆ ಮನೆ ಬಾಡಿಗೆಗೆ ಕೊಟ್ಟು ಸಿಟಿಗೆ ಬಂದ್‌ಬಿಟ್ಟಿದ್ದಾರೆ.

''ಮತ್ತಿನ್ನೇನು ಪ್ರಾಬ್ಲಮು?''

ಸರ್ಜಾಪುರದಲ್ಲಿ ಇವರಿದ್ದ ಬೀದೀಲೆ ರಂಗಸ್ವಾಮಿಗಳು ಅಂತ ಒಬ್ರಿದ್ರು. ಘನಕುಳ ಆಸ್ತಿ, ಹಣ, ಒಡವೆ ಬೇಕಾದಷ್ಟು ಮಾಡಿಟ್ಟಿದ್ದಾರೆ, ಒಬ್ಬನೇ ಮಗ!

''ತಿಳಿದೋರು ತಾನೇ... ಮಾಡ್ಕೊಂಡು ಬಿಡೋದೇ...!''

ಅಲ್ಲೇ ಬಂದಿರೋ ಸಮಸ್ಯೆ. ಹುಡುಗನಿಗೆ ತಲೆ ಮಟ್ಟಸವಿಲ್ಲ. ಹೇಗೂ ತಿಳಿದವರ ಮನೆ ಹುಡುಗಿ, ಸಂಬಂಧ ಕುದುರಿಸಿ ಬಿಡೋಣ ಅನ್ನೋದು ರಂಗಸ್ವಾಮಿಗಳ ಆಸೆ, ಆದ್ರೆ ಈಗಿನ ಕಾಲದ ಹುಡುಗಿ ಒಪ್ತಾಳಾ? ಒಪ್ಕೊ ಅನ್ನೋದು ನಮ್ಮ ಭಾವನ ವರಾತ.

''ಅಕ್ಕ ಬಿಲ್‌ಕುಲ್ ಕೊಡೋಲ್ಲ ಅಂದ್ರೆ, ಭಾವ ಕೊಡದಿದ್ರೆ ನೇಣಾಕ್ಕೋತೀನಿ ಅಂತ ಹೆದರಿಸ್ತಾರಂತೆ.''

''ಅಲ್ಲಾ ನಿಮ್ ಭಾವಂಗಾದ್ರೂ ಬುದ್ದಿ ಬೇಡ್ವಾ. ಅಷ್ಟು ಚೆನ್ನಾಗಿರೋ ಹುಡ್ಗೀನಾ ತಗೊಂಡ್ಹೋಗಿ ತಲೆಮಟ್ಟಸವಿಲ್ಲದವನಿಗಾ ಕಟ್ಟೋದು? ಅವರ್‍ಯಾಕೆ ತಿಳ್ದೂತಿಳ್ದೂ ಬಲವಂತ ಮಾಡ್ತಿದ್ದಾರೆ'' ಎಂದೆ.

''ನೋಡು ಅಲ್ಲೇ ಇರೋದು ಸ್ವಾರಸ್ಯ.''

ರಂಗಸ್ವಾಮಿಗಳು ಭಾವನ ಹೆಸರಿಗೆ ಮೂರು ಎಕರೆ ತೋಟಾನ ರಿಜಿಸ್ಟ್ರ ಮಾಡಿಕೊಟ್ಟಿದ್ದಾರಂತೆ. ಇದು ಅಕ್ಕನ ಸಂಶಯ. ಹಳ್ಳಿಯವರೂ ಹಾಗೇ ಮಾತಾಡ್ಕೋತಾ ಇದ್ದಾರಂತೆ. ರಂಗಸ್ವಾಮಿಗಳದ್ದು ಎಂಥ ಪ್ಲಾನ್ ನೋಡು. ತೋಟದ ಆಸೆ ತೋರ್‍ಸಿ ಸೊಸೆ ಮಾಡ್ಕೊಳ್ಳೋಕೆ ಹೊರಟಿದ್ದಾರೆ. ಮಗಳಿಗೂ, ಅಮ್ಮನಿಗೂ ಒಂಚೂರು ಇಷ್ಟವಿಲ್ಲ. ಅಮ್ಮ ಮಗಳು ಒಂದ್ಕಡೆ, ತಂದೆ ಒಂದ್ಕಡೆ, ದಿನಾಜಗಳ ತೋಟದ ಆಸೆಗೆ ಮಗಳ ಸುಖಾನ ಬಲಿ ಕೊಡೋಕೆ ಹೊರಟಿದ್ದಾರೆ ನಂಭಾವ.

''ಪರಿಹಾರ ಹುಡ್ಕೋದಾದ್ರೂ, ಹ್ಯಾಗೆ ಹೇಳು?''

ನಮ್ಮ ಚಿಕ್ಕತ್ತೆ ಗೊತ್ತಲ್ಲ. ಅದೇ ಬೆನ್ನಿಗಾನ ಹಳ್ಳಿಲಿದ್ರಲ್ಲ ಅವರ್‌ತಾನೆ? ಹ್ಞಾಂ, ಅವರೇ ಅವರಕತೆ ನೋಡು ಹೇಗಿದೆ? ಅವರಿಗೆ ಇಬ್ಬರು ಗಂಡು ಮಕ್ಳು, ಇಬ್ಬರಿಗೂ ಮದುವೆ ಮಾಡಿದ್ರು ಎಲ್ಲರೂ ಚೆನ್ನಾಗೇ ಇದ್ರು. ಅದೇನು ಬಂತೊ ದೊಡ್ಡವನ ಹೆಂಡ್ತಿಗೆ, ಚೆನ್ನಾಗಿದ್ದ ಸಂಸಾರನ ಒಡೆದಳು. ಚಿಕ್ಕಮಗ ಪಾಪ, ನೊಂದ್ಕೊಂಡು ಬೇರೆ ಊರಿಗೆ ಟ್ರಾನ್ಸಫರ್ ಮಾಡಿಸ್ಕೊಂಡು ಹೊರಟೇ ಹೋದ. ಅಷ್ಟರಲ್ಲಿ ಕಾರ್ ಆಕ್ಸಿಡೆಂಟ್‌ನಲ್ಲಿ ದೊಡ್ಡಮಗ ತೀರ್‍ಕೊಂಡ. ತೀರ್‍ಕೊಂಡನಂತ್ರ ಸೊಸೆ ಒಂದಾರು ತಿಂಗ್ಳು ಅತ್ತೆ ಜೊತೆ ಚೆನ್ನಾಗೇ ಇದ್ಲು. ನಂತರ ಒಂದ್ ದಿನ ಇದ್ದಬದ್ದ ಬೆಳ್ಳಿ ಬಂಗಾರನೆಲ್ಲ ಗಂಟುಮೂಟೆ ಕಟ್ಕೊಂಡು ಅಪ್ಪನ ಮನೆಗೆ ನಡೆದೇ ಬಿಡೋದಾ? ಈಗ ತಾಯೀನ ನೋಡೋರೆ ಇಲ್ಲ.

''ಎರಡನೇ ಮಗನ ಮನೆಗೆ ಹೋಗಿ ಇದ್ದು ಬಿಡೋದು.''

ಅದು ಅಷ್ಟು ಸುಲಭವಲ್ಲ. ಇಬ್ಬರು ಸೊಸೆಯರು ಒಟ್ಟಿಗೆ ಇದ್ದಾಗ ಅತ್ತೆ ದೊಡ್ಡ ಸೊಸೆ ಪರವಾಗಿದ್ದಾರೆ ಅಂತ ಮೊದಲಿಂದ್ಲೂ ಕಿರಿಸೊಸೆ ತಕರಾರು ಇದ್ದೇ ಇತ್ತು. ದೊಡ್ಡ ಸೊಸೆ ತಾನೆ ಬೇಕಾಗಿದ್ದವಳು ಈಗ ನಾನ್ಯಾಕೆ ಇಟ್‌ಕೊಳ್ಳಲಿ ಅಂತಾಳೆ. ಎರಡನೆಯ ಮಗನ ಜೀವನ ಅಡಕತ್ತರಿ ಈಗ. ಅದೂ ಅಲ್ದೆ ಬಳ್ಳಾರಿಲಿ ಇರೋದು. ಬೇಸಿಗೆ ಬಂದ್ರೆ ಬಾಣಲೀಲಿ ಹಾಕ್ದಂಗಿರುತ್ತೆ, ನಾ ಹೋಗೋಲ್ಲ ಅಂತಾರೆ ನಮ್ ಚಿಕ್ಕತ್ತೆ. ಈಗ ಹೇಗೆ ಪರಿಹಾರ ಹುಡ್ಕೋದು ಹೇಳು ಎಂದ ಪರಮೇಶಿ.

'ಏಳಯ್ಯಾ ಪರಮೇಶಿ' ಎಂದೆ.

''ಅಯ್ಯೋ ರಾಮ ಏನಾಯ್ತು ನಿಂಗೆ. ಮಸಾಲೆ ಇಡ್ಲಿ ಕೊಡಿಸ್ತಾರೆ. ದಿವ್ನಾಗೆ ಕೂತು ಕತೆಕೇಳ್ದೆ.''

''ಅಷ್ಟರಲ್ಲಿ ಏನಾಗೋಯ್ತು?''

'ಏಳು ಅಂದ್ಮೇಲೆ ಏಳು' ಎಂದು ಹೊರಡಿಸಿದೆ. ಇಲ್ಲೇ ಬರ್ತೀವಿ ಬಾಗಿಲು ಹಾಕ್ಕೋ ಎಂದು ಹೇಳಿ ಹೊರಟೆವು. ಪರಮೇಶಿ ಕುರಿಯಂತೆ ಹಿಂಬಾಲಿಸಿದ.

ಹತ್ತು ನಿಮಿಷದಲ್ಲಿ ಅವರ ಮನೆ ತಲುಪಿದೆವು. ಕಾಲಿಂಗ್ ಬೆಲ್ ಒತ್ತಿದೆ. ಬಂದು ಬಾಗಿಲು ತೆರೆದರು. ಜುಬ್ಬ, ನೆಹರು ಪಾಯಿಜಾಮದ ಡ್ರೆಸ್ ಗುಂಡುಮುಖ, ಕಿರುಮೀಸೆ, ಹಿಂದಕ್ಕೆ ಬಾಚಿದ ಗುಂಗುರು ಕೂದಲು. ನೋಡಿದವರು ನಟನೆನ್ನುವುದಕ್ಕೆ ಅಡ್ಡಿಯಿಲ್ಲ. ಯುವನಟ ನಿರ್ದೇಶಕ, ಒಳ್ಳೆ ಜೋಷ್‌ನಲ್ಲಿದ್ದರು.

ಬನ್ನಿ, ಬನ್ನಿ ಮಿ. ರಾವ್. ಬಾಳ ದಿವಸ ವಾಗೋಯ್ತು ಎಂದ ಅವರು ಏಕಾಂತದ ಕೋಣೆಗೆ ಕರೆದೊಯ್ದರು. ಸಾರ್ ಇವರಲ್ಲಿ ತುಂಬಾ ಕತೆಗಳ ಸ್ಟಾಕಿದೆ, ಬಾಳ ರಿಸೋರ್ಸ್‌ಫುಲ್ ವ್ಯಕ್ತಿ. ನೀವು ತಕ್ಷಣ ಟಿವಿ ಸಿರಿಯಲ್ ಪ್ರಾರಂಭಿಸಬೇಕೆಂದಿದ್ದಿರಲ್ಲ ಅದಕ್ಕೆ ಕರ್ಕೊಂಡ್ ಬಂದೆ, 'ಪರಮೇಶಿ' ಅಂತ ಎಂದೆ.

'ಗೊತ್ತು ಗೊತ್ತು' ಅಂತಾ ಬಾಯಿ ತುಂಬ ನಕ್ಕರು. ಎಲ್ಲರಿಗೂ ಅವರು ಹೇಳೋದೆ ಹಾಗೆ. ಆದರೆ 'ಗೊತ್ತು, ಗೊತ್ತು' ಅಂದದ್ದಕ್ಕೆ ಪರಮೇಶಿ ಫುಲ್ ಖುಷಿಯಾದ.

ಪರಮೇಶಿ ನೀನು ಕತೆ ಹೇಳ್ತಿರು, ನಾನು ಸ್ವಲ್ಪ ಸಿಟಿಗೆ ಹೋಗಿ ಬರ್ತೇನೆ ಎಂದು ಎದ್ದೆ.

ಪರಮೇಶಿ ಕತೆ ಹೇಳಲು ಶುರುಮಾಡಿದ್ದಾನೆ, ಅವನು ಹೇಳುವ ಕತೆಗಳು ಬಣ್ಣಬಣ್ಣವಾಗಿ ಧಾರಾವಾಹಿ ರೂಪದಲ್ಲಿ ಹರಿದು ಬರಲಿದೆ. ನೋಡಲೂ ನೀವೂ ಸಿದ್ಧವಾಗಿರಿ.

✯

---

## ಅವರವರ ಕೆಲಸ

ಅಗಸನ ಬಳಿ ನಾಯಿ ಮತ್ತು ಕತ್ತೆ ಇದ್ದವು. ಒಂದು ರಾತ್ರಿ ಕಳ್ಳ ಮನೆಗೆ ನುಗ್ಗಿದ. ಅಗಸನಿಗೆ ಗಾಢ ನಿದ್ದೆ. ಆದರೆ ನಾಯಿ ಮತ್ತು ಕತ್ತೆ ಎಚ್ಚರವಿದ್ದವು. ಒಡೆಯ ನನ್ನನ್ನು ಸರಿಯಾಗಿ ನೋಡಿಕೊಳ್ಳುತ್ತಿಲ್ಲ ಎಂಬ ಅಸಮಾಧಾನದಿಂದ ನಾಯಿ ಬೊಗಳಲಿಲ್ಲ. ಆದರೆ ಕತ್ತೆಗೆ ಚಿಂತೆ ಆಯಿತು. ಅದೇ ಜೋರಾಗಿ ಅರಚಿತು. ಸದ್ದಿಗೆ ಹೆದರಿದ ಕಳ್ಳ ಓಡಿದ ಆದರೆ ಅಗಸನಿಗೆ ನಿದ್ರಾಭಂಗ ಆಯಿತು. ಸುಮ್ಮಸುಮ್ಮನೆ ಸರಿರಾತ್ರಿಯಲ್ಲಿ ಅರಚಿ ನಿದ್ದೆ ಹಾಳು ಮಾಡಿದೆ ಎಂದು ಕೋಪದಿಂದ ಕತ್ತೆಗೆ ಎರಡೇಟು ಬಿಗಿದ.

**ನೀತಿ: ಅವರವರ ಕೆಲಸ ಅವರವರೇ ಮಾಡಬೇಕು**

# ಅಣ್ಣಾವ್ರ ಅಭಿಮಾನಿ

**- ವೈ.ಎಂ. ರಘುನಂದನ್**

‘‘**ನಾ**ನಾಗೋ ಹೊತ್ತಿಗೆ, ನಿಮ್ಮ ಹತ್ತಿರ ತಾಳಿ ಕಟ್ಟಿಸಿಕೊಂಡಿರೋ ತಪ್ಪಿಗೆ, ಇನ್ನೂ ನಿಮ್ಮ ಜೊತೆನೇ, ಸಂಸಾರ ಮಾಡ್ಕೊಂಡಿದೀನಿ... ಇಲ್ಲಾಂದ್ರೆ....'' ನನ್ನಾಕೆ ಮಾಮೂಲಿ ಡೈಲಾಗ್ ಒಪ್ಪಿಸಿದಳು. ನಲ್ಲೀಲಿ ನೀರು ಬರದಿದ್ದರೆ, ಇದ್ದಕ್ಕಿದ್ದಂತೆ ಪವರ್ ಕಟ್ ಮಾಡಿದ್ದರೆ... ಮನೆ ಮುಂದೆ ಡ್ರೈನೇಜ್ ಪೈಪ್ ಒಡೆದಿದ್ದರೆ, ರಸ್ತೆ ಪದೇ ಪದೇ ರಿಪೇರಿ ನೆಪದಲ್ಲಿ, ಅಗಿದು ಗುಂಡಿ ಮಾಡಿದ್ರೆ, ನನ್ನಾಕೆ ನನ್ನನ್ನೇ ಹೊಣೆ ಮಾಡಿ ಆಡಿಕೊಳ್ಳೋದು ಕಾಮನ್. ಅದೇ ಅವಳ ಕಾಮನ್ ಸೆನ್ಸು, ಅವಳ ದೃಷ್ಟಿಯಲ್ಲಿ ನನಗಿರೋದು, ನಾನ್‌ಸೆನ್ಸ್ ಅಂತ.

‘‘ಇಲ್ಲಾಂದ್ರೆ... ಏನು ಮಾಡ್ತಿದ್ದಿ....'' ರೇಗಿಸಿದೆ.

‘‘ಮೂರು ಸಲ ತಲಾಖ್ ಹೇಳಿ... ಬೇರೆ ಮದುವೆ ಆಗ್ತಿದ್ದೆ'' ಎಂದಳು ಗರಂ ಆಗಿ.

‘‘ತಲಾಖ್ ಹೇಳಿ, ವಿಚ್ಛೇದನ ಪಡೆಯೋದು ಗಂಡಸರ ಹಕ್ಕು. ಅದೂ ಮುಸ್ಲಿಂರಿಗೆ ಮಾತ್ರ. ನಿನಗೆಲ್ಲಿ ಅಪ್ಲೈ ಆಗತ್ತೆ'' ನಕ್ಕಿದೆ.

‘‘ನಮ್ಮ ಮಹಿಳಾ ಸಂಘಟನೆಯಿಂದ, ಅದನ್ನೆ ಅಜೆಂಡಾ ಮಾಡಿಕೊಂಡು ಹೋರಾಡಲು ತಯಾರಿ ನಡೆಸ್ತಾ ಇದೀವಿ'' ವಿಷಯ ಲೀಕ್ ಔಟ್ ಆಗಿತ್ತು.

‘‘ನಿಮ್ಮ ಕೈಲಿ ಅದೆಲ್ಲ ಆಗದ ಮಾತು ಬಿಡು. ಇವೆಲ್ಲವೂ ಧರ್ಮದಲ್ಲಿ, ಅನೇಕ ಯುಗಗಳಿಂದ ನಡೆದು ಬಂದಿರುವ ರೀತಿ ರಿವಾಜು....'' ಎಂದೆ.

‘‘ಅಣ್ಣಾವ್ರು ಹೇಳಿಲ್ಲವೇ...'' ಎಂದಳು.

‘‘ಲಾ ಓದಿ, ಶ್ರೀಮಂತರ ಮನೆ, ಒಬ್ಬಳೇ ಮಗಳನ್ನು ಲಾಯರಿ ಅಂತ ಮದುವೆ ಆಗಿ, ಆರಾಮವಾಗಿರ್ತಾನೆ. ಒಂದು ಕೇಸೂ ಬಂದಿಲ್ಲ, ಗೆದ್ದಿಲ್ಲ.... ಅಂತಹ ನಿನ್ನ ಅಣ್ಣ ಅದೇನು ಹೇಳಿದ್ದಾನೆ.... ಪುಕ್ಕಟ್ಟೆ ಸಲಹೆ....'' ಎಂದೆ ಕೆಣಕಿ.

‘‘ಅಯ್ಯೋ ನಾ ಹೇಳ್ತಾ ಇರೋದು ನಮ್ಮಣ್ಣನಲ್ಲ! ನಮ್ಮ ನಿಮ್ಮೆಲ್ಲರ ಕೋಟಿ ಕೋಟಿ ಕನ್ನಡಿಗರ ದೇವರು ಡಾ. ರಾಜ್‌ಕುಮಾರ್ ಬಗ್ಗೆ....'' ಎಂದಳು ಅಭಿಮಾನದಿಂದ.

‘‘ಆ ಅಣ್ಣಾವ್ರ ಬಗ್ಗೆ ನಾ... ಏನು ಹೇಳಿದ್ದಾರೆ?'' ಕುತೂಹಲದಿಂದ ಕೇಳಿದ್ದೆ.

‘‘ಆಗದು ಎಂದು, ಕೈಲಾಗದು ಎಂದು ಕೈಕಟ್ಟಿಕುಳಿತರೆ ಸಾಗದು ಕೆಲಸವು ಮುಂದೆ... ಸಾಗದು ಕೆಲಸವು ಮುಂದೆ....'' ಇನ್ನೂ ಪಲ್ಲವಿಯೇ ಮುಗಿಸಿಲ್ಲ, ಬಾಗಿಲು ತೆಗೆದುಕೊಂಡು ರೂಮಿಂದ, ಕೋಪಿಸಿಕೊಂಡಿದ್ದ ಸೌಮ್ಯ ಬಂದಿದ್ದಳು. ಪುಸ್ತಕ ಕೈಯಲ್ಲಿತ್ತು.

‘‘ಇದೇನಮ್ಮ ನಿನ್ನ ರಾಗ. ನಾನು ಫೈನಲ್ ಇಯರ್ ಪರೀಕ್ಷೆಗೆ ಓದುತ್ತಿದ್ದೇನೆ. ಇಷ್ಟೊಂದು ಜೋರಾಗಿ ಹಾಡ್ತಾ ಇದ್ರೆ ಹೇಗೆ ಓದಲಿ. ಅದೂ ಕೆಟ್ಟರಾಗ, ಕೆಟ್ಟಸ್ವರದಲ್ಲಿ....'' ಎಂದಳು.

''ಹೆಸರು ಸೌಮ್ಯ, ಕೊಂಚವೂ ಸ್ಫುರಣೆಯೇ ಇಲ್ಲವಲ್ಲೆ. ನಾನಿಲ್ಲಿ ದೇಶದ ಆಗುಹೋಗು ಬಗ್ಗೆ ಗಹನವಾಗಿ ಚರ್ಚಿಸುತ್ತಿದ್ದೇವೆ...'' ಸುಶೀಲಳೂ ಗರಂ ಆಗಿ ರೇಗಿದಳು.

''ಏನಂತ ಗಹನ ವಿಚಾರ....''

''ಅದೇ ಹೆಣ್ಣು ಮಕ್ಕಳ ಹಕ್ಕು ಬಾಧ್ಯತೆ, ಗಂಡಸರ ದಬ್ಬಾಳಿಕೆ ವಿರುದ್ಧ....''

''ಸಾಕು ನಿಲ್ಲಿಸಮ್ಮ. ಅಪ್ಪಾಜಿ... ನಿವಾದ್ರೂ ಹೇಳಬಾರದೆ. ನೀವು ಹೀಗೆ ಡಿಸ್ಟರ್ಬ್ ಮಾಡ್ತಾ ಇದ್ರೆ ನಾನು ಓದೋದೇ ಬಿಟ್ಟುಬಿಟ್ಟು.... ತಾತ ಅಜ್ಜಿಗೆ ಫೋನ್ ಮಾಡಿ ಹೇಳ್ತಿನಿ....'' ಎಂದು ಸುಪ್ರೀಂ ಕೋರ್ಟಿಗೆ ಆಗಾಗ್ಗೆ ಜಯಲಲಿತ ಹೋಗುವಂತೆ, ಹೆದರಿಸಿ ಹೇಳಿದಳು. ನನ್ನಾಕೆಗೆ ತಂದೆ-ತಾಯಿ ಅಂದರೆ ಬಹಳ ಭಯ, ಭಕ್ತಿ ಮತ್ತು ಗೌರವ. ಸುಪ್ರೀಂ ಕೋರ್ಟಿಗೆ ಜಯಲಲಿತ ಹೋದಾಗಲೆಲ್ಲ.... ಕಾವೇರಿ ನೀರು ಬಿಟ್ಟಿದಾಯ್ತು. ಹಾಗೇ ಮೊಮ್ಮಗಳು ಸೌಮ್ಯ ದೂರಿತ್ತರೆ ಸಾಕು.... ಅವಳ ಅಜ್ಜಿ-ತಾತ ಅವಳ ಪರ ಬ್ಯಾಟಿಂಗ್ ಆಡಲು ಬರುತ್ತಾರೆ.

ಇದೀಗ ನಾನೇ ಉಪಾಯವಾಗಿ ನಾರೀ ಮನ್ ತರಹ ನನ್ನ ನಾರಿ ಮನ ಗೆಲ್ಲಲು... ಹೇಳಿದ್ದೆ ''ಮಗಳೇ ಸೌಮ್ಯ ಪುಟ್ಟೀ.... ಮಹಡಿ ಮೇಲಿನ ಅತಿಥಿಗಳ ಕೋಣೆ ಖಾಲಿ ಇದೆ. ಅಲ್ಲಿ ಹೋಗಿ ಬಾಗಿಲು ಹಾಕಿಕೊಂಡು ಓದು'' ನನ್ನವಳ ಕಡೆ ತಿರುಗಿ ''ದಯವಿಟ್ಟು ಮೆಲ್ಲಗೆ ಮಾತಾಡು ಸುಶೀ... ಹಾಡು, ಹಸೆ ಬೇಡ. ಮದುವೆಗೆ ಮುಂಚೆ, ಹೆಣ್ಣು ನೋಡಲು ಬಂದಿದ್ದಾಗಲೇ, ನಿನಗೆ ತಿಳಿಸಿ ವಾಗ್ದಾನ ಪಡೆದಿದ್ದೇನೆ. ಇನ್ನು ಮುಂದೆ ಹಾಡಬಾರದೆಂದು...'' ಎಂದಿದ್ದೆ. ಅದು ಕಳೆದು ಹೋದ ವಿಚಾರ ಎಂಬಂತೆ ಹೇಳಿದಳು.

ಸೌಮ್ಯ ಮಹಡಿ ಹತ್ತಿ ಅತಿಥಿ ರೂಂಗೆ ಹೋಗಿ ಜೋರಾಗಿ ಬಾಗಿಲು ಮುಚ್ಚಿದಳು, ಅಮ್ಮನ ಮೇಲಿನ ಕೋಪ ಬಾಗಿಲ ಮೇಲೆ ತೋರುತ್ತ.

''ಸುಶೀ... ಹಾಡು ಚೆನ್ನಾಗಿ ಹಾಡಲು ಬಾರದಿದ್ದರೇನು ಅಡಿಗೆ ಚೆನ್ನಾಗಿ ಮಾಡ್ತಿ, ಹೋಗಿ ಒಂದು ಕಪ್ ಕಾಫಿ ತಾ'' ಎಂದೆ.

''ನಿಮ್ಮ ಹೊಗಳಿಕೆಗೆ ನಾನು ಬಲೆ ಬೀಳೋಲ್ಲ. ಈ ದಿನ ನೀವೇ ಅಡಿಗೆ ಮಾಡಿ... ನಿಮ್ಮ ಮುದ್ದಿನ ಮಗಳು ಊಟಕ್ಕೆ ಬರ್ತಾಳಲ್ಲ ಆಗ ಅವಳಿಗೆ ಅಮ್ಮನ ಕೈ ಗುಣ ಗೊತ್ತಾಗಲಿ...'' ಎಂದಿದ್ದಳು ಪತ್ನಿ.

''ಅಯ್ಯೋ, ಹೆಂಗಸ್ರು ಅಂದ್ರೆ ಅಡಿಗೆಗೆ ಫೇಮಸ್ಸು. ಅನ್ನಪೂರ್ಣೇಶ್ವರಿ ಅಂತಾರೆ... ಗಂಡನು ನನ್ಗೇನು ಬರುತ್ತೆ... ಎಂದೆ.

''ಅಣ್ಣಾವ್ರು ಹೇಳಿಲ್ಲವೇ...'' ಎಂದಳು ಅಭಿಮಾನಿ.

''ಏನಂತ್ಲೆ ಸುಶೀ...'' ಎಂದೆ.

''ಭೀಮ ಸೇನ, ನಳಮಹಾರಾಜರು ಗಂಡಸರಲ್ಲವೇ... ನಿಮ್ಮ ಹಾಗೆ ಮೀಸೇ ಹೊತ್ತ ಮಹನೀಯರಲ್ಲವೇ...? ಏನ್ರೀ ಮನೇಲಿ ಸಮಾರಂಭ ಆದರೆ ಮದುವೆ ಮುಂಜಿ ಆದರೆ... ಹೋಟಲ್ ಕಿಚನ್‌ಗಳಲ್ಲಿ ಹೆಂಗಸ್ರು ಅಡಿಗೇಯವರು ಹೆಚ್ಚಾಗೆ ಇರ್ತಾರೆಯೇ...? ಹೋಗಿ ಅಡಿಗೆ, ತಿಂಡಿ ಮಾಡಿ'' ಎಂದಳು ಪಟ್ಟು ಹಿಡಿದು.

''ಅದಕ್ಕೆಲ್ಲಾ ಟ್ರೈನಿಂಗ್ ಬೇಕು ಬಂಗಾರಿ...'' ಎಂದೆ ತೇಪೆ ಹಾಕುತ್ತ.

''ಪ್ರಯತ್ನ ಆರಂಭಿಸಿ ಮಾಡ್ತಾ ಮಾಡ್ತಾ ಅಡಿಗೆ, ಹಾಡ್ತ ಹಾಡ್ತ ರಾಗ...'' ಮತ್ತೆ ಹಾಡು, ರಾಗದ ಸುದ್ದಿ ಬಂದಿತ್ತು.

''ಹಾಡ್ತ ಹಾಡ್ತ ರಾಗ ಅಲ್ಲ ಸುಶೀ, ಅದು ನರಳತಾ ನರಳತಾ ರೋಗ ಅಂತಾರಲ್ಲ ಹಾಗಿರುತ್ತೆ. ಹೋಗಿ ಕಾಫಿ ತಾ ಬಂಗಾರಿ'' ಎಂದೆ ಪುಸಲಾಯಿಸುತ್ತ. ಕಾಫಿ ತಂದಿತ್ತಳು.

''ಬಾಯಲ್ಲಿ ಮಾತ್ರ ಬಂಗಾರಿ... ಬಂಗಾರಿ ಅಂತೀರ. ಮದುವೆ ನಂತರ ಒಂದಾದರೂ ಆಭರಣ ತಂದು ಕೊಟ್ಟಿದ್ದೀರಾ? ಎಲ್ಲಾ ತವರು ಮನೇದು, ನಿಮ್ಮ ತಾಯಿ ಕೊಟ್ಟಿದ್ದು, ನಾನು ಉಳಿಸಿ ಮಾಡಿಸಿಕೊಂಡದ್ದು....'' ಎಂದಳು ಸುಶೀ. ವಿಚಾರ ಬೇರೆ ಕಡೆ ತಿರುಗುತ್ತಿದೆ, ಎಚ್ಚರ ಜಾಗೃತಿ ಎಂಬ ವಿವೇಕಾ(!) ವಾಣಿ ಒಳಗಿಂದ ಕೇಳಿ ಬಂತು. ವಿಷಯ ಬದಲಾಯಿಸಿ ಹೇಳಿದೆ.

''ಅಂದ ಹಾಗೆ ನಿಮ್ಮ ಮಹಿಳಾ ಸಂಘದ ಅಜೆಂಡಾ ಹೇಗೆ ಸಾಗಿದೆ? ಫಲಿತಾಂಶ ಹೇಗಿದೆ...'' ವಿಚಾರಿಸಿದೆ.

''ಅದೇರಿ, ಒಂದೊಂದಾಗಿ ಗೆಲ್ತಾ ಬಂದಿದೀವಿ. ಹಿಂದೆ ಶಬರಿಮಲೆಗಾಗಲಿ, ದರ್ಗಗಳಿಗಾಗಲಿ.... ಮಹಿಳೆಯರು ಹೋಗುವಂತಿಲ್ಲ ಎಂದಿದ್ದರು. ಕೋರ್ಟ ಆದೇಶ ತಂದು ಹೋಗಿದ್ದಾಯ್ತು. ಶಹಬಾನು ಕೇಸು ಗೊತ್ತಿದೆ. ಹಾಗೇ ತಲಾಖ್ ಬಗ್ಗೆ ಚರ್ಚೆ ಆರಂಭಿಸಿದ್ದೇವೆ. 50% ರಿಜರ್ವೇಷನ್ ಎಲ್ಲಾ ಕಡೆ ಕೇಳ್ತಾ ಇದೀವಿ. ಉದ್ಯೋಗದಲ್ಲಿ ಎಲ್ಲಾ ಕಡೆ ಮುಂದುವರೀತಾ ಇದೀವಿ. ಏರೋಪ್ಲೇನ್ ಬಿಡೋಕೆ, ಮಹಿಳಾ ಪೈಲೆಟ್‌ಗೆ, ಒಪ್ಪಿಗೆ ಸಿಕ್ಕಿರಲಿಲ್ಲ. ಈಗ ನೋಡಿ ಅದಕ್ಕೂ...''

''ಅಂದರೆ ಪೋಲಿಸ್ ಸ್ಟೇಷನ್‌ಗಳಲ್ಲಿ, ಇನ್‌ಸ್ಪೆಕ್ಟರ್‌ಗಳಾಗಿ ಏರೋಪ್ಲೇನ್ ಎತ್ತೋದರಿಂದ ಹಿಡಿದು... ಆಗಸದಲ್ಲಿ ಏರೋಪ್ಲೇನ್ ಹಾರಿಸೋವರೆಗೂ... ಮುಂದುವರಿದಿದ್ದೀರಿ... ಬೇಷ್'' ಎಂದೆ.

''ಗಂಡಸರು ಮಾಡ್ತಿದ್ದ ದೀಪದ ಕಂಭ ಹತ್ತೋದು, ಬಸ್ಸು ಆಟೋ, ಟ್ಯಾಕ್ಸಿ ಬಿಡೋದು, ಕಳ್ಳರನ್ನ ಹಿಡಿದು ಒದ್ದು ಒಳ ಹಾಕೋದು, ಟೀಚಿಂಗ್, ಪ್ರೀಚಿಂಗ್, ಫೈಟಿಂಗ್, ಸಿಂಗಿಂಗ್, ಡ್ಯಾನ್ಸಿಂಗ್, ಪಿ.ಎಂ., ಸಿ.ಎಂ. ಏನೇನು ಬೇಕೋ ಎಲ್ಲಾ ಆಗಿಲ್ಲವೇ ಹೇಳಿ. 120 ಕೋಟಿ ಜನಸಂಖ್ಯೆಯಲ್ಲಿ ಗಂಡಸರೇ ಹೆಚ್ಚಾಗಿರುವಲ್ಲಿ... ಒಲಂಪಿಕ್‌ನಲ್ಲಿ ಮಾನ ಉಳಿಸಿ ಮೆಡಲು ತರಲು ಹೆಣ್ಣು ಮಕ್ಕಳೇ ಬೇಕಾಯ್ತು...'' ಎಂದು ಮೂತಿ ತಿವಿದಳು ಸುಶೀ.

''ಇದೇ ರೇಂಜ್‌ನಲ್ಲಿ ನೀವು ಮುಂದುವರಿದಿದ್ದೇ ಆದರೆ ಅದು ಆರಂಭವಾಗುವ ಕಾಲ ದೂರ ಉಳಿದಿಲ್ಲ...'' ಎಂದೆ ಸೀರಿಯಸ್ ಆಗಿ.

''ಯಾವುದು ಆರಂಭವಾಗುವ ಕಾಲ...'' ಕುತೂಹಲದಿಂದ ಕೇಳಿದ್ದಳು ಸುಶೀ.

ಸೌಮ್ಯಳಿಗೆ ಕೇಳದಿರಲಿ ಎಂದು ಮೆಲ್ಲಗೆ ಪಿಸುಗುಟ್ಟಿ ಹೇಳಿದ್ದೆ. ''ಗಂಡಸರ ಹೆರಿಗೆ ಆಸ್ಪತ್ರೆ ಆರಂಭ'' ಎಂದು.

☆

# ಇಲ್ಲಿರುವುದು ಸುಮ್ಮನೆ...

**- ಎಂ.ಕೆ. ಭಾಸ್ಕರ ರಾವ್**

**ಈ** ನಟ ಈಗಲೂ ಬೇಡಿಕೆಯಲ್ಲಿರುವ ಮಾಗಿದ ಕಲಾವಿದ. ಯಾವ ಪಾತ್ರಕ್ಕೂ ಜೀವ ತುಂಬ ಬಲ್ಲಷ್ಟು ಸಮರ್ಥ. ನಿರ್ದೇಶಕನ ನಟ, ನಿರ್ದೇಶಕನ ಸಾಮರ್ಥ್ಯಕ್ಕೆ ತಕ್ಕಂತೆ ನಟಿಸಿ ಸೈ ಎನಿಸಿಕೊಳ್ಳಬಲ್ಲ ಪ್ರತಿಭಾವಂತ. ಚಿತ್ರೋದ್ಯಮದಲ್ಲಿರುವವರಿಗೆ ವಯಸ್ಸಾಗುತ್ತದೆ ಆದರೆ ಬುದ್ಧಿಯೂ ಬೆಳೆಯುತ್ತದೆಂಬುದಕ್ಕೆ ನಿದರ್ಶನ ಕಡಿಮೆ. ಅಪರೂಪದ ಈ ನಟನನ್ನು ಮಾತ್ರ ವಯೋವೃದ್ಧರೂ ಜ್ಞಾನವೃದ್ಧರೂ ಎಂದು ಉದ್ಯಮ ಒಪ್ಪುತ್ತದೆ. ಸದ್ಯಕ್ಕಂತೂ ಕನ್ನಡ ಚಿತ್ರ ರಂಗದಲ್ಲಿ ಅವರಿಗೆ ಅವರೇ ಸಾಟಿ.

ಹೀರೋ ಆಗಿ ಬಂದವರು ಕ್ರಮೇಣ ಜೀರೋ ಆಗಿರುವ ವೈಪರೀತ್ಯವನ್ನು ನಾವು ನೋಡುತ್ತಿದ್ದೇವೆ. ಸಾಯುವವರೆಗೂ ಹೀರೋ ಆಗಿರುವ ಭ್ರಮೆಯಲ್ಲಿ ಕೆಲವರು ಅತಂತ್ರ ಪಿಶಾಚಿಗಳಂತೆ ಅಂಡಲೆಯುತ್ತಿರುತ್ತಾರೆ. ಈ ನಟ ಹಾಗಲ್ಲ, ನಾಯಕನಾಗೇ ಉದ್ಯಮದ ಹೊಸಿಲು ತುಳಿದರು; ಐವತ್ತರವತ್ತು ಚಿತ್ರಗಳಲ್ಲಿ ನಾಯಕನಾಗಿ ಮೆರೆದರು. ವಯಸ್ಸಾಗುತ್ತ ಬಂದಂತೆ ಅದಕ್ಕೆ ಒಪ್ಪುವ ಪಾತ್ರಗಳಲ್ಲಿ ಅಭಿನಯಿಸುತ್ತ ಹೆಸರು ಮರ್ಯಾದೆ ಎರಡನ್ನೂ ಉಳಿಸಿಕೊಂಡವರು.

ನಮ್ಮ ಕನಾ, ನಾಯಕನಾಗಿದ್ದ ದಿನಗಳಲ್ಲಿ ದೂರದೂರಿನ ಕಲಾವಿದೆಯೊಂದಿಗೆ ಅವರ ಹೆಸರು ತಳಕು ಹಾಕಿಕೊಂಡಿತ್ತು. ಇಲ್ಲಿ ಬೆಂಗಳೂರಿನಲ್ಲಿ ಹೋಟೆಲು ರೂಮಿನಲ್ಲಿರುತ್ತ ಚಿತ್ರೀಕರಣದ ಸಮಯದಲ್ಲಿ ಪ್ರೊಡಕ್ಷನ್‌ನವರು ಕೊಡುವ ತಿಂಡಿ, ಊಟವನ್ನೂ, ಹೋಟೆಲಿನ ಅನ್ನ ಸಾಂಬಾರನ್ನೂ ನೆಚ್ಚಿಕೊಂಡಿದ್ದ ನಮ್ಮ ಕನಾಗೆ ಆಗೀಗ ದೂರದೂರಿನಿಂದ ಅವರ ಗೆಳತಿ, ಚಪಾತಿ, ಪರೋಟವೇ ಮುಂತಾದ ನಾಲ್ಕು ದಿನ ಇಟ್ಟುಕೊಂಡು ಸೇವಿಸಬಹುದಾದ ತಿನಿಸುಗಳನ್ನು ಆ... ಈ... ಚಟ್ನಿಪುಡಿಯಂಥ ವ್ಯಂಜನದೊಂದಿಗೆ ಪಾರ್ಸೆಲ್ ಮಾಡುತ್ತಿದ್ದರು.

ಗೆಳತಿ ಕಳಿಸಿದ್ದನ್ನು ಕನಾ ಒಬ್ಬರೇ ಮುಕ್ಕುತ್ತಿರಲಿಲ್ಲ, ಒಬ್ಬಿಬ್ಬರು ಆಪ್ತ ಗೆಳೆಯರೊಂದಿಗೆ ಹಂಚಿಕೊಂಡು ತಿನ್ನುತ್ತ, ಸ್ನೇಹಿತೆ ಕಳಿಸಿದ್ದು ಎಂದು ಅಭಿಮಾನದಿಂದ ಹೇಳುತ್ತ ರುಚಿಯನ್ನು ಸವಿಯುತ್ತಿದ್ದರು. ಗಾಸಿಪ್ ಹಂತ ದಾಟಿದ್ದ ಪ್ರೇಮ ಪ್ರಕರಣ ಅದು. ಇಂದಲ್ಲ ನಾಳೆ ಕನಾ, ಆಕೆಯನ್ನೇ ಮದುವೆಯಾಗಲಿದ್ದಾರೆಂದು ಸಿನಿ ಸುದ್ದಿಯೂ ಹರಡಿತ್ತು.

ಈಗ ನಾವೆಲ್ಲರೂ ಮೊಬೈಲ್ ಧಾರಿಗಳು. ನೆಟ್‌ವರ್ಕ್ ಇರುವ ಎಲ್ಲಿಂದ ಎಲ್ಲಿಗೆ ಬೇಕಾದರೂ ನಮ್ಮ ಬೆರಳ ತುದಿಯಲ್ಲೇ ಟೆಲಿ ಸಂಪರ್ಕವಿದೆ. ಆ ಸೌಲಭ್ಯದೊಂದಿಗೆ ಮೊಬೈಲ್ ಕಂಪನಿಗಳು ಗ್ರಾಹಕರಿಗೆ ಉಚಿತವಾಗಿ ನೀಡಿರುವುದು ಕಾಲ್‌ಡ್ರಾಪ್ ಎಂಬ ಅವ್ಯವಸ್ಥೆ. ನಾವೆಲ್ಲ ತಕರಾರಿಲ್ಲದೆ ಒಪ್ಪಿಕೊಂಡಿರುವ ತಲೆನೋವು ಇದು. ಮೂರು ನಾಲ್ಕು ಸೆಕೆಂಡ್‌ಗೆಲ್ಲ ಕಾಲ್‌ಡ್ರಾಪ್ ಆಗಿ, ಅದಕ್ಕೆ ಒಂದು ನಿಮಿಷದ ಕರೆಯ ದರವನ್ನು ಮೊಬೈಲ್ ಕಂಪೆನಿಗಳು ವಿಧಿಸುತ್ತಿದ್ದರೂ ರೇಗದೆ, ರೇಜಿಗೆಯನ್ನು ಒಪ್ಪಿಕೊಂಡವರು. ಆ ದಿನಗಳಲ್ಲಿ ಎಸ್‌ಟಿಡಿ ಸೌಲಭ್ಯವೂ ಇರಲಿಲ್ಲ, ಮೊಬೈಲ್ ಕನಸಿನಲ್ಲೂ ಇರಲಿಲ್ಲ. ದೂರವಾಣಿ ಇಲಾಖೆಗೆ ನಂಬರ್ ಕೊಟ್ಟು ಟ್ರಂಕ್ ಡಯಲಿಂಗ್ ಮಾಡಿಸಿಕೊಂಡು ಪರಸ್ಪರ ಮಾತಾಡುತ್ತಿದ್ದ ಕಾಲ.

ಆಗ...? ಅದು ಮತ್ತೊಂದು ಬಗೆಯ ಕಿರಿಕಿರಿ. ಸಂಪರ್ಕ ಸಿಕ್ಕರೂ ಟ್ರಂಕ್ ಕಾಲ್ ಪದೇ ಪದೇ ಕಟ್ ಆಗುತ್ತಿತ್ತು. ಗೊರಗೊರ ಸದ್ದು ಮಾತಿನ ಮಾಧುರ್ಯ ಕಸಿಯುತ್ತಿತ್ತು. ಇನ್ಯಾರೋ ಮಾತನಾಡುವುದು ಓವರ್‌ಲ್ಯಾಪ್ ಆಗುತ್ತಿತ್ತು. ನಾವು ಬಯಸಿದವರ ಧ್ವನಿಯ ಬದಲಿಗೆ ಪ್ರೇಮಿಗಳಿಬ್ಬರ ಆಪ್ತ ಸಂವಾದ ಮಧ್ಯೆ ತೂರಿ ಬಂದಾಗ ಟ್ರಂಕ್ ಕಾಲ್ ಮಾಡಿದ್ದು ಸಾರ್ಥಕ ಎಂಬ ಸಮಾಧಾನವೂ ಇರುತ್ತಿತ್ತು.

ಇಂಥ ಸಂಕಟ ಮತ್ತು ಆಗಾಗ ಎದುರಾಗುವ ಯಾರದೋ ಪ್ರೇಮ ಸಲ್ಲಾಪದ ಸಂತೋಷವನ್ನು ಅನುಭವಿಸುತ್ತ ನಮ್ಮ ಕನಾ, ದೂರದೂರಿಗೆ ರಾತ್ರಿ ಅದೆಷ್ಟೋ ಹೊತ್ತಿನಲ್ಲಿ ಟ್ರಂಕ್ ಕಾಲ್ ಮಾಡಿ, ಅದೂ ಇದೂ ಮಾತುಕತೆ ನಡೆಸುತ್ತಿದ್ದರು. ಇಡೀ ದಿನದ ಶೂಟಿಂಗ್‌ನಿಂದ ದಣಿದಿದ್ದರೂ ಟ್ರಂಕ್ ಕಾಲ್ ಮಾಡಿ ಸ್ನೇಹಿತೆಯೊಂದಿಗೆ ಮಾತನಾಡುವುದು ಅವರ ಅತ್ಯಂತ ಪ್ರಿಯ ಹವ್ಯಾಸಗಳಲ್ಲಿ ಒಂದಾಯಿತು. ಕ್ರಮೇಣ ಇದು ನಿತ್ಯ ವಿಧಿಯೂ ಆಯಿತು.

ಚಿತ್ರೀಕರಣ ನಡೆಯುವ ಸ್ಥಳದ ಸಮೀಪದಲ್ಲಿ ಪೋಸ್ಟ್ ಆಫೀಸ್ ಇದ್ದರೆ ನಿರ್ಮಾಪಕ, ನಿರ್ದೇಶಕರ ಕಥೆ ಪೇಚಾಟಕ್ಕೆ ತಿರುಗುತ್ತಿತ್ತು. ಚಿತ್ರೀಕರಣದ ಮಧ್ಯೆ ಮಧ್ಯೆ ಬಿಡುವು ಸಿಕ್ಕಾಕ್ಷಣವೇ ಕನಾ, ಪೋಸ್ಟ್ ಆಫೀಸ್‌ಗೆ ದೌಡಾಯಿಸಿ ಟ್ರಂಕ್ ಕಾಲ್ ಬುಕಿಂಗ್ ಮಾಡಿಕೊಂಡು ಸಂಪರ್ಕಕ್ಕೆ ಕಾಯುತ್ತಿದ್ದರು. ಸಹಾಯಕ ನಿರ್ದೇಶಕ ಬಂದು ಶಾಟ್ ರೆಡಿ ಎಂದರೂ ಈ ಮಹರಾಯ ಟ್ರಂಕ್ ಕಾಲ್‌ಗೆ ಕಾಯುತ್ತಿದ್ದರು.

ವಾಣಿಜ್ಯಕ ಚಲನ ಚಿತ್ರಗಳಲ್ಲಿ ಕ್ಲೈಮ್ಯಾಕ್ಸ್ ಸೀನು ಎಂಬುದೊಂದಿರುತ್ತದೆ. ಇಡೀ ಕಥೆಗೆ ಅದು ಶೃಂಗಪ್ರಾಯ ಎನ್ನುವುದು ಉದ್ಯಮದಲ್ಲಿರುವವರ ನಂಬಿಕೆ. ನಮ್ಮ ಕನಾ, ಪ್ರೇಮ ಪ್ರಕರಣದ ಕ್ಲೈಮ್ಯಾಕ್ಸ್ ಹೀಗಾಯಿತು, ಓದಿ.

ವಿಮಾನ ನಿಲ್ದಾಣದ ಸಮೀಪ ಅವತ್ತು ಬೆಳಗಿನಿಂದಲೂ ಚಿತ್ರೀಕರಣ. ಮಧ್ಯಾಹ್ನ ಒಂದು ಒಂದೂವರೆ ಹೊತ್ತಿಗೆ ಒಂದು ತಾಸು ಅವಧಿಯ ಲಂಚ್ ಬ್ರೇಕ್. ಕನಾ, ಊಟ ಮಾಡಲಿಲ್ಲ. ಒಮ್ಮೊಮ್ಮೆ ಹೊರಗಡೆ ಊಟ ಮಾಡುವ ಅವರ ಅಭ್ಯಾಸ ಗೊತ್ತಿದ್ದ ಕಾರಣ ಯಾರೂ ಯೋಚನೆ ಮಾಡಲಿಲ್ಲ. ಆದರೆ ಬ್ರೇಕ್ ಬಳಿಕದ ಶಾಟ್‌ಗೆ ಅವರು ಬರಲೇ ಇಲ್ಲ. ಹತ್ತಿರದಲ್ಲೇ ಇದ್ದ ಪಂಚತಾರಾ ಹೋಟೆಲಿನ ಗುಂಡಂಗಡಿಯಲ್ಲಿ ಇದ್ದಿರಬಹುದೆಂದು ಹುಡುಕಿಸಿದರೂ ಪ್ರಯೋಜನವಾಗಲಿಲ್ಲ.

ಎಲ್ಲೆಲ್ಲಿ ಹುಡುಕಿದರೂ ಊಹೂಂ ಪತ್ತೆ ಆಗಲಿಲ್ಲ. ಅವರ ಅಗತ್ಯವಿಲ್ಲದ ಕೆಲ ಸೀನುಗಳನ್ನು ನಿರ್ದೇಶಕರು ಚಿತ್ರೀಕರಿಸಿಕೊಂಡರು. ಈ ಹಂತದಲ್ಲಿ ಕನಾ, ಕಾರು ಬಂತು. ಹೀರೋ ಬಂದರೆಂಬ ಸಮಾಧಾನದಲ್ಲಿ ಚಿತ್ರ ತಂಡ ನಿರುಮ್ಮಳವಾಯಿತು. ಆದರೆ ಡ್ರೈವರ್ ಮಾತ್ರ ಬಂದಿದ್ದ, ಏನೋ ಸಂದೇಶ ಹೊತ್ತವನಂತೆ ನಿರ್ದೇಶಕರ ಮುಖ ನೋಡಿದ. ಎರಡು ದಿನ ಶೂಟಿಂಗ್‌ಗೆ ಬಾಸ್ ಬರೋಲ್ವಂತೆ, ನಿಮಗೆ ತಿಳಿಸಾಕೆ ಹೇಳಿದ್ದಾರೆ ಸಾರ್ ಎಂದ ಡ್ರೈವರ್ ಉತ್ತರಕ್ಕೆ ಕಾಯದೆ ಕಾರ್ ಹತ್ತಿದ.

ಚಿತ್ರೀಕರಣ ನಡೆಯುತ್ತಿದ್ದ ಸ್ಥಳದ ಮಗ್ಗುಲಲ್ಲೇ ಏರ್‌ಪೋರ್ಟ್ ಇತ್ತಲ್ಲ, ಲಂಚ್ ಬ್ರೇಕ್ ನೆಪದಲ್ಲಿ ಹೊರಬಂದ ಕನಾ, ಗೆಳತಿಯ ಊರಿನ ವಿಮಾನವನ್ನು ಹತ್ತಿ ಹಾರಿ ಹೋಗಿದ್ದರು. ಇದು ಎರಡು ಮೂರುಬಾರಿ ಆದ ನಂತರ ಅವರಿದ್ದ ಸನ್ನಿವೇಶದ ಚಿತ್ರೀಕರಣ ಇನ್ನೆಲ್ಲೋ ಏರ್‌ಪೋರ್ಟ್‌ಗೆ ದೂರದ ಸ್ಥಳದಲ್ಲಿ ನಡೆಯುವುದು ಸಾಮಾನ್ಯವಾಯಿತು.

✮